CC-O. In Public Domain. Digitized by eGangotri

ದಕ್ಷಿಣಾಮ್ನಾಯ
ಶೃಂಗಗಿರಿಶ್ರೀಶಾರದಾಜಗದ್ಗುರುಮಹಾಸಂಸ್ಥಾನಂ ।
ಶಾಸ್ತ್ರಸಂಪ್ರದಾಯಸಿದ್ಧತತ್ತ್ವಗ್ರಂಥಾವಳಿಃ ।
ಶ್ರೀಶಾಂಕರಜ್ಞಾನಾಮೃತಭೃಂಗಾರಃ ।
(ಶ್ರೀಶಂಕರಭಗವತ್ಪಾದರವರ ಉಪದೇಶಾಮೃತದಿಂದ ತುಂಬಿರುವ
ಚಿನ್ನದ ಬಟ್ಟಲು)

ಶೃಂಗಗಿರಿ ಶ್ರೀಶಾರದಾಮಹಿಮಾದರ್ಶಃ ।

೧೯೮೦

ಲೇಖಿಕಃ—
ಶೃಂಗಗಿರಿ ಕವಿ ನರಸಿಂಹಶರ್ಮಾ
" ಆದ್ಯೈತಾತ್ಪರ್ಯಮಃ "
ಖಿ 'ರಮಾ', ಶ್ರೀಲಕ್ಷ್ಮೀಗ್ರಹಾರಃ,
ನಂಜನಗೂಡು-೫೭೧೩೦೧

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಖಿಲಜಗದೇಕಾಧಿಪತಿಯಾಗಿರುವ ಶ್ರೀಪರಮೇಶ್ವರನು ಲೋಕದ ಇಹಪರಗಳ ಶ್ರೆಯೋಽಭ್ಯುದಯಗಳಿಗಾಗಿ ವೈದಿಕಸನಾತನವರ್ಣಾಶ್ರಮ ಧರ್ಮನಿಯಮಗಳನ್ನು ಲೋಕದಲ್ಲಿ ಪ್ರಚಾರಮಾಡಿರುತ್ತಾನೆ. ಇದು ಕ್ಷೀಣಿಸಿ ಲೋಕಕ್ಕೆ ಹಾನಿಯುಂಟಾಗುವ ಸಂದರ್ಭವು ಉಂಟಾದಾಗ ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರು ಅವತರಿಸಿಬಂದು, ಅನಿತರ ಸಾಧಾರಣಗಳಾದ ಪ್ರಯತ್ನವಿಶೇಷಗಳಿಂದ ವೈದಿಕವರ್ಣಾಶ್ರಮಧರ್ಮವನ್ನು ಪ್ರಮಾಣಯುಕ್ತ್ಯನುಭವಗಳ ಸಾಮರಸ್ಯವನ್ನು ತೋರಿಸಿಕೊಟ್ಟು ಪುನರುಜ್ಜೀವನಗೊಳಿಸಿರುವುದು ಸುಪ್ರಸಿದ್ಧವೇ ಆಗಿದೆ!

ಕಲಿಕಾಲದ ಪ್ರಾಬಲ್ಯದಿಂದ ಈಗ ಮತ್ತೆ ಜಾಂತಧ್ವಾಂತಮತಗಳ. ಹಾಗೆಯೇ ಮತಿದೌರ್ಬಲ್ಯನಿಮಿತ್ತಗಳಾದ ಹಲವಾರು ಮತಪ್ರಭೇದಗಳ ಪ್ರಚಾರಗಳಿಂದ ಆದ ಅಲ್ಪಮತಿಗಳ ಅವಲಂಬನೆಗಳಿಂದ ವರ್ಣಾಶ್ರಮಧರ್ಮನಿಯಮಗಳಿಗೆ ಅತಿಶಯವಾದ ಹಾನಿಯು ಸಂಭವಿಸಿರುತ್ತದೆ. ಆದಕಾರಣ ಶ್ರೀಭಗವತ್ಪಾದರವರ ಉಪದೇಶಗಳ ಪ್ರಚಾರವು ಈಗ ವಿಶೇಷವಾಗಿ ಅವಶ್ಯವಾಗಿರುತ್ತದೆ!!

ಈ ಸ್ಥಿತಿಯನ್ನು ಪರಿಶೀಲಿಸಿ ಹಲವರು ಶ್ರದ್ಧಾಳುಗಳು ಶ್ರೀಭಗವತ್ಪಾದರ ಉಪದೇಶಗಳನ್ನು ಪ್ರಚಾರಮಾಡಲು ಯತ್ನಶೀಲರಾಗಿರುವುದು ಕಂಡುಬರುತ್ತದೆ. ಆದರೆ, ಇವರಲ್ಲಿ ಅನೇಕರು ಶ್ರೀಭಗವತ್ಪಾದರ ಉಪದೇಶಗಳನ್ನು ಸರಿಯಾಗಿ ತಿಳಿಯಲಾರದೆ ಅಪಾರ್ಥವಾಗಿಯೇ ಪ್ರಕಟಿಸುತ್ತಿರುವರು; ಮತ್ತೆ ಕೆಲವರಂ ಅನಾದಿಸಿದ್ಧವಾಗಿರುವ ಸಾಂಪ್ರದಾಯಿಕಾರ್ಥಕ್ಕೆ ಅನನುಗುಣವಾಗಿ ಪ್ರಚಾರಮಾಡುತ್ತಿರುವರು. ಇದರಿಂದ ಲೋಕಕ್ಕೆ ವಿಶೇಷವಾಗಿ ಅನರ್ಥವೇ ಆಗುವಂತಾಗಿರುತ್ತದೆ.

ಇದನ್ನು ಪರಿಭಾವಿಸಿ, ಲೋಕಹಿತೈಷಿಗಳಾಗಿ ಧರ್ಮರಕ್ಷಣೈಕಬದ್ಧಾ

CC-O. In Public Domain. Digitized by eGangotri

ದರರಾಗಿರುವ ಶ್ರೀಶೃಂಗಗಿರಿ ಶ್ರೀಶಾರದಾಮಹಗದ್ಗುರು ಮಹಾಸನ್ನಿಧಾನವರ ಆಜ್ಞಾಪಿಸಿರುವಂತೆ ಶಾಸ್ತ್ರೀಯಸದುಪದೇಶಗಳನ್ನು ಅನಾದಿಸಂಪ್ರದಾಯ ಸಿದ್ಧವಾಗಿರುವಂತೆ ಪ್ರಚಾರಮಾಡಲು ಉದ್ಯುಕ್ತನಾಗಿದ್ದೇನೆ. ವಿಚಾರ ಕುಶಲರಾದ ಶ್ರದ್ಧಾವಂತಶ್ರೇಯಸ್ಕಾಮಿಗಳು ಈ ಗ್ರಂಥಗಳನ್ನು ಯಥಾವ ತ್ತಾಗಿ ತಿಳಿದುಕೊಂಡು, ಆದರಂತೆ ವರ್ತಿಸಿ, ಶ್ರೇಯೋಭಾಗಿಗಳಾಗುವರೆಂದು ನಿರೀಕ್ಷಿಸಿದೆ.

ಇತಿ ವಿದ್ವದ್ವಿನೇಯಃ
ಶೃಂಗಗಿರಿ ಕವಿ ನರಸಿಂಹಶರ್ಮಾ
"ಅದ್ವೈತಾಶ್ರಮಃ"

ರಮಾ ಶ್ರೀಲಕ್ಷ್ಮೀಅಗ್ರಹಾರಃ!
ನಂಜನಗೂಡು-೫೭೧೩೦೧
ಕೌಂ ಶ್ರೀಪರಸಿದ್ಧಿವಿನಾಯಕಚತುರ್ಥೀ
ಮಂದಪಾಸರಃ।
೧೩-೯-೧೯೮೦.

Sri Vidyabharathi Book Centre, Sringeri

CC-O. In Public Domain. Digitized by eGangotri

–: ಪರಿವಿಡಿ :–

		ಪುಟ
೧.	ಶ್ರೀಶಾರದೋಪಾಖ್ಯಾನವು.	1
೨.	ಶ್ರೀಶಾರದಾಸ್ತೋತ್ರಂ	5
೩.	ಶ್ರೀಶಾರದಾಸುಪ್ರಭಾತಸ್ತೋತ್ರಂ	7
೪.	ಶ್ರೀಶಾರದಾಭುಜಂಗಪ್ರಯಾತಸ್ತೋತ್ರಂ	13
೫.	ಶ್ರೀಲಲಿತಾಪ್ರಾತಃಸ್ಮರಣಪಂಚರತ್ನಂ	17
೬.	ಶ್ರೀವಾಣೀಪಾಣ್ಯವಲಂಬಸ್ತುತಿಃ	20
೭.	ಶ್ರೀಶಾರದಾಭುಜಂಗಂ	32
೮.	ಶ್ರೀವಾಣ್ಯುತ್ಕರ್ಷಮಂಜರಿಃ	41
೯.	ಶ್ರೀಶಾರದಾಸ್ತುತಿಃ	49
೧೦.	ಯೂಜ್ಞವಲ್ಕ್ಯಕೃತ ಸರಸ್ವತೀಸ್ತೋತ್ರಂ	54
೧೧.	ಶ್ರೀ ಶಾರದಾದಂಡಕಂ	63

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

॥ ಶ್ರೀಃ ॥

ಶ್ರೀಶಂಕರಾಚಾರ್ಯಕರಾರವಿಂದ-

CC-O. In Public Domain. Panini Kanya Maha Vidyalaya Collection.

ಶ್ರೀಶೃಂಗಶೈಲಾಗ್ರವಿರಾಜಮಾನಾಂ

ಶ್ರೀಶಾರದಾಂ ಸ್ತೌಮಿ ಪುಮರ್ಥಸಿದ್ಧ್ಯೈ ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಾರದಾಚಂದ್ರಮೌಳೀಶ್ವರರತ್ನಗರ್ಭಗಣಪತಿಶ್ರೀಶಂಕರಸದ್ಗುರುಭ್ಯೋ ನಮಃ । ಶ್ರೀಶಾರದಾಯೈ ನಮಃ ।

ಶೃಂಗಗಿರಿ ಶ್ರೀ ಶಾರದೋಪಾಖ್ಯಾನವು,

ಶೃಂಗಗಿರಿ ಶ್ರೀಶಾರದಾದೇವಿಯ ವಿಷಯದಲ್ಲಿ, ಶ್ರೀಮಚ್ಛಂಕರ ಭಗವತ್ಪಾದರವರ ಚರಿತ್ರೆಯಲ್ಲಿ ಪ್ರಮಾಣವಾಗಿರುವ ಮಾಧವೀಯ ಶ್ರೀಶಂಕರವಿಜಯವೇ ಪ್ರಮಾಣವಾಗಿದೆ. ಇದರ ಪ್ರಕಾರವಾಗಿ ಶ್ರೀಶಾರದಾ ದೇವಿಯ ಚರಿತ್ರೆಯು ಈ ರೀತಿಯಾಗಿದೆ.

ಒಂದು ಕಾಲದಲ್ಲಿ ಸತ್ಯಲೋಕದ ಶ್ರೀಬ್ರಹ್ಮದೇವನ ಸಭೆಯಲ್ಲಿ ದೇವಋಷಿಗಳೂ ಬ್ರಹ್ಮರ್ಷಿಗಳೂ ವೇದಘೋಷದಿಂದ ಶ್ರೀಪರಮಾತ್ಮನನ್ನು ಸ್ತುತಿಸುತ್ತಿದ್ದರು. ಆಗ ದುರ್ವಾಸಮಹರ್ಷಿಗಳು ಒಂದು ಕಡೆಯಲ್ಲಿ ವೇದದ ಸ್ವರದಲ್ಲಿ ತಪ್ಪಾಗಿ ಹೇಳಲು, ಶ್ರೀಬ್ರಹ್ಮದೇವನ ರಾಣಿಯಾದ ಶ್ರೀಸರಸ್ವತೀದೇವಿಯು ಹಾಸ್ಯವಾಗಿ ನಕ್ಕಳು. ಇದನ್ನು ಕಂಡು, ಅಕಾರಣ ಕೋಪಮೂರ್ತಿಗಳಾದ ದುರ್ವಾಸರು –'ಕೂಡಲೆ ಭೂಮಿಯಲ್ಲಿ ಮನುಷ್ಯಳಾಗಿಜನಿಸು' –ಎಂಬುದಾಗಿ ಶಪಿಸಿದರು. ಇದನ್ನು ಕೇಳಿ ವಿಷಣ್ಣಳಾದ ಶ್ರೀಸರಸ್ವತಿಯಿನ್ನು ಕಂಡು, ಬ್ರಹ್ಮಾದಿಗಳು– 'ನೀವು ಮಾಡಿದ ತಪ್ಪಿಗೆ ಶ್ರೀವಾಣಿಯನ್ನು ಶಪಿಸುವುದು ಯುಕ್ತವಲ್ಲ'–ಎಂದುಸಮಾಧಾನಹೇಳಲಾಗಿ ಶಾಂತರಾದ ದುರ್ವಾಸರು, ದಿವ್ಯದೃಷ್ಟಿಯಿಂದ ಭವಿಷ್ಯವನ್ನು ಕಂಡು, 'ಧರ್ಮರಕ್ಷಣೆಗಾಗಿ ಅವತರಿಸಿಬರುವ ಶ್ರೀಪರಶಿವನೊಡನೆ ನಿನಗೆ ವಾದವು ಸಂಭವಿಸುವುದು; ಆಗ ನಿನ್ನ ಶಾಪವು ಕೊನೆಗಾಣುವುದು' –ಎಂದು ತಮ್ಮ ಶಾಪದ ಪರಿಹಾರವನ್ನು ತಿಳಿಸಿದರು. ಇದರಂತೆ ಶ್ರೀಬ್ರಹ್ಮದೇವನ ರಾಣಿಯು ಶೋಣಾತೀರದಲ್ಲಿದ್ದ ವಿಷ್ಣುಮಿತ್ರರೆಂಬ ಬ್ರಾಹ್ಮಣವಿದ್ವನ್ಮಣಿಗಳ ಕುವರಿಯಾಗಿ ಜನಿಸಿ, ಸಕಲಸದ್ಗುಣಗಳಿಂದಲೂ, ಸಕಲಕಲಾವೈದುಷ್ಯದಿಂದಲೂ ಶೋಭಿಸುತ್ತ, -ಉಭಯಭಾರತೀ-ಸರಸವಾಣೀ-ಎಂದು ಪ್ರಸಿದ್ಧಿಯನ್ನು ಪಡೆದು, ಶುಕ್ಲಪಕ್ಷದ ಶರಚ್ಚಂದ್ರನಂತೆ ವೃದ್ಧಿಹೊಂದುತ್ತಿದ್ದಳು.

ಹದಿನಾಲ್ಕುಲೋಕಗಳ ಪ್ರಪಂಚಕ್ಕೆಲ್ಲ ವೇದವಿಹಿತಗಳಾಗಿರುವ

CC-O. In Public Domain. Digitized by eGangotri

ಧರ್ಮಾಧರ್ಮಕರ್ಮಗಳೇ ಕಾರಣವು. ವೇದವಿಹಿತಕರ್ಮಗಳಿಗೆಲ್ಲ ಭರತ ಖಂಡವೇ ಆಧಾರವು. ಆದ್ದರಿಂದಲೇ ಭರತಖಂಡವು ಕರ್ಮಭೂಮಿಯೆನಿಸಿರುತ್ತದೆ. ಇತರ ಪ್ರಪಂಚವೆಲ್ಲವೂ, ಕರ್ಮಭೂಮಿಯಾಗಿರುವ ಭರತ ಖಂಡದಲ್ಲಿ ಅನುಷ್ಠಿಸಿದ ಧರ್ಮಾಧರ್ಮಕರ್ಮಗಳ ಫಲಗಳನ್ನು ಅನುಭವಿಸುವಂಥ ಭೋಗಭೂಮಿಗಳಾಗಿರುತ್ತವೆ.

ಹೀಗೆ ಲೋಕಕ್ಷೇಮಕ್ಕೆ ಕಾರಣವಾಗಿರುವ ವೈದಿಕಧರ್ಮಾಧರ್ಮಗಳ ನಿಯಮವು ಕೆಟ್ಟು, ಹಾನಿಯುಂಟಾಗುವ ಸಂದರ್ಭದಲ್ಲಿ– "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥" —ಎಂಬ ಭಗವದನುಗ್ರಹದಂತೆ, ಶ್ರೀಭಗವಂತನು ಈ ಭರತ ಖಂಡದಲ್ಲಿ ಅವತರಿಸಿಬಂದು ಧರ್ಮಸಂಸ್ಥಾಪನೆಯನ್ನು ಎಸಗುವನು.

ಈಗಿನ ಕಲಿಯುಗದ ಆರಂಭದಲ್ಲಿ ಬೌದ್ಧಾದಿನಾಸ್ತಿಕರ ಪ್ರಾಬಲ್ಯದಿಂದ ವೈದಿಕವರ್ಣಾಶ್ರಮಧರ್ಮನಿಯಮಕ್ಕೆ ಅತಿಶಯವಾದ ಹಾನಿಯು ಸಂಭವಿಸಿತು. ಹಿಂದಿನ ಸಂದರ್ಭಗಳಲ್ಲಿ, ಧರ್ಮಾನುಯಾಯಿಗಳು ಇದ್ದು, ಅಧರ್ಮನಿರತರಾಗಿದ್ದವರಿಂದ ತೊಂದರೆಯು ಆಗುತ್ತಿತ್ತು; ಆಗ ಅಂಥ ದುಷ್ಟರ ನಾಶದಿಂದ ಧರ್ಮವು ನಿರಾತಂಕವಾಗಿ ಪ್ರಚಾರವಾಗುತ್ತಿತ್ತು. ಈಗಿನ ಸಂದರ್ಭದಲ್ಲಿ ನಾಸ್ತಿಕರ ಅಧಾರ್ಮಿಕಪ್ರಚಾರಗಳಿಂದ ಜನರಿಗೆ ವೇದದಲ್ಲಿಯೂ ವೇದೋಕ್ತಕರ್ಮಗಳಲ್ಲಿಯೂ ಶ್ರದ್ಧೆಯೇ ನಿರ್ಮೂಲವಾಗಿತ್ತು. ಆದಕಾರಣ " ಈಶಾನಃ ಸರ್ವವಿದ್ಯಾನಾಂ " – ಎಂಬ ವೇದಪ್ರಮಾಣದಂತೆ, ಸರ್ವವಿದ್ಯಾಧಿಪತಿಯಾಗಿರುವ ಶ್ರೀಪರಮೇಶ್ವರನೇ ಗತಿಯೆಂದು ನಿಶ್ಚಯಿಸಿ, ಬ್ರಹ್ಮಾದಿದೇವತೆಗಳು, ಲೋಕಕ್ಷೇಮಕರವಾಗಿರುವ ವೈದಿಕಧರ್ಮದ ರಕ್ಷಣೆಗಾಗಿ ಶ್ರೀಪರಶಿವನನ್ನು ಪ್ರಾರ್ಥಿಸಿದರು. ಆಗ ಶ್ರೀಪರಶಿವನು -" ಭೂಲೋಕದಲ್ಲಿ ಪರಮಹಂಸಸನ್ಯಾಸಿಯಾಗಿ ಅವತರಿಸಿ ಧರ್ಮಸಂಸ್ಥಾಪನೆಯನ್ನು ಮಾಡುವುದಾಗಿ"– ದೇವತೆಗಳಿಗೆ ಅಭಯವನ್ನಿತ್ತನು.

ಆದರಂತೆ, ಭಾರತದ ದಕ್ಷಿಣದಲ್ಲಿನ ಕೇರಳದೇಶದ ಕಾಲಟಿಯೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣೋತ್ತಮರ ವಿದ್ವದಗ್ರಹಾರವಲ್ಲಿದ್ದ ಶ್ರೀಶಿವಗುರು–ಆರ್ಯಾಂಬೆ ಯರೆಂಬ ದಂಪತಿಗಳಿಗೆ ಸುಪುತ್ರನಾಗಿ ಶ್ರೀಪರಶಿವನು ಅವತರಿಸಿ, ಮೂರನೆಯ ವಯಸ್ಸಿನಲ್ಲಿ ಚೂಡಾಕರ್ಮ, ಐದನೆಯ ವಯಸ್ಸಿನಲ್ಲಿ ಉಪನಯನ ಸಂಸ್ಕಾರಗಳಿಂದ ಸಂಸ್ಕೃತರಾಗಿ, ಗುರುಕುಲವಾಸದಿಂದ ಸಮಸ್ತಶಾಸ್ತ್ರ ನಿಷ್ಣಾತರಾಗಿ, ಎಂಟನೆಯ ವಯಸ್ಸಿನಲ್ಲಿ ನರ್ಮದಾ ತೀರದಲ್ಲಿದ್ದ ಶ್ರೀಗೋವಿಂದಭಗವತ್ಪಾದರಿಂದ ಪರಮಹಂಸಪಾರಿವ್ರಾಜ್ಯದೀಕ್ಷೆಯನ್ನೂ ವೇದಾಂತಮಹಾವಾಕ್ಯೋಪದೇಶವನ್ನೂ ಪಡೆದು, ಮಾನವ ಲೀಲೆಯಿಂದ ಶ್ರೀಶಂಕರಭಗವತ್ಪಾದರೆನಿಸಿದನು. ಶ್ರೀಗುರ್ವಾಜ್ಞೆಯನ್ನು ಶಿರಸಾವಹಿಸಿ ಶ್ರೀವಾರಣಾಸೀಕ್ಷೇತ್ರದಲ್ಲಿ ಶ್ರೀವಿಶ್ವೇಶ್ವರನ ಆಣತಿಯನ್ನು ಸ್ವೀಕರಿಸಿ, ಶ್ರೀಭಗವತ್ಪಾದರು ಬದರಿಕಾಶ್ರಮದಲ್ಲಿ ಪ್ರಸ್ಥಾನತ್ರಯಾದಿಗ್ರಂಥಸಂದೋಹಗಳನ್ನು ವಿರಚಿಸಿದರು. ಮತ್ತೆ ಶ್ರೀಕಾಶೀಕ್ಷೇತ್ರಕ್ಕೆ ಬಂದು, ಶ್ರೀವೇದವ್ಯಾಸರಿಂದ ಪ್ರಶಂಸಿಸಲ್ಪಟ್ಟ ಪ್ರಸ್ಥಾನತ್ರಯದ ಪ್ರಚಾರಮಾಡುವ ಅವರ ಅಪ್ಪಣೆಮೇರೆ, ಅದಕ್ಕಾಗಿ ಶ್ರೀಕುಮಾರಿಲಭಟ್ಟಪಾದರ ಸಲಹೆಯಂತೆ, ಮಾಹಿಷ್ಮತೀಪಟ್ಟಣದಲ್ಲಿದ್ದ, ಶ್ರೀಭಟ್ಟಪಾದರ ಪ್ರಧಾನಶಿಷ್ಯರಾಗಿದ್ದ ಶ್ರೀಮಂಡನಮಿಶ್ರರನ್ನು ಶಾಸ್ತ್ರಾದದಲ್ಲಿ ಗೆದ್ದು ಒಲಿಸಿಕೊಂಡರು,

ಶ್ರೀಪರಶಿವನು ಧರ್ಮಸಂಸ್ಥಾಪನೆಗಾಗಿ ಅವತರಿಸಿಬರಲು ಸಂಕಲ್ಪಿಸಿದಾಗ, ಈ ಕಾರ್ಯದ ಸಹಾಯಕ್ಕಾಗಿ ದೇವತೆಗಳನ್ನೂ ಅವತರಿಸಿಬರುವಂತೆ ಆಜ್ಞೆಮಾಡಿದ್ದನು. ಇದನ್ನನುಸರಿಸಿ, ಶ್ರೀಕುಮಾರಸ್ವಾಮಿಯು ಶ್ರೀಕುಮಾರಿಲಭಟ್ಟಪಾದರಾಗಿ ಅವತರಿಸಿ, ಸುಧನ್ವರಾಜನಾಗಿ ಅವತರಿಸಿದ್ದ ದೇವೇಂದ್ರನ ಸಹಕಾರದಿಂದ ಬೌದ್ಧಾದಿನಾಸ್ತಿಕರನ್ನು ನಿರ್ಮೂಲಗೊಳಿಸಿದ್ದನು. ಇದರಂತೆ ಶ್ರೀಬ್ರಹ್ಮದೇವನು, ಕಾಶ್ಮೀರದೇಶದ ರಾಜನ ಆಸ್ಥಾನ ವಿದ್ವಚ್ಛಿಖಾಮಣಿಗಳಾಗಿದ್ದ ಶ್ರೀಹಿಮಮಿತ್ರರ ಕುಮಾರರಾಗಿ ಶ್ರೀವಿಶ್ವರೂಪರೆಂದೂ ಮಂಡನಮಿಶ್ರರೆಂದೂ ಪ್ರಖ್ಯಾತರಾಗಿದ್ದರು. ದೈವಯೋಗದಿಂದ, ಶ್ರೀಮಂಡನಮಿಶ್ರರು ಶ್ರೀಸರಸವಾಣಿಯನ್ನು ವಿವಾಹಿತರಾಗಿ ಮಾಹಿಷ್ಮತಿಯಲ್ಲಿ ವಾಸಮಾಡಿದ್ದರು. ಆ ಸಮಯದಲ್ಲಿ ಶ್ರೀಭಗವತ್ಪಾದರಿಗೆ ಶ್ರೀಮಂಡನಮಿಶ್ರರೊಡನೆ ವಾದವು ನಡೆಯಿತು. ಈ ವಾದದಲ್ಲಿ ಶ್ರೀಸರಸವಾಣಿಯೇ ಅಧ್ಯಕ್ಷಿಣಿಯಾಗಿದ್ದಳು. ವಾದದ ನಿಯಮಾನುಸಾರವಾಗಿ, ಸೋತವರು ಜಯಶೀಲರಾದವರ ಆಶ್ರಮವನ್ನು ಸ್ವೀಕರಿಸಬೇಕಾಗಿತ್ತು.

CC-O. In Public Domain. Digitized by eGangotri

ಇದರಂತೆ ಶ್ರೀಮಂಡನರು ಸನ್ಯಾಸವನ್ನು ಸ್ವೀಕರಿಸಬೇಕಾಯಿತು. ಆಗ ಸರಸವಾಣಿಯು,- " ತಾನು ತನ್ನ ಪತಿಯು ಅರ್ಧಾಂಗಿಯಾದ್ದರಿಂದ ಪೂರ್ಣ ಜಯವು ಲಭಿಸಬೇಕಾದರೆ ತನ್ನನ್ನೂ ಜಯಿಸಬೇಕೆಂದು"- ಪ್ರತಿಭಟಿಸಿದಳು. ಅದರಂತೆ ಶ್ರೀಭಗವತ್ಪಾದರು ಅವಳೊಡನೆಯೂ ವಾದಮಾಡಿ, ಶಾಸ್ತ್ರಾರ್ಥದಲ್ಲಿ ಅಜೇಯರಾಗಿ ವಿರಾಜಿಸಿದರು. ಆಗ ಸರಸವಾಣಿಯು ಕಾಮಶಾಸ್ತ್ರದ ವಿಷಯವಾಗಿ ಪ್ರಶ್ನೆಮಾಡಲು, ಶ್ರೀಭಗವತ್ಪಾದರು ಲೋಕಾಪವಾದವನ್ನು ಪರಿಹರಿಸುವುದಕ್ಕಾಗಿ, ಅಮರುಕರಾಜನ ಮೃತಶರೀರದಲ್ಲಿ ಪರಕಾಯ ಪ್ರವೇಶಯೋಗದಿಂದ ಪ್ರವೇಶಿಸಿ ಕಾಮಕಲೆಯ ಪರಿಚಯವನ್ನು ಪಡೆದು ಶ್ರೀಸರಸವಾಣಿಯೊಡನೆ ಕಾಮಶಾಸ್ತ್ರದಲ್ಲಿಯೂ ವಾದಕ್ಕೆ ಸಿದ್ಧರಾಗಿಬಂದರು. ಆಗ ಸರಸವಾಣಿಯು ತನ್ನ ಶಾಪವು ಕೊನೆಗಂಡದ್ದನ್ನು ತಿಳಿಸಿ,ತಾನು ಸ್ವಸ್ಥಾನವಾದ ಬ್ರಹ್ಮಲೋಕಕ್ಕೆ ತೆರಳಲು ಸಿದ್ಧಳಾದಳು. ಆಗ ಶ್ರೀಭಗವತ್ಪಾದರು ಆಕೆಯನ್ನು ಕುರಿತು– " ದೇವಿ ನೀನು ಸಾಕ್ಷಾತ್ಬ್ರಹ್ಮವಿದ್ಯಾಸ್ವರೂಪಿಣಿಯೆಂಬುದು ನನಗೆ ತಿಳಿದೇ ಇದೆ. ನಾನು ವೈದಿಕವರ್ಣಾಶ್ರಮಧರ್ಮದ ಸಂಸ್ಥಾಪನೆಗಾಗಿ ಪ್ರವೃತ್ತನಾಗಿದ್ದೇನೆ. ಇದಕ್ಕಾಗಿ ಅವೈದಿಕಮತಗಳನ್ನೆಲ್ಲ ನಿರಾಕರಿಸಿದ್ದೇನೆ. ವೈದಿಕಪಾರಮಾರ್ಥಿಕಾದ್ವೈತತತ್ವವು ಕರ್ಮಭೂಮಿಯಾಗಿರುವ ಈ ಭರತಖಂಡದಲ್ಲಿ ನಿರಂತರವೂ ಜಾಗರೂಕವಾಗಿ ಪ್ರಚಾರದಲ್ಲಿ ಇರುವುದಕ್ಕಾಗಿ ನಾನು ಶ್ರೀಋಷ್ಯಶೃಂಗಾಶ್ರಮಪಾಗಿರುವ ಶ್ರೀಶೃಂಗಗಿರಿಯಲ್ಲಿ ಪ್ರಧಾನವಾದ ಆಶ್ರಮವನ್ನು ಸ್ಥಾಪಿಸುತ್ತೇನೆ. ಅಲ್ಲಿ ನೀನು ಯಾವಾಗಲೂ ಸಾನ್ನಿಧ್ಯವನ್ನು ಅನುಗ್ರಹಿಸಿ, ಧರ್ಮಸಂಸ್ಥಾಪನೆಗೆ ನೆರವಾಗಿರಬೇಕು' -ಎಂದು ಪ್ರಾರ್ಥಿಸಿದರು. ಆದರಂತೆ ಶ್ರೀಸರಸ್ವತಿಯು ವರವನ್ನು ಅನುಗ್ರಹಿಸಿ ಬ್ರಹ್ಮಲೋಕಕ್ಕೆ ತೆರಳಿದಳು.

ಆನಂತರ ಶ್ರೀಭಗವತ್ಪಾದರವರು ಶ್ರೀಮಂಡನಮಿಶ್ರರಿಗೆ ಸನ್ಯಾಸದೀಕ್ಷೆಯನ್ನು ಅನುಗ್ರಹಿಸಿ, ವೇದಾಂತಮಹಾವಾಕ್ಯೋಪದೇಶವನ್ನು ಮಾಡಿ, ಶ್ರೀಸುರೇಶ್ವರರೆಂದು ಅವರಿಗೆ ಪಟ್ಟನಾಮವನ್ನು ಕೊಟ್ಟು, ಶ್ರೀಶೃಂಗಗಿರಿ ಕ್ಷೇತ್ರದಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿ ಶ್ರೀಶಾರದಾದೇವಿಯನ್ನು ಪ್ರತಿಷ್ಠಿಸಿ, ಈ ಆಶ್ರಮದಲ್ಲಿ ಶ್ರೀಸುರೇಶ್ವರರನ್ನೇ ಪ್ರಥಮಾಚಾರ್ಯರನ್ನಾಗಿ ನೇಮಿಸಿ, ಅವಿಚ್ಛಿನ್ನವಾದ ಶ್ರೀಸದ್ಗುರುಪರಂಪರೆಯನ್ನು ಪ್ರವರ್ತಿಸಿದ್ದಾರೆ. ಈ ರೀತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಶ್ರೀಬ್ರಹ್ಮದೇವನ ಪ್ರಿಯೆಯಾಗಿರುವ ಶ್ರೀಬ್ರಹ್ಮಾಣಿಯೇ—

ಯಾ ಶಾರದಾಂಬೇತ್ಯಭಿಧಾಂ ವಹಂತೀ ಕೃತಾಂ ಪ್ರತಿಜ್ಞಾಂ
ಪರಿಪಾಲಯಂತೀ ।
ಆದ್ಯಾಪಿ ಶೃಂಗೇರಿಪುರೇ ವಸಂತೀ ವಿದ್ಯೋತತೇऽಭೀಷ್ಟವರಾನ್
ದಿಶಂತೀ ॥

ಶ್ರೀಭಗವತ್ಪಾದರವರಿಗೆ ಪ್ರತಿಜ್ಞೆ ಮಾಡಿದಂತೆ ಶ್ರೀಶಾರದಾ –ಎಂಬ ಹೆಸರಿನಿಂದ ಶ್ರೀಶೃಂಗಗಿರಿಯಲ್ಲಿ ನೆಲೆಸಿ, ಭಕ್ತರ ಸರ್ವಾಭೀಷ್ಟವನ್ನು ಅನುಗ್ರಹಿಸುತ್ತ ನಿತ್ಯವೂ ರಾರಾಜಿಸುತ್ತಿದ್ದಾಳೆ.।

ಈ ಶ್ರೀಶಾರದೇಯೇ ಕೊಲ್ಲೂರಿನಲ್ಲಿ, ಮೂಕದಾನವನನ್ನು ಸಂಹರಿಸಿದ ಮೂಕಾಂಬಿಕೆ-ಎಂಬ ಹೆಸರಿನಿಂದ ವಿರಾಜಿಸುತ್ತಿದ್ದಾಳೆ'. ಈಕೆಯೇ ಕಾಶ್ಮೀರದಲ್ಲಿ ಸರ್ವಜ್ಞಪೀಠಾಧಿಷ್ಠಾನದೇವತೆಯಾಗಿ ಬೆಳಗಿದ್ದಾಳೆ'.

ಶ್ರೀಶಾರದಾಸ್ತೋತ್ರಂ ।

ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇ ದೇವಿ ವಿದ್ಯಾದಾನಂ ಚ ದೇಹಿ ಮೇ
॥೧॥

ಕಾಶ್ಮೀರಪುರದಲ್ಲಿ ನೆಲೆಸಿರುವ ಶ್ರೀಶಾರದಾದೇವಿಯೆ, ನಿನ್ನನ್ನು ಮರೆ ಹೊಕ್ಕು ಪ್ರಾರ್ಥಿಸುತ್ತೇನೆ. ನನಗೆ ಸದ್ವಿದ್ಯೆಯನ್ನು ಅನುಗ್ರಹಿಸಿ ನನ್ನನ್ನು ಉದ್ಧರಿಸು ತಾಯೆ.

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ।
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥೨॥

ಕಾಮರೂಪಿಣಿಯೂ ಬೇಡಿದವರ ವರವನ್ನು ಅನುಗ್ರಹಿಸುವವಳೂ ಆಗಿರುವ ಶ್ರೀಸರಸ್ವತೀದೇವಿಯೇ, ನಿನ್ನನ್ನು ಭಕ್ತಿಯಿಂದ ನಮಸ್ಕರಿಸಿ,

CC-O. In Public Domain. Digitized by eGangotri

ವಿದ್ಯಾಭ್ಯಾಸವನ್ನು ಆರಂಭಿಸುತ್ತೇನೆ. ಇದು ಪೂರ್ಣಫಲಸಿದ್ಧವಾಗುವಂತೆ ಅನುಗ್ರಹಿಸು, ತಾಯೆ.

ಅವಿದ್ಯಾಮೂಲನಾಶಿನ್ಯೈ ವಿದ್ಯಾವಯವಮೂರ್ತಯೇ ।
ಸರ್ವವಿದ್ಯಾಪ್ರದಾಯಿನ್ಯೈ ಮೂಕಾಂಬಾಯೈ ನಮೋ ನಮಃ॥೩॥

ಸಂಸಾರಕಾರಣವಾಗಿರುವ ಅವಿದ್ಯೆಯನ್ನು ನಿರ್ಮೂಲಮಾಡುವ, ಬ್ರಹ್ಮವಿದ್ಯಾಸ್ವರೂಪಿಣಿಯಾಗಿ ಸರ್ವವಿದ್ಯೆಗಳನ್ನು ಅನುಗ್ರಹಿಸುವ ಶ್ರೀಮೂಕಾಂಬಿಕೆಯನ್ನು ಮತ್ತೆ ಮತ್ತೆ ವಂದಿಸುತ್ತೇನೆ.

ಶರದಿಂದುವಿಕಾಸಮಂದಹಾಸಾಂ ಸ್ಫುರದಿಂದೀವರಲೋಚನಾಭಿ-
ರಾಮಾಂ ।
ಅರವಿಂದಸಮಾನಸುಂದರಾಸ್ಯಾಮರವಿಂದಾಸನಸುಂದರೀಮು-
ಪಾಸೇ ॥೪॥

ಶರತ್ಕಾಲದ ಚಂದ್ರನಂತೆ ಶುಭ್ರವಾಗಿ ಬೆಳಗುವ ಮುಗುಳ್ನಗೆಯ; ಅರಳಿದ ಕನ್ನೈದಿಲೆಯಂಥ ಕಣ್ಣುಗಳಿಂದ ತೊಳಗುವ ; ಕಮಲದಂತೆ ಹೊಳೆಯುವ ಮುಖದ; ಕಮಲಾಸನನಾದ ಶ್ರೀಬ್ರಹ್ಮದೇವನ ಪ್ರಿಯೆಯಾಗಿರುವ ಶ್ರೀಶಾರದಾದೇವಿಯನ್ನು ಸೇವಿಸುತ್ತೇನೆ.

ಯಾ ಕುಂದೇಂದುತುಷಾರಹಾರಧವಳಾ ಯಾ ಶುಭ್ರವಸ್ತ್ರಾ-
ವೃತಾ ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ ।
ಯಾ ಬ್ರಹ್ಮಾಚ್ಯುತಶಂಕರಪ್ರಭೃತಿರ್ದೇವೈಃ ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಃಶೇಷಜಾಡ್ಯಾಪಹಾ ॥೫॥

ಮಲ್ಲಿಗೆ, ಚಂದ್ರ, ಹಿಮ, ಮುತ್ತಿನಹಾರ– ಇವುಗಳಂತೆ ಅತ್ಯಂತಶುದ್ಧವಾಗಿರುವ ಶುಭ್ರವಾದ ವಸ್ತ್ರವನ್ನು ಧರಿಸಿರುವ; ವೀಣೆಯಿಂದ ಅಲಂಕೃತವಾಗಿರುವ; ಕೈಗಳನ್ನುಳ್ಳ; ಬಿಳಿಯಕಮಲದಲ್ಲಿ ಮಂಡಿಸಿರುವ; ಬ್ರಹ್ಮ, ವಿಷ್ಣು ಮಹೇಶ್ವರರೇ ಮೊದಲಾದ ಎಲ್ಲ ದೇವತೆಗಳಿಂದಲೂ ಯಾವಾಗಲೂ ಪೂಜಿಸಲ್ಪಡುತ್ತಿರುವ ; ಭಜಿಸುವ ಭಕ್ತರ ಜಡತನವನ್ನು ಪೂರ್ಣವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತೊಲಗಿಸುವ; ಪರಮಪೂಜ್ಯಳಾಗಿರುವ ಶ್ರೀಸರಸ್ವತಿದೇವಿಯು ನನ್ನನ್ನು ಯಾವಾಗಲೂ ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀಶಾರದಾಸುಪ್ರಭಾತಸ್ತೋತ್ರಂ ।

ಉತ್ತಿಷ್ಠೋತ್ತಿಷ್ಠ ಕಲ್ಯಾಣಿ ಉತ್ತಿಷ್ಠ ಕರುಣಾಲಯೇ ।
ಉತ್ತಿಷ್ಠ ವರದೇ ದೇವಿ ರಕ್ಷಸ್ವ ಜಗದಂಬಿಕೇ ॥೧॥

ಮಂಗಳಸ್ವರೂಪಿಣಿಯೂ ದಯಾಮಯಳೂ ಆಗಿರುವ ಜಗನ್ಮಾತೆ, ಶ್ರೀಶಾರದಾದೇವಿ, ಜಗತ್ತನ್ನು ರಕ್ಷಿಸುವುದಕ್ಕಾಗಿ ಯಾವಾಗಲೂ ಜಾಗ್ರತಳಾಗಿರಮ್ಮ !

ಶ್ರೀಶಾರವಿಂದಭವಪೂಜಿತಪಾದಪದ್ಮೇ ಶ್ರೀಶಾರದೇಂದುನಿಭ-
ಶುಭ್ರದುಕೂಲಶೋಭೇ ।
ಶ್ರೀಶಾರದೇ ಶ್ರಿತಜನಾವಳಿಕಲ್ಪವಲ್ಲಿ ಶ್ರೀಶೃಂಗಶೈಲನಿಲಯೇ
ತವ ಸುಪ್ರಭಾತಂ ॥೨॥

ಶ್ರೀವಿಷ್ಣು ಬ್ರಹ್ಮಾದಿಗಳಿಂದಲೂ ಪೂಜ್ಯವಾದ ಪಾದಕಮಲವುಳ್ಳವಳಾಗಿದ್ದೀಯೆ; ಶರಚ್ಚಂದ್ರನ ಕಾಂತಿಯು ಶುಭ್ರವಸ್ತ್ರದಿಂದ ಶೋಭಿಸುತ್ತಿರುವೆ; ಶರಣಾಗತರಾದವರಿಗೆ ಸಕಲೇಷ್ಟಾರ್ಥಗಳನ್ನೂ ಕರುಣಿಸುವ ಕಲ್ಪಲತೆಯಾಗಿರುವೆ, ತಾಯೇ: ಶ್ರೀಶೃಂಗಗಿರಿಯಲ್ಲಿ ನೆಲೆಸಿ ನಲಿಯುತ್ತಿರುವ ನಿನಗೆ ಈಗ ಸುಪ್ರಭಾತವಾಗಲಿ.

ಉತ್ತಿಷ್ಠ ಹೇ ಜನನಿ ಫುಲ್ಲಸರೋಜನೇತ್ರೇ ಗಾಯತ್ರಿ ವೇದಮಯಿ
ಕಾಂಚನಚಾರುಗಾತ್ರೇ ।
ಉತ್ತಿಷ್ಠ ಭಾರತಿ ದಯಾಮಯಿ ಲೋಕಧಾತ್ರಿ ಶ್ರೀಶೃಂಗಶೈಲ-
ನಿಲಯೇ ತವ ಸುಪ್ರಭಾತಂ ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಳಿದ ಕಮಲದಂತೆ ನಿನ್ನ ಕಣ್ಣುಗಳು ವಿರಾಜಿಸುತ್ತಿವೆ; ವೇದ ಸ್ವರೂಪಳಾದ ಶ್ರೀಗಾಯತ್ರೀದೇವಿಯೇ, ನೀನು ಪುಟವಿಟ್ಟ ಚಿನ್ನದಂತೆ ಹೊಳೆಯುತ್ತಿರುವೆ; ದಯಾಮಯಳಾಗಿ, ಜಗತ್ತಿಗೆಲ್ಲ ಆಧಾರವಾಗಿ, ಆ ಶೃಂಗಗಿರಿಯಲ್ಲಿ ಲೋಕಾನುಗ್ರಹಕ್ಕಾಗಿ ನೆಲೆಸಿರುವ ಹೇ ಭಾರತಿ, ನಿನಗೆ ಸುಪ್ರಭಾತವು.

ಪ್ರಾಚೀ ವಿಭಾತಿ ದಿವಸೋದಯರಾಗತಾಮ್ಯಾ ಕ್ಷೀಣಾ ನಿಶಾ
ರವಿಕರಪ್ರಸರೇಣ ಧೂಮ್ಯಾ ।
ಮಂದಾನಿಲಃ ಪವತಿ ಸೌರಭಶೈತ್ಯನವ್ಯಃ ಶ್ರೀಶೃಂಗಶೈಲ-
ನಿಲಯೇ ತವ ಸುಪ್ರಭಾತಂ ॥೪॥

ಈಗ ಶ್ರೀಸೂರ್ಯದೇವನು ಉದಯಿಸುತ್ತಿರುವನು; ಅವನ ನಸು ಗೆಂಪಾದ ಕಿರಣಗಳಿಂದ ಲೋಕವೆಲ್ಲ ಬೆಳಗುತ್ತ, ರಾತ್ರಿಯು ಕಳೆಯುತ್ತಿದೆ; ಅರಳುತ್ತಿರುವ ನಾನಾವಿಧಕುಸುಮಗಳ ಸುಗಂಧಭರಿತವಾಗಿರುವ ಮಂದ ಮಾರುತವು ಮೆಲ್ಲಮೆಲ್ಲನೆ ಬೀಸುತ್ತ ಲೋಕವನ್ನು ತಣಿಸುತ್ತಿದೆ; ಶೃಂಗ ಗಿರಿಯ ತೌರುಮನೆಯ ಶ್ರೀಶಾರದೆ, ನಿನಗೆ ಈಗ ಸುಪ್ರಭಾತವು.

ಉಚ್ಚೈರುದೀರಯತಿ ವಿಶ್ರುತದೀರ್ಘಘೋಷೈಃ ಪ್ರಾಪ್ತಂ
ಪ್ರಭಾತಸಮಯಂ ಕಿಲ ತಾಮ್ರಚೂಡಃ ।
ಕೂಜಂತಿ ಪಕ್ಷಿನಿಕರಾಸ್ತರುಕೋಟರೇಷು ಶ್ರೀಶೃಂಗಶೈಲನಿಲಯೇ
ತವ ಸುಪ್ರಭಾತಂ ॥೫॥

ಬೆಳಗಾಗಿತೆಂಬುದನ್ನು ಕೋಳಿಗಳು ತಮ್ಮ ಸಹಜವಾದ ಉಚ್ಚಸ್ವರದಿಂದ ಕೂಗುತ್ತ ಸೂಚಿಸುತ್ತಿವೆ; ಹಾಗೆಯೇ ಪಕ್ಷಿಗಳ ಸಮೂಹವು ತಮ್ಮ ತಮ್ಮ ಮರದ ಪೊಟರೆಗಳಲ್ಲಿ ಮನೋಹರವಾಗಿ ಧ್ವನಿಗೈಯ್ಯುತ್ತಿವೆ; ಶ್ರೀಶೃಂಗಗಿರಿಶ್ರೀಶಾರದೆ, ನಿನಗೆ ಸುಪ್ರಭಾತವು.

ಉತ್ತಿಷ್ಠ ಮೌನಿಜನಮಾನಸರಾಜಹಂಸಿ ಲೋಕೇ ಶುಭಂ
ಕಲ್ಪಯ್ಯ ಚಂದ್ರಕಲಾವತಂಸೇ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲೋಲಕುಂಡಲಮಣಿದ್ಯುತಿಭಾಸಿತಾಂಸೇ ಶ್ರೀಶೃಂಗಶೈಲ-
ನಿಲಯೇ ತವ ಸುಪ್ರಭಾತಂ ॥೬॥

ಪರತತ್ತ್ವವನ್ನೇ ನಿರಂತರವೂ ಮನನಮಾಡುತ್ತಿರುವ ಮುನಿಗಳ ಮನಸ್ಸೆಂಬ ಮಾನಸಸರೋವರದಲ್ಲಿ ವಿಹರಿಸುವ ರಾಜಹಂಸೆಯಾಗಿ, ಚಂದ್ರನ ಕಲೆಯಿಂದ ಅಲಂಕೃತಳಾಗಿರುವ ಶ್ರೀಶಾರದೆ. ವೀಣಾರಾಗಾಸ್ವಾದನೆಯಲ್ಲಿ ಚಲಿಸುವ ರತ್ನಖಚಿತಕುಂಡಲಗಳ ದಿವ್ಯಕಾಂತಿಯಿಂದ ನಿನ್ನ ಹೆಗಲು ಪ್ರಕಾಶಿಸುತ್ತಿದೆ; ನಿನಗೆ ಸುಪ್ರಭಾತವು.

ಓಂಕಾರರೂಪಿಣಿ ಪರೇ ಶರದಿಂದುಫಾಲೇ ಜ್ಞಾನಪ್ರದೇ
ಭವನಿವಾರಿಣಿ ಚಾರುಶೀಲೇ ।
ಪಾಪೌಘಹಾರಿಣಿ ಸುಭಾಷಿಣಿ ರತ್ನಮೌಲೇ ಶ್ರೀಶೃಂಗಶೈಲ-
ನಿಲಯೇ ತವ ಸುಪ್ರಭಾತಂ ॥೭॥

ಶ್ರುತಿಸಾರವಾದ ಪ್ರಣವಸ್ವರೂಪಿಣಿಯು ನೀನೇ ಪರತತ್ತ್ವಸ್ವರೂಪಳು; ಸಂಸಾರದುಃಖವನ್ನು ಪರಿಹರಿಸುವ ಬ್ರಹ್ಮಾತ್ಮತತ್ತ್ವಜ್ಞಾನವನ್ನು ಭಕ್ತರಿಗೆ ಕರುಣಿಸುವ ಚಾರುಶೀಲೆಯಾಗಿರುವೆ : ಪಾಪಸಮೂಹಗಳನ್ನೆಲ್ಲ ಪರಿಹರಿಸುವ ಉಪದೇಶದ ಮಾತುಗಳು ನಿನ್ನವು ; ಶ್ರೀಶೃಂಗಗಿರಿಯಲ್ಲಿ ರತ್ನಮಯಕಿರೀಟದಿಂದ ರಂಜಿಸುತ್ತ ನೆಲೆಸಿರುವ ಶ್ರೀಶಾರದೆ, ನಿನಗೆ ಸುಪ್ರಭಾತವು.

ಶ್ರೀಬ್ರಹ್ಮದೇವಸದಸಿ ಶ್ರುತಿಘೋಷಕಾಲೇ ದುರ್ವಾಸಸಿ ಸ್ಖಲತಿ
ಸ್ಮೇರಮುಖೀಂ ವಿಲೋಕ್ಯ । ತತ್ಕ್ರುದ್ಧಶಾಪಮಿಷತೋ ಭುವಮೇತ್ಯ
ಜಾತಾ ಶ್ರೀವಿಷ್ಣುಮಿಶ್ರದುಹಿತಾ ಖಿಲ ಸಿದ್ಧವಿದ್ಯಾ ॥೮॥

ಶ್ರೀಬ್ರಹ್ಮದೇವನ ಸಭೆಯಲ್ಲಿ ಮಹರ್ಷಿಗಳು ವೇದಘೋಷವನ್ನು ಮಾಡುತ್ತಿರಲು, ಅವರ ಮಧ್ಯದಲ್ಲಿದ್ದ ದುರ್ವಾಸಮಹರ್ಷಿಗಳು ಅಪಸ್ವರವನ್ನು ಹೇಳಿದ್ದನ್ನು ಕಂಡು ನೀನು ನಕ್ಕದ್ದನ್ನು ನೋಡಿ, ಕುಪಿತರಾದ ಅವರ ಶಾಪದಿಂದ ಭೂಲೋಕದಲ್ಲಿ ಶ್ರೀವಿಷ್ಣುಮಿಶ್ರರ ಮಗಳಾಗಿ ಸರ್ವವಿದ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶಾರದೆಯಾಗಿ ನೀನು ಜನಿಸಿದೆಯಲ್ಲವೆ !

ಕಾಶ್ಮೀರದೇಶವಿಬುಧಸ್ಯ ತು ಮಂಡನಸ್ಯ ಪತ್ನೀತ್ವಮಾಪ್ಯ
ಲಸತೀ ಭವತೀ ಪ್ರಮೋದಾತ್ । ಶ್ರೌತಾಧ್ವರಕ್ಷಣಕೃತೇ ಭುವಿ ಮಸ್ಕ
ರೀಂದ್ರ ಭಾವಂ ಪ್ರಪದ್ಯ ಚರತಾ ಪರಮೇಶ್ವರೇಣ ॥೯॥

ಕಾಶ್ಮೀರದೇಶಕ್ಕೆ ಅಲಂಕಾರಪ್ರಾಯರಾಗಿದ್ದ ಮಂಡನ ಪಂಡಿತರ ಪತ್ನಿಯಾಗಿ ನೀನು ಮೆರೆಯುತ್ತಿರಲು : ಸನಾತನವೈದಿಕವರ್ಣಾಶ್ರಮಧರ್ಮದ ರಕ್ಷಣೆಗಾಗಿ ಭೂಮಿಯಲ್ಲಿ ಅವತರಿಸಿ ಬಂದ ಶ್ರೀಪರಮೇಶ್ವರನು ಶ್ರೀಶಂಕರಭಗವತ್ಪಾದರ ರೂಪದಲ್ಲಿ ಪರಮಹಂಸ ಪರಿವ್ರಾಜಕರಾಗಿ ಸಂಚರಿಸುತ್ತಿರಲು ;

ಸಂವಾದಮಾಪ್ಯ ಮುನಿಶಾಪಭಯಾದ್ವಿಮುಕ್ತಾ ಶ್ರೀಶಂಕರೇಣ
ಖಲು ಸಾನುನಯಂ ಸ್ತುತಾ ತ್ವಂ ।
ಶ್ರೀಶೃಂಗಶೈಲಸುಮಠೇ ಪರಮೇ ಪವಿತ್ರೇ ತುಂಗಾನದೀ-
ಪರಿಸರೇ ಸ್ಥಿತಿಮಾತನೋರ್ಷಿ ॥೧೦॥

ಶ್ರೀಶಂಕರದೇಶಿಕೇಂದ್ರರೊಡನೆ ಸಂವಾದವನ್ನು ಪಡೆದು, ದುರ್ವಾಸ ಶಾಪದಿಂದ ವಿಮುಕ್ತಳಾಗಿ, ಶ್ರೀಶಂಕರರಿಂದ ಪ್ರಾರ್ಥಿತಳಾಗಿ, ತುಂಗಾತೀರದಲ್ಲಿ ಶ್ರೀಶೃಂಗಗಿರಿಯಲ್ಲಿ ಅವರು ಸ್ಥಾಪಿಸಿರುವ ಪವಿತ್ರವಾದ ಮಠದಲ್ಲಿ ಸ್ಥಿರವಾಗಿ ನೆಲೆಸಿರುವೆ, ತಾಯೆ !

ಶ್ರೀಶಾರದೇತಿ ಮಧುರಾಮಭಿಧಾಂ ಭಜಂತೀ ಸಂಸಾರಮಗ್ನ-
ಜನತಾಸುದಯಾಪರಾ ತ್ವಂ ।
ಬ್ರಹ್ಮಾತ್ಮತಾನುಭವದಾನವಶೇನ ಸರ್ವಾಃ ಸಂತಾರಯಸ್ಯ-
ನಿಶಮಸ್ತು ತವ ಪ್ರಭಾತಂ ॥೧೧॥

'ಶ್ರೀಸಾರದಾ' ಎಂಬ ಅತಿಮಧುರವಾದ ಹೆಸರನ್ನು ಹೊಂದಿ, ಸಂಸಾರಸಾಗರದಲ್ಲಿ ಮುಳುಗಿರುವ ಜನಸಮೂಹದಲ್ಲಿ ದಯಾಪರವಶಳಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಗೆ ಬ್ರಹ್ಮಾತ್ಮತಾನುಭವವನ್ನು ಕರುಣಿಸಿ, ಅಪರನ್ನು ಉದ್ಧರಿಸು ತ್ತಿರುವಿ, ತಾಯೆ, ನಿನಗೆ ಸುಪ್ರಭಾತವು.

ಶ್ರೀವ್ಯಾಸಶಂಕರಸುರೇಶ್ವರಪದ್ಮಪಾದಾದ್ಯಾಚಾರ್ಯವರ್ಯ-
ಪರಿಪೂಜಿತಪಾದಪದ್ಮೇ ।
ಶ್ರೀಶೃಂಗಶೈಲನಿಲಯೇ ಪರದೇವತೇ ಶ್ರೀಶಾರದಾಂಬ
ಭವತಾತ್ತವ ಸುಪ್ರಭಾತಂ ॥೧೨॥

ಶ್ರೀವ್ಯಾಸರು, ಶ್ರೀಶಂಕರರು, ಶ್ರೀಸುರೇಶ್ವರರು, ಶ್ರೀಪದ್ಮಪಾದರು- ಇವರೇ ಮೊದಲಾದ ಆಚಾರ್ಯಶ್ರೇಷ್ಠರಿಂದ ವಿಧಿವತ್ತಾಗಿ ಪೂಜಿತವಾದ ಪಾದಕಮಲದಿಂದ ಶೋಭಿಸುತ್ತ ಶ್ರೀಶೃಂಗಗಿರಿಯಲ್ಲಿ ನೆಲೆಸಿರುವ ಪರದೇವತೆ ಯಾದ ಶ್ರೀಶಾರದಾದೇವಿ, ನಿನಗೆ ಸತತವೂ ಸುಪ್ರಭಾತವು.

ಶ್ರೀಶಂಕರಾರ್ಯಕರಪದ್ಮಸುಪೂಜಿತಾಂಘ್ರೇ ಚಿದ್ರೂಪಿಣಿ
ತ್ರಿಜಗತಾಂ ಪರಮಂ ನಿಧಾನಂ ।
ವಿಶ್ವಂ ಚರಾಚರಮಿದಂ ತವ ಭಾಸ ಏವ ದೇವಿ ಪ್ರಸೀದ
ಭವತಾತ್ತವ ಸುಪ್ರಭಾತಂ ॥೧೩॥

ಶ್ರೀಶಂಕರಗುರುಸಾರ್ವಭೌಮರ ಕರಕಮಲಗಳಿಂದ ಪೂಜಿತವಾದ ಪಾದ ಪದ್ಮವುಳ್ಳ ದೇವಿಯೆ, ಚಿದ್ರೂಪಳಾದ ನೀನೇ ಸಮಸ್ತಜಗತ್ತಿಗೂ ಮೂಲ ಕಾರಣಳು; ಆದ್ದರಿಂದ ಈ ಜಗತ್ತೆಲ್ಲವೂ ನಿನ್ನ ಮಾಯಾರೂಪವಾಗಿ, ನೀನು ಅದ್ವಿತೀಯಪರಮಾತ್ಮಸ್ವರೂಪಳೇ ಆಗಿರುವಿ; ನಿನಗೆ ಸುಪ್ರಭಾತವಾಗಲಿ.

ಬ್ರಹ್ಮಾಣಿ ವಾಣಿ ವರದೇ ಪರದೇವತೇ ತ್ವಾಂ ದೇವಿ ಪ್ರಸನ್ನ-
ಜನಕಲ್ಪಲತೇ ಮನೋಜ್ಞೇ ।
ಶ್ರದ್ಧಾಭರೇಣ ನಿಯಮೇನ ಸಮರ್ಚಯಂತಿ ಭಕ್ತಾಸ್ತವಾಂಬ
ಭವತಾತ್ಪಲು ಸುಪ್ರಭಾತಂ ॥೧೪॥

ಬ್ರಹ್ಮಾಣಿ, ವಾಣಿ, ವರದಾ, ಪರದೇವತಾ–ಎಂದು ಮುಂತಾಗಿ

CC-O. In Public Domain. Digitized by eGangotri

ಜಗತ್ಪ್ರಸಿದ್ಧಳಾಗಿರುವ ಶಾರದೇದೇವಿ, ಶರಣಾಗತರಾದವರ ಸಕಲೇಷ್ಟಗಳನ್ನೂ ಅನುಗ್ರಹಿಸುವ ಮನೋಹರಳಾದ ನಿನ್ನನ್ನು ಭಕ್ತರು ಶ್ರದ್ಧಾಭಕ್ತಿಸಂಪನ್ನರಾಗಿ ಆಚಾರಾದಿನಿಯಮಪೂರ್ವಕವಾಗಿ ಆರಾಧಿಸುತ್ತಾರೆ; ಅವರನ್ನು ಅನುಗ್ರಹಿಸುವುದಕ್ಕಾಗಿ ನಿನಗೆ ಯಾವಾಗಲೂ ಸುಪ್ರಭಾತವಿರಲಿ.

ಧರ್ಮೇ ರತಿಂ ಸಕಲಭೂತದಯಾಂ ಚ ನಿಷ್ಕಾಂ ಸತ್ಯವ್ರತೇ
ಜಗತಿ ಸಜ್ಜನಸಂಗತಿಂ ಚ ।
ಶ್ರೇಯಸ್ಕರಾಂ ಕಲಯ ತಾರಯ ಸರ್ವಲೋಕಂ ಸಂಸಾರಘೋರ-
ಜಲಧೇಸ್ತವ ಸುಪ್ರಭಾತಂ ॥೧೫॥

ಶ್ರೇಯಸ್ಕರವಾಗಿರುವ ಸ್ವಧರ್ಮದಲ್ಲಿ ಆಸಕ್ತಿಯನ್ನೂ, ಸಕಲಭೂತಗಳಲ್ಲಿಯೂ ದಯೆಯನ್ನೂ, ಶಾಸ್ತ್ರೀಯವ್ರತಾಚರಣೆಗಳಲ್ಲಿ ದೃಢನಿಷ್ಠೆಯನ್ನೂ, ಸದಾಚಾರಸಂಪನ್ನರಾಗಿರುವ ಸಜ್ಜನರ ಸಹವಾಸವನ್ನೂ ಉಂಟುಮಾಡಿ, ಸಂಸಾರಘೋರಸಾಗರದಲ್ಲಿ ಮುಳುಗಿರುವ ಜಗತ್ತನ್ನು ಉದ್ಧರಿಸಮ್ಮ. ನಿನಗೆ ಸುಪ್ರಭಾತವನ್ನು ಕೋರುತ್ತೇನೆ.

ನಿತ್ಯೇತರಾರ್ಥವಿಷಯೇ ಸುವಿವೇಕತಾಂ ಚ ಸಂಸಾರಭೋಗ-
ವಿಷಯೇ ವಿರಸಾಂ ಚ ಬುದ್ಧಿಂ ।
ಶಾಂತ್ಯಾದಿಸಂಪದಮಪಿ ಪ್ರವಿತೀರ್ಯ ಸಮ್ಯಗಜ್ಞಾನಗಾಧ-
ತಮಸಃ ಕುರು ಸುಪ್ರಭಾತಂ ॥೧೬॥

ನಿತ್ಯಾನಿತ್ಯವಸ್ತುವಿವೇಕವನ್ನೂ, ಸಂಸಾರಭೋಗದಲ್ಲಿ ತೀವ್ರವೂ ದೃಢವೂ ಆಗಿರುವ ವಿರಕ್ತಿಯನ್ನೂ, ಶಮದಮಾದಿಸಂಪತ್ತನ್ನೂ ಪೂರ್ಣವಾಗಿ ಅನುಗ್ರಹಿಸಿ, ಅಜ್ಞಾನವೆಂಬ ನಿಬಿಡವಾಗಿರುವ ಕತ್ತಲೆಯಿಂದ ಲೋಕಕ್ಕೆ ಸುಪ್ರಭಾತವನ್ನು ಉಂಟುಮಾಡು, ತಾಯೆ !

ಶ್ರೀಶಾರದಾಜಗನ್ಮಾತುಃ ಸುಪ್ರಭಾತಂ ಪಠಂತಿ ಯೇ ।
ತೇಷಾಂ ಶ್ರೀಶಾರದಾ ಶೀಘ್ರಂ ಸುಪ್ರಭಾತಂ ಕರೋತಿ ವೈ ॥೧೭॥

ಜಗನ್ಮಾತೆಯಾಗಿರುವ ಶ್ರೀಶಾರದಾದೇವಿಯು ಈ ಸುಪ್ರಭಾತ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ತೋತ್ರವನ್ನು ಭಕ್ತಿಯಿಂದ ಪಠಿಸುವವರಿಗೆ ದಯಾಮಯಳಾದ ಶ್ರೀಶಾರದೆಯು ಸಂಸಾರಾಂಧಕಾರದ ರಾತ್ರಿಯಿಂದ ಸುಪ್ರಭಾತವನ್ನು ಬೇಗನೆ ಕರುಣಿಸುವಳು.

ಶ್ರೀಮಚ್ಛಂಕರಭಗವತ್ಪಾದವಿರಚಿತಂ

ಶ್ರೀ ಶಾ ರ ದಾ ಭು ಜ ಂ ಗ ಪ್ರ ಯಾ ತ ಸ್ತೋ ತ್ರ ಂ

[ಜಗದ್ರಕ್ಷಣೆಗಾಗಿ ಅವತರಿಸಿಬಂದ ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರು ವೈದಿಕಸನಾತನವರ್ಣಾಶ್ರಮಧರ್ಮವನ್ನು ಕರ್ಮಭೂಮಿಯಾಗಿರುವ ಈ ಭರತಖಂಡದಲ್ಲಿ ಅವೈದಿಕಮತಗಳನ್ನು ನಿರಾಕರಿಸಿ ಸ್ಥಾಪಿಸಿ, ಆದರ ಪ್ರಚಾರಕ್ಕಾಗಿ ಶ್ರೀಶೃಂಗಗಿರಿಕ್ಷೇತ್ರದಲ್ಲಿ ಶ್ರೀಶಾರದಾದೇವಿಯನ್ನು ಪ್ರತಿಷ್ಠಿಸಿ ಪೂಜಿಸಿ, ಪ್ರಥಮ ಮತ್ತು ಪ್ರಧಾನವಾದ ಜಗದ್ಗುರುಪೀಠವನ್ನು ಸ್ಥಾಪಿಸಿದ್ದಾರೆ. ಶ್ರೀಶಾರದಾದೇವಿಯ ಅನುಗ್ರಹವನ್ನು ಪಡೆಯುವುದಕ್ಕೆ ಸಾಧನವಾಗುವಂತೆ ಭಕ್ತರಿಗೆ ಶ್ರೀಶಾರದಾದೇವಿಯ ಸ್ತೋತ್ರವನ್ನು ರಚಿಸಿ ಕೊಟ್ಟಿರುತ್ತಾರೆ. ಭುಜಂಗಪ್ರಯಾತವೃತ್ತದಲ್ಲಿರುವ ಶ್ರೀಶಾರದಾಭುಜಂಗ ಪ್ರಯಾತಸ್ತೋತ್ರವನ್ನು ನಿತ್ಯವೂ ಭಕ್ತಿಯಿಂದ ಪಠಿಸುವವರಿಗೆ ಶ್ರೀಶಾರದೆಯ ಅನುಗ್ರಹದಿಂದ ತತ್ತ್ವಜ್ಞಾನವು ಲಭಿಸಿ ಕೃತಕೃತ್ಯತೆಯು ಉಂಟಾಗುವುದು. ಅರ್ಥಸಹಿತವಾಗಿ ಸ್ತುತಿಸುವುದು ಸಫಲವಾಗುವುದರಿಂದ, ಈ ಸ್ತೋತ್ರದ ತಾತ್ಪರ್ಯವನ್ನು ಸಂಗ್ರಹವಾಗಿ ತಿಳಿಸುತ್ತೇವೆ. ಇದರಂತೆಯೇ ಇತರ ಸ್ತೋತ್ರಗಳನ್ನೂ ಅರ್ಥಸಹಿತವಾಗಿ ಪ್ರಕಟಿಸುತ್ತೇವೆ.]

ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ ಪ್ರಸಾದಾವಲಂಬಾಂ
ಪ್ರಪೂರ್ಣಾವಲಂಬಾಂ।
ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ ಭಜೇ ಶಾರದಾಂಬಾ-
ಮಜಸ್ರಂ ಮದಂಭಾಂ ॥೧॥

ಮಂಗಳಕರಗಳಾದ ಸುವರ್ಣಕಲಶಗಳಂತೆ ಶೋಭಿಸುವ ಸ್ತನದ್ವಯ

Sri Vidyabharathi Book Centre, Sringeri

CC-O. In Public Domain. Digitized by eGangotri
ಗಳನ್ನುಳ್ಳ; ಅಮೃತಪೂರ್ಣವಾದ ಕಲಶವನ್ನು ಹಿಡಿದಿರುವ; ಭಕ್ತರಿಗೆ ಆಶ್ರಯವಾಗಿರುವ ಅನುಗ್ರಹವನ್ನುಳ್ಳ; ವಿಶೇಷಪುಣ್ಯಶಾಲಿಗಳಾದವರಿಗೆ ಆಶ್ರಯಳಾಗಿರುವ; ಮಂದಹಾಸದಿಂದ ಮನೋಹರವಾಗಿ ಶರಚ್ಚಂದ್ರನಂತೆ ಬೆಳಗುವ ಮುಖದಿಂದ ಶೋಭಿಸುವ; ತೊಂಡೆಹಣ್ಣಿನಂತೆ ರಕ್ತವರ್ಣದಿಂದ ವಿರಾಜಿಸುವ ತುಟಿಗಳಿಂದ ರಂಜಿಸುವ; ಪಾತ್ಸಲ್ಯಪೂರ್ಣಳಾದ ಜಗನ್ಮಾತೆಯಾದ, ನಮ್ಮ ತಾಯಿಯೇ ಆಗಿರುವ ಶ್ರೀಶಾರದಾಂಬೆಯನ್ನು ನಿರಂತರವೂ ಸೇವಿಸುತ್ತೇನೆ – ಸರ್ವಾಪತ್ತಿನಿಂದಲೂ ನಮ್ಮನ್ನು ರಕ್ಷಿಸಿ, ಸರ್ವಶ್ರೇಯಃಸನ್ನೂ ಕರುಣಿಸು, ತಾಯೆ.

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ ಕಲಾಭಿರ್ವಿ-
ನಿದ್ರಾಂ ಕಲಾಪೈಃ ಸುಭದ್ರಾಂ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ ಭಜೇ ಶಾರದಾಂಬಾ-
ಮಜಸ್ರಂ ಮದಂಬಾಂ ॥೨॥

ದಯಾಮೃತರಸದಿಂದ ಒದ್ದೆಯಾಗಿರುವ ಕಣ್ಣುಗಳಿಂದ ಭಕ್ತರನ್ನು ಅನುಗ್ರಹಿಸುವ; ಸಂಸಾರತಾರಕವಾದ ತತ್ತ್ವಜ್ಞಾನವನ್ನು ಅನುಗ್ರಹಿಸುವ ಜ್ಞಾನಮುದ್ರೆಯಿಂದ ಶೋಭಿಸುವ;(ಸಕಲಕುಶಲವಿದ್ಯೆಗಳ ಸ್ವರೂಪಳಾಗಿರುವ; ದಿವ್ಯಾಲಂಕಾರಗಳಿಂದ ವಿರಾಜಿಸುವ; ಶ್ರೀಮತ್ತ್ರಿಪುರಸುಂದರೀಸ್ವರೂಪಳಾಗಿ ತುಂಗಭದ್ರಾತೀರದಲ್ಲಿ ನೆಲೆಸಿರುಭ; ಶ್ರೀಶಾರದಾಂಬಾಂ ಅಜಸ್ರಂ ಭಜೇ ।

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ ಸ್ವಭಕ್ತೈಕಪಾಲಾಂ
ಯಶಃಶ್ರೀಕಪೋಲಾಂ ।
ಕರೇ ತ್ವಕ್ಷಮಾಲಾಂ ಕನತ್ಪುತ್ಯಲೋಲಾಂ ಭಜೇ ಶಾರದಾಂಬಾ-
ಮಜಸ್ರಂ ಮದಂಬಾಂ ॥೩॥

ಹಣೆಯಲ್ಲಿ ಮಂಗಳತಿಲಕದಿಂದ ಶೋಭಿಸುವ; ಭಕ್ತರ ಭಕ್ತಿಪೂರ್ಣ ಗಾನದಲ್ಲಿ ಆಸಕ್ತಳಾದ; ತನ್ನ ಭಕ್ತರನ್ನು ಸರ್ವಥಾ ರಕ್ಷಿಸುವ; ಭಕ್ತರಕ್ಷಣೆಯ ಕೀರ್ತಿಯ ಕಾಂತಿಯಿಂದ ಬೆಳಗುವ ಕೆನ್ನೆಗಳ; ಕೈಯಲ್ಲಿ ಜಪಮಾಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಹಿಡಿದಿರುವ; ಪ್ರಕಾಶಿಸುವ ರತ್ನಗಳಿಂದ ಅಲಂಕೃತಳಾಗಿರುವ; ಭಜೇ ಶಾರದಾಂಬಾಮಜಸ್ರಂ ಮದಂಬಾಂ ।

ಸುಸೀಮಂತವೇಣೀಂ ದೃಶಾ ನಿರ್ಜಿತೈಣೀಂ ರಮತ್ಕೀರವಾಣೀಂ
ನಮದ್ವಜ್ರಪಾಣೀಂ ।
ಸುಧಾಮಂಥರಾಸ್ಯಾಂ ಮುದಾ ಚಿಂತ್ಯವೇಣೀಂ ಭಜೇ
ಶಾರದಾಂಬಾ ಮಜಸ್ರಂ ಮದಂಬಾಂ ॥೪॥

ಮಂಗಳಕರವಾದ ಬೈತಲೆಯ ಜಡೆಯುಳ್ಳ; ದೀರ್ಘವಾದ ಕಣ್ಣುಗಳಿಂದ ಜಿಂಕೆಗಳನ್ನು ಜಯಿಸಿರುವ; ಗಿಣಿಯಂತೆ ರಮ್ಯವಾಗಿ ಮಧುರವಾಗಿ ಮಾತನ್ನಾಡುವ; ಇಂದ್ರನೇ ಮೊದಲಾದ ಸರ್ವದೇವತೆಗಳಿಂದಲೂ ವಂದಿತಳಾದ; ಅಮೃತಪೂರ್ಣವಾದ ಮುಖವನ್ನುಳ್ಳ; ಸಂತೋಷದಿಂದ ಧ್ಯಾನ ಮಾಡಲು ಯೋಗ್ಯಳಾದ; ಭಜೇಶಾರದಾಂಬಾಮಜಸ್ರಂ ಮದಂಬಾಂ ।

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ ಲಸತ್ಸಲ್ಲತಾಂಗೀಂ
ಅನಂತಾಮಚಿಂತ್ಯಾಂ ।
ಸ್ಮರೇತ್ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ ಭಜೇ ಶಾರದಾಂಬಾ-
ಮಜಸ್ರಂ ಮದಂಬಾಂ ॥೫॥

ಶಾಂತಸ್ವರೂಪಳೂ, ಸುಂದರವೂ ಮಂಗಳಕರವೂ ಆದ ದೇಹವುಳ್ಳವಳೂ, ವಿಶಾಲವಾದ ಕಣ್ಣುಳ್ಳವಳೂ, ಬಳ್ಳಿಯಂತೆ ಓಲಾಡುವ ತೆಳ್ಳನೆಯ ಕೋಮಲಶರೀರದವಳೂ, ದೇಶಕಾಲವಸ್ತುಪರಿಚ್ಛೇದವಿಲ್ಲದೆ ಅದ್ವಿತೀಯಾಖಂಡಸ್ವರೂಪಳೂ, ಮನಸ್ಸಿಗೂ ಮಾತಿಗೂ ನಿಲುಕಲಾರದ ನಿರ್ವಿಶೇಷ ಸ್ವರೂಪಳೂ, ಜಗತ್ಸೃಷ್ಟಿಗೆ ಮೂಲಕಾರಣಳಾಗಿ, ತಪಸ್ವಿಗಳಿಂದ ಧ್ಯಾನಿಸಲ್ಪಡುವವಳೂ ಆಗಿರುವ ಆ ಶ್ರೀಶಾರದಾಂಬೆಯನ್ನು ಯಾವಾಗಲೂ ಭಜಿಸುತ್ತೇನೆ.

ಕುರಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ ಮರಾಳೇ
ಮದೇಭೇ ಪತಾಕೋಚ್ಚೈರಧಿರೂಢಾಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ ಭಜೇ
ಶಾರದಾಂಬಾಮಜಸ್ರಂ ಮದಂಬಾಂ ॥೬॥

ಜಿಂಕೆ, ಕುದುರೆ, ಸಿಂಹ, ಗರುಡ, ಹಂಸ, ಮದಗಜ, ವೃಷಭ – ಈ ವಾಹನಗಳಿಂದ ವಿಹರಿಸುವ; ಶರತ್ಕಾಲದ ಮಹಾನವಮಿಯ ದಿವಸ ಸಾಮ ವೇದಸ್ವರೂಪಳೂ ಪರಮಶಾಂತಮುಕ್ತಿಸ್ವರೂಪಳೂ ಆಗಿರುವ ಶ್ರೀಶಾರದಾಂಬಾಂ ಅಜಸ್ರಂ ಭಜೇ ।

ಜಗತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ ಭಜೇ ಮಾನಸಾಂ-
ಭೋಜಸುಭ್ರಾಂತಭೃಂಗೀಂ ।
ನಿಜಸ್ತೋತ್ರಸಂಗೀತನೃತ್ಯತ್ಪ್ರಭಾಂಗೀಂ ಭಜೇ ಶಾರದಾಂಬಾ-
ಮಜಸ್ರಂ ಮದಂಬಾಂ ॥೭॥

ಉರಿಯುವ ಅಗ್ನಿಯಂತೆ ಪ್ರಕಾಶಿಸುವ; ಲೋಕಮೋಹಕವಾದ ಶರೀರದ; ತತ್ತ್ವಜ್ಞರಾದ ಮುನಿಗಳ ಹೃತ್ಕಮಲದಲ್ಲಿ ನಿತ್ಯವೂ ವಿಹರಿಸುವ ಮುಂಬಿಯಾಗಿರುವ; ತನ್ನ ಸ್ತುತಿ, ಸಂಗೀತ, ನೃತ್ಯ –ಇವುಗಳಿಂದ ಸಂತೋಷ ಪಡುವ, ಶ್ರೀಶಾರದಾಂಬಾಂ ಅಜಸ್ರಂ ಅಪಂ ಭಜೇ ।

ಭವಾಂಭೋಜನೇತ್ರಾಜಸಂಪೂಜ್ಯಮಾನಾಂ ಲಸನ್ಮಂದಹಾಸ-
ಪ್ರಭಾವಕ್ತ್ರಚಿಹ್ನಾಂ ।
ಚಲಚ್ಚಂಚಲಾಚಾರುತಾಟಂಕಕರ್ಣಾಂ ಭಜೇ ಶಾರದಾಂಬಾ-
ಮಜಸ್ರಂ ಮದಂಬಾಂ ॥೮॥

ಶಿವವಿಷ್ಣುಬ್ರಹ್ಮರೆಂಬ ತ್ರಿಮೂರ್ತಿಗಳಿಂದಲೂ ಪೂಜಿಸಲ್ಪಡುವ; ಯಾವಾಗಲೂ ಮಂದಹಾಸದಿಂದ ಬೆಳಗುತ್ತಿರುವ ಮುಖವಿಮುದ್ರೆಯ; ಚಂಚಲವಾಗಿ ಚಲಿಸುತ್ತಿರುವ ಕರ್ಣಾಭರಣದಿಂದ ಅಲಂಕೃತಳಾಗಿರುವ ಶ್ರೀಶಾರದಾಪರಮೇಶ್ವರಿಯನ್ನು ಯಾವಾಗಲೂ ಶರಣುಹೊಂದಿ ಭಜನೆ ಮಾಡುತ್ತೇನೆ.

ಇತಿ ಶ್ರೀಶಾರದಾಮಜಸ್ರಂ ಸ್ತೋತ್ರಂ ಸಂಪೂರ್ಣಂ ।

Sri Vidyabharati Book Trust, Sringeri

CC-O. In Public Domain. Digitized by eGangotri

ಶ್ರೀಮಚ್ಛಂಕರಭಗವತ್ಪಾದವಿರಚಿತಂ

ಶ್ರೀಲಲಿತಾಪ್ರಾತಃಸ್ಮರಣ ಪಂಚರತ್ನಂ ।

[ಶ್ರೀಶಂಕರಭಗವತ್ಪಾದರವರು ವೇದೈಕಪ್ರಮೇಯವಾದ ನಿರ್ಗುಣಾದ್ವಿತೀಯತತ್ತ್ವವನ್ನೇ ಪ್ರತಿಪಾದಿಸುವವರಾದರೂ, ಸಾಧನಾವಸ್ಥೆಯಲ್ಲಿ, ಮಾಯೋಪಾಧಿಕಗಳಾಗಿರುವ ಹಲವಾರು ಸಗುಣಸ್ವರೂಪಗಳನ್ನೂ ಸೇವಿಸ ತಕ್ಕದ್ದಾಗಿದೆಯೆಂದೂ ಪ್ರತಿಪಾದಿಸಿರುತ್ತಾರೆ. "ಶಂ ನೋ ಮಿತ್ರಃ ಶಂ ವರುಣಃ" – ಮುಂತಾದಶ್ರುತಿಯೂ, ಮಿತ್ರ, ವರುಣ – ಮುಂತಾದ ದೇವತಾನುಗ್ರಹವು ಶ್ರೇಯಃಸಿದ್ಧಿಗೆ ಆಪಶ್ಯಪೆಂಬುದನ್ನು ತಿಳಿಸುತ್ತದೆ. ಶ್ರೀಲಲಿತಾಸಹಸ್ರನಾಮಾದಿಗಳಿಂದ ಆರಾಧ್ಯಳಾಗಿರುವ ಶ್ರೀಶಾರದೆಯೇ ಶ್ರೀಲಲಿತಾಪರಮೇಶ್ವರಿಯೂ ಆಗಿದ್ದಾಳೆ.]

ಪ್ರಾತಃ ಸ್ಮರಾಮಿ ಲಲಿತಾವದನಾರವಿಂದಂ ಬಿಂಬಾಧರಂ
ಪೃಥುಲಮೌಕ್ತಿಕಶೋಭಿನಾಸಂ ।
ಆಕರ್ಣದೀರ್ಘನಯನಂ ಮಣಿಕುಂಡಲಾಢ್ಯಂ ಮಂದಸ್ಮಿತಂ
ಮೃಗಮದೋಜ್ಜ್ವಲಫಾಲದೇಶಂ ॥೧॥

ಹೇ ದೇವಿ, ಲಲಿತಾಪರಮೇಶ್ವರಿ, ನಿನ್ನ ಮುಖಕಮಲವು, ತೊಂಡೆ ಹಣ್ಣಿನಂತೆ ಮೃದುಮಧುರರಕ್ತವರ್ಣದಿಂದ ರಾರಾಜಿಸುತ್ತಿರುವ ಕೆಳತುಟಿಯಿಂದಲೂ, ದೊಡ್ಡಮುತ್ತಿನ ನತ್ತಿನಿಂದ ಆಲಂಕೃತವಾಗಿರುವ ನಾಸಿಕೆಯಿಂದಲೂ; ಕಿವಿಯವರೆಗೂ ಹರಡಿರುವ ವಿಶಾಲಗಳಾದ ಕಣ್ಣುಗಳಿಂದಲೂ; ರತ್ನಕುಂಡಲಗಳಿಂದ ವಿರಾಜಿಸುತ್ತಿರುವ ಕಿವಿಗಳಿಂದಲೂ; ಆನಂದವನ್ನು ಬೀರುತ್ತಿರುವ ಮಂದಹಾಸದಿಂದಲೂ; ಕಸ್ತೂರೀತಿಲಕದಿಂದ ರಂಜಿಸುವ ಹಣೆಯಿಂದಲೂ ಮನೋಹರವಾಗಿ ಬೆಳಗುತ್ತಿದೆ. ಈ ದಿವ್ಯಲಾವಣ್ಯದ ನಿನ್ನ ಈ ಮುಖಕಮಲವನ್ನು ಪ್ರಾತಃಕಾಲದಲ್ಲಿ ನಿತ್ಯವೂ ಸ್ಮರಿಸುತ್ತೇನೆ.

ಪ್ರಾತರ್ಭಜಾಮಿ ಲಲಿತಾಭುಜಕಲ್ಪವಲ್ಲೀಂ ರಕ್ತಾಂಗುಲೀಯ-
ಲಸದಂಗುಲಿಪಲ್ಲವಾಢ್ಯಾಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಣಿಕ್ಯಹೇಮವಲಯಾಂಗದಶೋಭಮಾನಾಂ ಪುಂಡ್ರೇಕ್ಷು-
ಚಾಪಕುಸುಮೇಷುಸೃಣೀರ್ದಧಾನಾಂ ॥೨॥

ಹೇ ಜಗದೀಶ್ವರಿ, ಕೆಂಪುಹರಳಿನ ಉಂಗುರಗಳಿಂದ ಹೊಳೆಯುವ, ಚಿಗುರಿನಂತೆ ಕೋಮಲಗಳಾದ ಬೆರಳುಗಳನ್ನುಳ್ಳ; ರತ್ನಖಚಿತಗಳಾದ ಸುವರ್ಣದ ಬಳೆಗಳು, ಅಂಗದ (ಭುಜಕೀರ್ತಿ, ವಂಕಿ) -ಮುಂತಾದ ಅಭರಣಗಳಿಂದ ಪ್ರಕಾಶಿಸುವ; ಊರ್ಧ್ವಪುಂಡ್ರ, ಕಬ್ಬಿನಜಲ್ಲೆಯಬಿಲ್ಲು, ಪುಷ್ಪಬಾಣ, ಪಾಶ-ಗಳೆಂಬ ಆಯುಧಗಳನ್ನು ಭಕ್ತರಕ್ಷಣೆಗಾಗಿ ಧರಿಸಿರುವ; ಸಕಲೇಷ್ಟ ಪ್ರದಗಳಾದ ಕಲ್ಪಲತೆಗಳಾಗಿರುವ ನಿನ್ನತೋಳುಗಳನ್ನು ಪ್ರಾತಃಕಾಲದಲ್ಲಿ ಭಜಿಸುತ್ತೇನೆ.

ಪಾತರ್ನಮಾಮಿ ಲಲಿತಾಚರಣಾರಾವಿಂದಂ ಭಕ್ತೇಷ್ಟದಾನ-
ನಿರತಂ ಭವಸಿಂಧುಪೋತಂ ।
ಪದ್ಮಾಸನಾದಿಸುರನಾಯಕಪೂಜನೀಯಂ ಪದ್ಮಾಂಕುಶ-
ಧ್ವಜಸುದರ್ಶನಲಾಂಛನಾಢ್ಯಂ ॥೩॥

ಹೇ ಜಗನ್ಮಾತೆ, ಪದ್ಮ, ಅಂಕುಶ, ಧ್ವಜ (ಬಾವುಟ), ಚಕ್ರ- ಈ ಚಿನ್ಹೆಗಳಿಂದ ಪವಿತ್ರಗಳಾಗಿರುವ; ಬ್ರಹಾದಿದೇವತೋತ್ತಮರೂ ಪೂಜಿಸುವ; ಭಕ್ತರ ಸಕಲಾಭೀಷ್ಟಗಳನ್ನು ಅನುಗ್ರಹಿಸುವ; ಸಂಸಾರಸಾಗರವನ್ನು ದಾಟಿಸುವ ಹಡಗಾಗಿರುವ; ನಿನ್ನ ಈ ಚರಣಕಮಲಗಳನ್ನು ಪ್ರಾತಃಕಾಲದಲ್ಲಿ ನಿತ್ಯವೂ ವಂದಿಸುತ್ತೇನೆ.

ಪ್ರಾತಸ್ತುವೇ ಪರಶಿವಾಂ ಲಲಿತಾಂ ಭವಾನೀಂ ತ್ರಯ್ಯಂತ-
ವೇದ್ಯವಿಭವಾಂ ಕರುಣಾನವದ್ಯಾಂ ।
ವಿಶ್ವಸ್ಯ ಸೃಷ್ಟಿವಿಲಯಸ್ಥಿತಿಹೇತುಭೂತಾಂ ವಿದ್ಯೇಶ್ವರೀಂ
ನಿಗಮವಾಙ್ಮನಸಾತೀದೂರಾಂ ॥೪॥

ಪರಮೇಶ್ವರಿ, ಪರಮೇಶ್ವರನ ಸಮಸ್ತಜಗತ್ತಿನ ಉತ್ಪತ್ತಿಸ್ಥಿತಿನಾಶಕಾರ್ಯಗಳಿಗೆ ಸಹಕಾರಿಣಿಯಾದ ಪ್ರಕೃತಿಸ್ವರೂಪಳಾಗಿರುವ ;

Sri Vidyabharathi Book Centre, Sringeri

CC-O. In Public Domain. Digitized by eGangotri

ಸದ್ವಿದ್ಯಾಧಿದೇವತೆಯಾಗಿರುವ; ವೇದಗಳಿಗೂ, ಮಾತುಮನಗಳಿಗೂ ಗೋಚರ ಳಾಗದ ; ವೇದಾಂತವೇದ್ಯವಾದ ಮಹಿಮಶಾಲಿನಿಯಾಗಿ ಬ್ರಹ್ಮವಿದ್ಯಾಪ್ರದ ಳಾಗಿ ನಿರ್ದುಷ್ಟದಯಾಮಯಿಯಾದ, ಪರಶಿವಸ್ವರೂಪಳಾದ ಲಲಿತಾ ಭವಾನೀದೇವಿಯನ್ನು ಪ್ರಾತಃಕಾಲದಲ್ಲಿ ಸ್ತುತಿಸುತ್ತೇನೆ.

ಪ್ರಾತರ್ವದಾಮಿ ಲಲಿತೇ ತವ ದಿವ್ಯನಾಮ ಕಾಮೇಶ್ವರೀತಿ
ಕಮಲೇತಿ ಮಹೇಶ್ವರೀತಿ ।
ಶ್ರೀಶಾಂಭವೀತಿ ಜಗತಾಂ ಜನನೀ ಪರೇತಿ ವಾಗ್ದೇವತೇತಿ
ವಚಸಾ ತ್ರಿಪುರೇಶ್ವರೀತಿ ॥೫॥

ಹೇ ಲೋಕಮಾತೆ, ಲಲಿತಾಂಬಿಕೆ, ಪ್ರಾತಃಕಾಲದಲ್ಲಿ ಎಚ್ಚರಗೊಂಡು; ಹೇ ಲಲಿತೆ, ಪರಮೇಶ್ವರಿ, ಕಾಮೇಶ್ವರಿ, ಕಮಲೆ, ಮಹೇಶ್ವರಿ, ಶ್ರೀಶಾಂಭವಿ, ಜಗಜ್ಜನನಿ, ಪರಾದೇವತೆ, ವಾಗ್ದೇವಿ, ತ್ರಿಪುರೇಶ್ವರಿ, –ಎಂದು ಮುಂತಾದ ನಿನ್ನ ದಿವ್ಯನಾಮಗಳನ್ನು ಭಕ್ತಿಯಿಂದ ಪಠಿಸುತ್ತೇನೆ, ತಾಯಿ, ನಮ್ಮನ್ನು ಸಲಹು.

ಯಃ ಶ್ಲೋಕಪಂಚಕಮಿದಂ ಲಲಿತಾಂಬಿಕಾಯಾಃ ಸೌಭಾಗ್ಯದಂ
ಸುಲಲಿತಂ ಪಠತಿ ಪ್ರಭಾತೇ ।
ತಸ್ಮೈ ದದಾತಿ ಲಲಿತಾ ರುಚಿತಿ ಪ್ರಸನ್ನಾ ವಿದ್ಯಾಂ ಶ್ರಿಯಂ
ವಿಮಲಸೌಖ್ಯಮನಂತಕೀರ್ತಿಂ ॥೬॥

ಲಲಿತಪದಗಳಿಂದ ಶೋಭಿಸುವ, ಸಕಲಸೌಭಾಗ್ಯಗಳನ್ನು ಕರುಣಿಸುವ, ಶ್ರೀಲಲಿತಾಂಬಿಕೆಯ ಐದು ಪದ್ಯಗಳ ಈ ಸ್ತೋತ್ರವನ್ನು ಭಕ್ತಿಯಿಂದ ನಿತ್ಯವೂ ಪ್ರಾತಃಕಾಲದಲ್ಲಿ ಪಠಣಮಾಡುವವನಿಗೆ ಶ್ರೀಲಲಿತಾದೇವಿಯು ಶೀಘ್ರವಾಗಿ ಪ್ರಸನ್ನಳಾಗಿ, ಉತ್ತಮವಾದ ವಿದ್ಯೆಯನ್ನೂ, ಅಧಿಕೈಶ್ವರ್ಯವನ್ನೂ, ದುಃಖರಹಿತವಾದ ಪರಮಸುಖವನ್ನೂ, ಸತ್ಕೀರ್ತಿಯನ್ನೂ ಅನುಗ್ರಹಿಸುವಳು.

ಇತಿ ಶ್ರೀಲಲಿತಾಪ್ರಾತಃಸ್ಮರಣಪಂಚಕಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಾಣೀಪಾಣ್ಯವಲಂಬಸ್ತುತಿಃ ।

ಜಾಡ್ಯವಾರಿನಿಧಿಮಗ್ನಸುಬುದ್ಧೇ ಜಾತರೂಪಸದೃಶಚ್ಛವಿಕಾಯೇ ।
ವಾಸವಾದಿದಿವಿಷತ್ಪರಿವೇಡ್ಯೇ ವಾಣಿ ದೇಹಿ ಮಮ ಪಾಣ್ಯವ–
ಲಂಬಂ ॥೧॥

ಹೇ ವಾಣಿ, ಶ್ರೀಶಾರದಾದೇವಿ, ಜಡತೆಯ ಸಮುದ್ರದಲ್ಲಿ ಮುಳುಗಿ ಹೋಗಿರುವವರಿಗೆ ಸದ್ಬುದ್ಧಿಯನ್ನು ಕರುಣಿಸುವವಳು ನೀನು ; ಸುವರ್ಣಕ್ಕೆ ಸಮಾನವಾದ ಕಾಂತಿಯ ಶರೀರದಿಂದ ಬೆಳಗುತ್ತಿರುವೆ ; ಇಂದ್ರಾದಿದೇವತೋತ್ತಮರಿಂದ ಸ್ತುತ್ಯಳಾಗಿರುವೆ, ತಾಯೆ, ಸಂಸಾರಸಾಗರದಲ್ಲಿ ಬಿದ್ದಿರುವ ನನ್ನನ್ನು ಕೈಹಿಡಿದು ಉದ್ಧರಿಸಮ್ಮ.

ಪಾಣಿನಿರ್ಜಿತಸರೋರುಹಗರ್ವೇ ಪಾರದೇ ವಿವಿಧದುಃಖ–
ಪಯೋಧೇಃ ।
ವಾಸನಾವಿರಹಿತೈರ್ಲಘುಲಭ್ಯೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨॥

ಕಮಲಗಳ ಸೌಭಾಗ್ಯವನ್ನೂ ಮೀರಿರುವ ಕರಕಮಲೆ, ಶಾರದೇ ಅನೇಕವಿಧದುಃಖಸಮುದ್ರದಿಂದ ಭಕ್ತರನ್ನು ಪಾರಗಾಣಿಸುವವಳು ನೀನು; ಕಾಮಕ್ರೋಧಾದಿವಾಸನೆಗಳಿಲ್ಲದವರಿಗೇ ನೀನು ಶೀಘ್ರವಾಗಿ ಲಭಿಸುವವಳಾಗಿದ್ದೀಯೆ; ನನ್ನ ಈ ದುರ್ವಾಸನೆಗಳನ್ನು ಪರಿಹರಿಸಿ ನನಗೆ ನಿನ್ನ ಕರಾವಲಂಬನೆಯನ್ನು ಅನುಗ್ರಹಿಸು.

ಶೃಂಗಶೈಲಶಿಖಿರಾವೃತವಾಸೇಽನಂಗಗರ್ವಹರಶಂಭುಸಗರ್ಭೇ ।
ತುಂಗಮಂಗಲನಿದಾನಕಟಾಕ್ಷೇ ವಾಣಿ ದೇಹಿ ಮಮ

 ಪಾಣ್ಯವಲಂಬಂ ॥೩॥

CC-O. In Public Domain. Digitized by eGangotri

ಶ್ರೀಶೃಂಗಗಿರಿಶಿಖಿರದಲ್ಲಿ ಸಂತೋಷದಿಂದ ನೆಲೆಸಿರುವ ಶ್ರೀಶಾರದೆ, ಕಾಮಹರನಾದ ಶ್ರೀಪರಶಿವನ ಸಹೋದರಿಯಲ್ಲವೆ, ನೀನು! ಸಮಸ್ತ ಮಂಗಳಗಳಿಗೂ ನಿನ್ನ ಕಟಾಕ್ಷವೇ ಮೂಲಕಾರಣವು; ದೇವಿ, ನನಗೆ ನಿನ್ನ ಹಸ್ತಾವಲಂಬನೆಯನ್ನು ನೀಡಿ ರಕ್ಷಿಸು.

ಶಾರದಾಭ್ರಸದೃಶಾಂಬರವೀತೇ ನಾರದಾದಿಮುನಿಚಿಂತಿತಪಾದೇ ।
ನೀಲನೀರದಸದೃಕ್ಕಚಭಾರೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೪॥

ಶರತ್ಕಾಲದ ಮೇಘದಂತೆ ಅತ್ಯಂತಶುಭ್ರವಾದ ದುಕೂಲದಿಂದ ಅಲಂಕೃತಳಾಗಿರುವೆ; ನೀಲವರ್ಣದ ಮಳೆಗಾಲದ ಮೋಡದಂತೆ ಕಪ್ಪಾಗಿರುವ ಜಡೆಯಿಂದ ಶೋಭಿಸುತ್ತಿರುವೆ; ನಾರದರೇ ಮೊದಲಾದ ದೇವಮುನಿಗಳೂ ನಿನ್ನ ಪಾದಕಮಲಗಳನ್ನೇ ಯಾವಾಗಲೂ ಚಿಂತಿಸುತ್ತಿರುವರು; ಇಂಥ ಮಹಿಮಶಾಲಿನಿಯಾಗಿರುವ ಶ್ರೀಶಾರದಾದೇವಿ, ನನಗೆ ನಿನ್ನ ಅಭಯಹಸ್ತವನ್ನು ಕರುಣಿಸಮ್ಮ.

ಯತ್ಪಾದಾಂಬುಜಪೂಜಕವಕ್ತ್ರಾದಾಶು ನಿಃಸರತಿ ವಾಗನವದ್ಯಾ ।
ಸ್ವರ್ಧುನೀ ಹಿಮಗಿರೇರಿವ ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೫॥

ನಿನ್ನ ಪಾದಪದ್ಮಗಳನ್ನು ಆರಾಧಿಸುವವನ ಮುಖದಿಂದ, ಹಿಮವತ್ಪರ್ವತದಿಂದ ದೇವನದಿಯಾದ ಗಂಗೆಯು ಪ್ರವಾಹವು ಹೇಗೋ ಹಾಗೆ, ಪಾವನಕರಗಳಾದ ಮಾತುಗಳು ಹರಿದುಬರುತ್ತವೆ, ತಾಯೆ, ನನ್ನನ್ನು ಕೈ ಹಿಡಿದು ಕಾಪಾಡು.

ಜಾತುಚಿತ್ಕೃಣಮತೋಽಪಿ ಪದಾಬ್ಜೇ ದೇವರಾಜಸದೃಶಾನ್ಕೃ-
ಕರೋಷಿ ।
ಯತ್ತದಂಬ ಚರಣೌ ತವ ವಂದೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೬॥

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ದೇಶವಿಲ್ಲದೆಯೇ ಯಾವಾಗಲೋ ಒಂದು ಸಲ ಆಕಸ್ಮಾತ್ತಾಗಿ ನಿನ್ನ ಪಾದಕಮಲಗಳನ್ನು ನಮಸ್ಕರಿಸುವವನನ್ನೂ ಸಹ ದೇವೇಂದ್ರನಿಗೆ ಸಮಾನನನ್ನಾಗಿ ಮಾಡುವ ಮಹಿಮಶಾಲಿನಿ ಹೇ ಶಾರದೆ, ನಿನ್ನ ಅಂಥ ಪಾದಗಳನ್ನು ವಂದಿಸುವೆನು; ನನಗೆ ಆಶ್ರಯವನ್ನು ಕೊಟ್ಟು ರಕ್ಷಿಸು.

ಶಾಂತಿದಾಂತಿಮುಖಿಸಾಧನಯುಕ್ತೈರ್ವೇದಶೀರ್ಷಪರಿಶೀಲನಸಕ್ತೈಃ ।
ಆದರಾದಹರಹಃ ಪರಿಸೇವ್ಯೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೭॥

ಶಮದಮ-ಮುಂತಾದ ಸಾಧನಸಂಪತ್ತುಳ್ಳವರಾಗಿ ಉಪನಿಷತ್ತುಗಳ ಪರಮತಾತ್ಪರ್ಯಾರ್ಥವಾದ ಅದ್ವಿತೀಯಪ್ರತ್ಯಗಭಿನ್ನಪರಬ್ರಹ್ಮತತ್ತ್ವವನ್ನು ಪರಿಶೀಲಿಸುವುದರಲ್ಲಿಯೇ ನಿರತರಾದವರೂ ಸಹ ದಿನದಿನವೂ ನಿನ್ನನ್ನೇ ಸೇವಿಸುತ್ತಾರೆ; ಹೇ ವಾಣಿ, ನನಗೆ ನಿನ್ನ ಕರಾವಲಂಬನವನ್ನು ನೀಡಿ ಉದ್ಧರಿಸು.

ಕೋಶಪಂಚಕನಿಷೇಧನಪೂರ್ವಂ ಕೋಶಪಂಚಕಮಪಿ
ಪ್ರವಿಹಾಯ ।
ಯಾಂ ಪ್ರಪಶ್ಯತಿ ಯತಿರ್ಹ್ಯದಿ ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೮॥

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ –ಗಳೆಂಬ ಐದು ಕೋಶಗಳನ್ನೂ ವಿಮರ್ಶಿಸಿ, ಇವೆಲ್ಲವೂ ಅನಾತ್ಮಗಳೇ ಎಂದು ಪರಿತ್ಯಜಿಸಿ, ಯತಿವರ್ಯರು ಇವೆಲ್ಲಕ್ಕೂ ಸಾಕ್ಷಿಯಾಗಿರುವ ನಿನ್ನನ್ನೇ ಆತ್ಮವೆಂದು ಸಾಕ್ಷಾತ್ಕರಿಸುವರು, ತಾಯಿ; ನೀಡು ನೀನೆನಗೆ ಅಭಯಹಸ್ತವನು.

ವಂದ್ಯಮಾನಚರಣೇ ಸುರವೃಂದೈರ್ಗೀಯಮಾನಚರಿತೇ
ತುರಗಾಸ್ಯೈಃ ।
ಜಪ್ಯಮಾನನಿಜನಾಮ್ನಿ ಮುನಿಂದ್ರೈರ್ವಾಣಿ ದೇಹಿ ಮಮ
Sri Vidyabharathi Book Centre, Sringeriಪಾಣ್ಯವಲಂಬಂ ॥೯॥

CC-O. In Public Domain. Digitized by eGangotri

ದೇವದೇವೋತ್ತಮರೂ ನಿನ್ನ ಪಾದಪದ್ಮಗಳಿಗೆ ನಮಸ್ಕರಿಸುವರು ಹಯಗ್ರೀವಾದಿಗಳೂ ನಿನ್ನ ಮಹಿಮೆಯನ್ನು ಹಾಡುವರು; ಮುನಿವರ್ಯರೂ ನಿನ್ನ ಪವಿತ್ರನಾಮಗಳನ್ನು ನಿತ್ಯವೂ ಜಪಿಸುವರು - ದೇಹಿ ವಾಣಿ ಮಮ ತವ ಪಾಣ್ಯವಲಂಬಂ ।

ಸನ್ನಿರೀಕ್ಷ್ಯ ಕಮಲಾನಿ ಯದಂಘ್ರೀ ಸಾಮ್ಯಮಾಪ್ತುಮನಯೋ-
ಸ್ತಪಸಾಂಭಃ ।
ಕಂಠದಘ್ನಮಧಿಜಗ್ಮುರಸೌ ಸಾ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೦॥

ದೇವಿ, ನಿನ್ನ ಪಾದಗಳ ಮೃದುಮಧುರಸೌಂದರ್ಯಸೌಭಾಗ್ಯವನ್ನು ಗಮನಿಸಿ, ಅವುಗಳ ಸಮಾನತೆಯನ್ನು ಪಡೆಯುವ ಮಹದಾಸೆಯಿಂದಲೇ ಕಮಲಗಳು ಕಂಠಪರ್ಯಂತವಾದ ನೀರಿನಲ್ಲಿ ನಿಂತು ತಪಸ್ಸು ಮಾಡುತ್ತಿವೆ; ದೇಹಿ ಮಮ ಪಾಣ್ಯವಲಂಬಂ ।

ಪುಣ್ಯಮಂಬ ನ ಕೃತಂ ಮತಿಪೂರ್ವಂ ಪಾಪಮೇವ ರಚಿತಂ
ತ್ವತಿಯತ್ನಾತ್ ।
ತೇನ ತಪ್ತಮನಿಶಂ ಹೃದಯಾಬ್ಜಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೧॥

ಅಂಬ; ಶ್ರದ್ಧಾಪೂರ್ವಕವಾಗಿ ಪುಣ್ಯವನ್ನೇ ಮಾಡಬೇಕು; ಆದರೆ ನಾನು ಹಾಗೆ ಪುಣ್ಯವನ್ನು ಮಾಡಿಲ್ಲ; ಅದಕ್ಕೆ ಬದಲಾಗಿ ಪ್ರಯತ್ನಪೂರ್ವಕವಾಗಿಯೂ ಪಾಪವನ್ನೇ ಮಾಡಿರುತ್ತೇನೆ. ಈಗ ಇದನ್ನು ನೆನಸಿಕೊಂಡು ಅತ್ಯಂತದುಃಖಿಪಡುತ್ತೇನೆ; ದೇವಿ, ದೇಹಿ ಮಮ ಪಾಣ್ಯವಲಂಬಂ ।

ನಾಹಮಂಬ ಸರಸಾಂ ಚ ಸುವರ್ಣಾಮಾತನೋಮಿ ಕವಿತಾಂ
ವಿವಿಧಾರ್ಥಾಂ ।
ಕೇನ ಪೂಜಯತಿ ಮಾಂ ಭುವಿ ಲೋಕೋ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮೃದುಮಧುರಾಕ್ಷರಗಳಿಂದ ಕೂಡಿ, ರಸವತ್ತಾಗಿ, ನಾನಾರ್ಥಗಳಿಂದ ಶೋಭಿಸುವಂಥ ಕವಿತೆಯನ್ನು ರಚಿಸಲೂ ನಾನು ಸಮರ್ಥನಲ್ಲ; ಲೋಕದಲ್ಲಿ ನನ್ನನ್ನು ಆದರಿಸುವವರು ಯಾರು ? ಮಕ್ಕಳ ಮುದ್ದುಮಾತುಗಳಿಗೆ ಆನಂದಪಡುವ ತಾಯಿಯಂತೆ ನೀನೇ ನನ್ನ ಪ್ರಾರ್ಥನೆಗೆ ಒಲಿದು ರಕ್ಷಿಸಬೇಕು –ವಾಣಿ ದೇಹಿ ಮಮ ಪಾಣ್ಯವಲಂಬಂ ।

ಅಕ್ಷಪಾದಕಣಭುಕ್ಕಣಿನಾಥೈರ್ದೇವಹೂತಿಸುತಜೈಮಿನಿಮುಖ್ಯೈಃ ।
ಪ್ರೋಕ್ತಶಾಸ್ತ್ರನಿಚಯೇ ನ ಹಿ ಬುದ್ಧಿರ್ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೩॥

ಅಕ್ಷಪಾದರು, ಕಣಾದರು, ಪತಂಜಲಿಗಳು, ಕಪಿಲರು, ಜೈಮಿನಿಗಳು, ವ್ಯಾಸರು – ಈ ಮಹಾಮುನಿಗಳು ಪ್ರಚಾರಮಾಡಿರುವ ನ್ಯಾಯ, ವೈಶೇಷಿಕ, ವ್ಯಾಕರಣ, ಯೋಗ, ಮೀಮಾಂಸಾಶಾಸ್ತ್ರಗಳ ಪೂರ್ಣಪಾಂಡಿತ್ಯ ವುಳ್ಳವನಿಗೇನೇ ವೇದವೇದಾಂತಗಳ ಪರಮತತ್ತ್ವವು ಅನುಭವಗಮ್ಯವಾಗಿ ಶ್ರೇಯಃಸು ಸಿದ್ಧಿಸುವುದು; ದೇವಿ, ನನಗೆ ಈ ಶಾಸ್ತ್ರಗಳು ಒಂದೂ ತಿಳಿಯವು. ನೀನೇ ನನಗೆ ಗತಿ – ವಾಣಿ ದೇಹಿ ಮಮ ಪಾಣ್ಯವಲಂಬಂ ।

ನೈವ ಪಾದಸರಸೀರುಹಯೋಸ್ತೇ ಪೂಜನಂ ಪ್ರತಿದಿನಂ
ಪ್ರಕರೋಮಿ ।
ಹೇತುಶೂನ್ಯಕರುಣಾಜನಿಭೂಮೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೪॥

ನಿನ್ನ ಚರಣನಳಿನಗಳನ್ನು ನಿತ್ಯವೂ ಯಥಾವಿಧಿಯಾಗಿ ಅರ್ಚಿಸುವ ವರು ನಿನ್ನ ಅನುಗ್ರಹಕ್ಕೆ ಪಾತ್ರರಾಗುವರು; ಆದರೆ ನಾನು ಹೀಗೆ ನಿನ್ನನ್ನು ಆರಾಧಿಸಿಲ್ಲ; ಆದರೆ, ಯಾವ ಕಾರಣವನ್ನೂ ಅಪೇಕ್ಷಿಸದೆಯೇ ಸಹಜವಾದ ದಯೆಗೆ ನೀನು ತೌರುಮನೆಯಾಗಿದ್ದೀಯೆ ; ದೇಹಿ ವಾಣಿ ಮಮ ಪಾಣ್ಯವಲಂಬಂ ।

ಸನ್ನಿರುಧ್ಯ ಹೃದಯಾಂಬುಜಮಧ್ಯೇ ಸ್ವಾಂತಮಂಬ ತವ
ಸುಂದರಮೂರ್ತೇಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನಮಪ್ಯನುದಿನಂ ನ ಹಿ ಕುರ್ವೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೫॥

ನಿನ್ನ ಅನುಗ್ರಹವು ಲಭಿಸಬೇಕಾದರೆ, ಮನಸ್ಸನ್ನು ಇತರ ವಿಷಯ ವಿಷಯಗಳಿಗೆ ಹೋಗದಂತೆ ತಡೆದು. ಪರಮಸುಂದರವಾದ ನಿನ್ನ ರೂಪವನ್ನೇ ಮನಸ್ಸಿನ ಹೃದಯಕಮಲದಲ್ಲಿ ಸ್ಥಿರಗೊಳಿಸಬೇಕು. ಇಂಥ ಸ್ಥಿತಿಗೆ ಸಾಧನವಾದ ನಿನ್ನ ಧ್ಯಾನವನ್ನು ನಾನು ನಿತ್ಯವೂ ಮಾಡಲು ಸಮರ್ಥ ನಾಗಿಲ್ಲ. ಇದನ್ನು ಕರುಣಿಸಿ ಉದ್ಧರಿಸು ತಾಯೆ.

ದುಃಖಿಜನ್ಮವಸುಧಾ ವಿಷಯಾ ಇತ್ಯಾದರೇಣ ಗುರುಭಿಃ
ಶ್ರುತಿಶೀರ್ಷೈಃ ।
ಬೋಧಿತೋऽಪಿ ನ ಹಿ ಯಾಮಿ ವಿರಕ್ತಿಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೬॥

ಶಬ್ದಸ್ಪರ್ಶರಸಗಂಧಗಳೆಂಬ ವಿಷಯಗಳು ದುಃಖವನ್ನು ಉಂಟು ಮಾಡುವ ಭೂಮಿ – ಎಂದು ನಮ್ಮ ಗುರುವರ್ಯರೂ, ಪ್ರಮಾಣಗಳಾಗಿ ರುವ ವೇದಾಂತಗಳೂ ಆದರದಿಂದ ತಿಳಿಸುತ್ತವೆ; ಆದರೂ ನನಗೆ ಇವುಗಳಲ್ಲಿ ವಿರಕ್ತಿಯು ಉಂಟಾಗಿಲ್ಲ; ತಾಯಿಯೇ, ನೀನೇ ಈ ವಿರಕ್ತಿಯನ್ನು ಅನು ಗ್ರಹಿಸಿ ನನ್ನನ್ನು ಉದ್ಧರಿಸಬೇಕು.

ಪುತ್ರಮಿತ್ರಗೃಹದಾರಜನನ್ಯೋ ಭ್ರಾತೃಬಂಧುಧನಭೃತ್ಯಮುಖಾ
ವಾ ।
ನೈವ ಕಾಲವಶಗಸ್ಯ ಸಹಾಯಾ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೭॥

ಮಕ್ಕಳು, ಮಿತ್ರರು, ಮನೆ, ಮಠ, ಆಸ್ತಿ, ತಾಯಿತಂದೆಗಳು, ಸಹೋದರರು, ಬಂಧುವರ್ಗದವರು, ಅಳುಕಾಳುಗಳು, ಧನಧಾನ್ಯಗಳು – ಇವುಗಳು ಯಾವುವೂ ಮೃತ್ಯುವಶನಾದವನಿಗೆ ಅದನ್ನು ತಪ್ಪಿಸಲು ಏನೂ ಸಹಾಯಗಳಾಗುವುದಿಲ್ಲ; ನಿನ್ನ ಅನುಗ್ರಹವೊಂದೇ ಮೃತ್ಯುಪರಿಹಾರಕವು –

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ಜನನಿ, ನೀನೇ ನನಗೆ ಆಶ್ರಯಳು – ದೇಹಿ ದೇವಿ ಮಮ ಪಾಣ್ಯವಲಂಬಂ ।

ಏಕಮೇವ ಸದಬಾಧಿತಮನ್ಯತ್ತುಚ್ಛಮಿತ್ಯಸಕೃದಾಗಮಶೀರ್ಷಂ ।
ವಕ್ತ್ಯಥಾಪಿ ನ ನಿವೃತ್ತಿರನಿತ್ಯಾದ್ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೮॥

ಅದ್ವಿತೀಯಬ್ರಹ್ಮವೊಂದೇ ಪರಮಾರ್ಥಸತ್ಯವಸ್ತು; ಇತರವೆಲ್ಲವೂ ಭ್ರಾಂತಿಕಲ್ಪಿತವು –ಎಂದು ವೇದಾಂತಗಳು ಸಾರಿಸಾರಿ ಉಪದೇಶಿಸುತ್ತವೆ; ಆದರೂ ನನಗೆ ಇಂಥ ಅನಿತ್ಯಪ್ರಪಂಚದಲ್ಲಿ ವಿರಕ್ತಿಯು ಉಂಟಾಗಿಲ್ಲ, ಈ ತತ್ತ್ವವು ಅನುಭವಕ್ಕೆ ಬರದೆ ಶ್ರೇಯಃಸ್ಸು ಸಿದ್ಧಿಸುವುದಿಲ್ಲ. ಆದಕಾರಣ, ದೇವಿ, ನಿನ್ನ ಅನುಗ್ರಹವನ್ನು ನೀಡು - ದೇಹಿ ಮಮ ತವ ಪಾಣ್ಯವಲಂಬಂ ।

ಜನ್ಮಮೃತ್ಯುಮಯನೀರಧಿಮಧ್ಯೇ ಮಜ್ಜತೋ ವಿವಿಧ-
ರುಜ್ಮಿಕರಾಢ್ಯೇ ।
ಪಶ್ಯತೋಪಿ ನ ಹಿ ಭೀತಿರನೇಕಾನ್ವಾಣಿ ದೇಹಿ ಮಮ
ಪಾಣ್ಯವಲಂಬಂ ॥೧೯॥

ನಿರಂತರವೂ ಜನನಮರಣಗಳನ್ನು ಅನುಭವಿಸುತ್ತಿರುವಂಥ, ನಾನಾವಿಧದೈಹಿಕಮಾನಸಿಕ ಆಧಿವ್ಯಾಧಿಗಳೆಂಬ ತಿಮಿತಿಮಿಂಗಿಲಮಕರಾದಿಗಳಿಂದ ಪೀಡೆಯನ್ನುಳ್ಳ ಈ ಅಗಾಧಾಪಾರದುಃಖಮಯಸಂಸಾರಸಾಗರದಲ್ಲಿ ಮುಳುಗಿರುವ ಲೋಕವನ್ನೆಲ್ಲ ನೋಡಿಯೂ ನನಗೆ ಇದರಿಂದ ಭಯವು ಉಂಟಾಗುತ್ತಿಲ್ಲ. ಇಂಥ ಜಡನೂ ಅಜ್ಞನೂ ಆಗಿರುವ ನನಗೆ ನಿನ್ನ ಕೈಯ ಅವಲಂಬನೆಯನ್ನು ಕೊಟ್ಟು ಉದ್ಧರಿಸು.

ತ್ವತ್ಪದಾಂಬುರುಹಯುಗ್ಮಮುಪಾಸ್ಯ ಪ್ರಾಕ್ತನಾಘಪರಿಮಾರ್ಜನ-
ದಕ್ಷಂ ।
ನಾಸ್ತಿ ತಾರಣವಿಧಾನಸಮರ್ಥಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೦॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಾದಿಕಾಲದಿಂದಲೂ ಕೂಡಿಹಾಕಿಕೊಂಡು ಬಂದಿರುವ ಪಾಪರಾಶಿಯನ್ನು ಪರಿಹರಿಸಿ, ಈ ಸಂಸಾರಸಮುದ್ರದಿಂದ ಪಾರುಗಾಣಿಸುವುದರಲ್ಲಿ ನಿನ್ನ ಪಾದಕಮಲಗಳನ್ನು ಬಿಟ್ಟು ಬೇರೆ ಯಾವ ಉಪಾಯವೂ ಇರುವುದಿಲ್ಲ, ದೇವಿ, ದೇಹಿ ವಾಣಿ ಮಮ ತವ ಪಾಣ್ಯವಲಂಬಂ ।

ಬಾಲಚಂದ್ರಪರಿತುಂಬಿತಶೀರ್ಷೇ ಬಾಹುಸಕ್ತಕನಕಾಂಗದರಮ್ಯೇ ।
ಕಂಠಲೋಲವರಮೌಕ್ತಿಕಹಾರೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೧॥

ನಿನ್ನ ಶಿರಸ್ಸಿನಲ್ಲಿ ಬಾಲಚಂದ್ರನು ಬೆಳಗುತ್ತಿದ್ದಾನೆ; ಸುವರ್ಣದ ಭುಜಕೀರ್ತಿಗಳಿಂದ ನಿನ್ನ ತೋಳುಗಳು ರಾರಾಜಿಸುತ್ತಿವೆ; ಕಂಠದಲ್ಲಿ ಮುತ್ತಿನ ಹಾರಗಳು ಕಂಗೊಳಿಸುತ್ತಿವೆ. ಸರ್ವಾಲಂಕಾರಶೋಭಿತಳಾದ ಶ್ರೀಶಾರದೆ, ದೇಹಿ ಮಮ ತವ ಪಾಣ್ಯವಲಂಬಂ ।

ಆನನೇನ ಚರಣೇನ ಕಟಾಕ್ಷೈಃ ನೀರಜಾಸನಮನೋಹರಕಾಂತೇ ।
ಚಂದ್ರಮಂಬುಜಮಲಿಂ ಚ ಹಸಂತೀ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೨॥

ಶ್ರೀಬ್ರಹ್ಮದೇವನ ಮನಸ್ಸನ್ನೂ ಸೂರೆಗೊಳ್ಳುವ ಸುಂದರಿ, ನಿನ್ನ ಮುಖದಿಂದ ಚಂದ್ರನನ್ನೂ, ಪಾದಗಳಿಂದ ಕಮಲಗಳನ್ನೂ, ಕಡೆಗಣ್ಣ ನೋಟದಿಂದ ದುಂಬಿಗಳನ್ನೂ ತಿರಸ್ಕರಿಸಿ ಹಾಸ್ಯಮಾಡುತ್ತಿದ್ದೀಯೆ! ಸರ್ವಾಂಗಸುಂದರಿ, ದೇವಿ, ದೇಹಿ ಮೇ ತವ ಪಾಣ್ಯವಲಂಬಂ ।

ಮಧ್ಯನಿರ್ಜಿತಮೃಗಾಧಿಪಗರ್ವೇ ಮತ್ತವಾರಣಸದೃಗ್ಗತಿಶೀಲೇ ।
ಮಂಜುಶಿಂಜಿತಮಹಾಭರಣಾಢ್ಯೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೩॥

ನಡುವಿನಿಂದ ಸಿಂಹದ ಮಧ್ಯವನ್ನೂ ಜಯಿಸಿರುವೆ; ಮತ್ತಗಜಗಮನದಿಂದ ವಿರಾಜಿಸುವೆ; ಮೃದುಮಧುರವಾಗಿ ಧ್ವನಿಗೈವ ಆಭರಣಗಳಿಂದ ಶೋಭಿಸುವೆ; ತಾಯೇ, ವಾಣಿ ದೇಹಿ ಮಮ ಪಾಣ್ಯವಲಂಬಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಪಮಂಬ ವಿನಿವಾರ್ಯ ಸಮಸ್ತಂ ಪಾಪಮಪ್ಯಹರಹಃ
ಕೃತಮಾಶು ।
ಚಿತ್ತಶುದ್ಧಿಮಚಿರಾತ್ಕುರು ಮಾತರ್ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೪॥

ದಿನದಿನವೂ ನಾನು ಮಾಡುವ ಪಾಪವನ್ನು ಬೇಗನೆ ಪರಿಹರಿಸಿ, ಅದರಿಂದಾಗುವ ದುಃಖವನ್ನೂ ಕಳೆದು, ತತ್ತ್ವಜ್ಞಾನಸಿದ್ಧಿಗೆ ಅವಶ್ಯವಾಗಿರುವ ಚಿತ್ತಶುದ್ಧಿಯನ್ನು ಉಂಟುಮಾಡು, ತಾಯಿ: ವಾಣಿ ದೇಹಿ ಮಮ ಪಾಣ್ಯವಲಂಬಂ ॥

ಪಾದಪದ್ಮಯುಗಮರ್ದನರೂಪಾ ಪಾತ್ರವಸ್ತ್ರಪರಿಶುದ್ಧಿ-
ಮುಖಾ ವಾ ।
ಶ್ರೀಗುರೋರ್ನ ಹಿ ಕೃತಾ ಬತ ಸೇವಾ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೫॥

ಗುರುವರ್ಯರ ಕಾಲೊತ್ತುವಿಕೆ, ಅವರ ಆಹ್ನಿಕದ ಪಾತ್ರೆಗಳನ್ನು ತೊಳೆಯುವಿಕೆ, ಅವರ ವಸ್ತ್ರಗಳನ್ನು ಒಗೆದು ಶುದ್ಧಿಮಾಡುವಿಕೆ -ಇವೇ ಮೊದಲಾದ ಯಾವ ಗುರುಸೇವೆಯನ್ನೂ ನಾನು ಮಾಡಿಲ್ಲ; ನನಗೆ ಗುರ್ವನುಗ್ರಹಲಭ್ಯವಾದ ತತ್ತ್ವಜ್ಞಾನವು ದೊರೆಯುವುದೆಂತು ? ಹೇ ವಾಣಿ, ನೀನೇ ನನಗೆ ಗತಿಯಾಗಿರುವೆ; ನಿನ್ನನ್ನೇ ಶರಣುಹೊಂದುತ್ತೇನೆ; ವಾಣಿ ದೇಹಿ ಮಮ ಪಾಣ್ಯವಲಂಬಂ ।

ಮಂತ್ರರಾಜಲಯಪೂರ್ವಕಯೋಗಾನ್ಯೋಗಿನೀಹೃದಯಮುಖ್ಯ-
ಸುತಂತ್ರಾನ್ ।
ನೈವ ವೇದ್ಮಿ ಕರುಣಾಮೃತರಾಶೇ ಪಾಣಿ ದೇಹಿ ಮಮ
ಪಾಣ್ಯವಲಂಬಂ ॥೨೬॥

ಮಂತ್ರರಾಜವನ್ನಾಗಲಿ, ಲಯಪೂರ್ವಕವಾದ ಯೋಗವನ್ನಾಗಲಿ, ಯೋಗಿನೀಹೃದಯ -ಮೊದಲಾದ ತಂತ್ರಶಾಸ್ತ್ರವನ್ನಾಗಲಿ ನಾನು ತಿಳಿದಿಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯೆ. ದಯಾಸಾಗರಳಾಗಿರುವ ನೀನೇ ದೇಹಿ ಮಮ ಪಾಣ್ಯವಲಂಬಂ, ಪರಿಪಾಹಿ ।

ಕಾಮಲೋಭಮದಪೂರಿತಚೇತಃಪ್ರಾಣಿದೂರನಿಜಪಾದ-
ಪಯೋಜೇ ।
ಕಾಮನಿರ್ಮಥನದಕ್ಷಸಗರ್ಭ್ಯೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೭॥

ಕಾಮಕ್ರೋಧಲೋಭಮದಮಾತ್ಸರ್ಯಗಳೆಂಬ ಅರಿಷಡ್ವರ್ಗಗಳಿಂದ ತುಂಬಿರುವ ಅಂತಃಕರಣದವರಿಗೆ ನಿನ್ನ ಪಾದಪದ್ಮಗಳು ಅತಿದೂರಗಳೇ ಸರಿ! ಆದರೂ, ಕಾಮನನ್ನು ದಹಿಸಿರುವ ಶ್ರೀಪರಮೇಶ್ವರನ ಸಹೋದರಿಯಲ್ಲವೆ, ನೀನು ? ನನ್ನ ಮನಸ್ಸಿನಲ್ಲಿರುವ ಈ ಕಾಮಾದಿದೋಷಗಳನ್ನು ಪರಿಹರಿಸುವ ಸಮರ್ಥಳು. ಇವುಗಳನ್ನು ನಿವಾರಿಸಿ ಮಮ ದೇಹಿ ತವ ಪಾಣ್ಯವಲಂಬಂ ।

ಅಂಗಯಷ್ಟಿರುಚಿನಿರ್ಜಿತಭರ್ಮೇ ಕುಂಭಿಕುಂಭಪರಿಪಂಥಿ-
ಕುಚಾಢ್ಯೇ ।
ಭೃಂಗನೀಲಚಿಕುರೇ ತನುಮಧ್ಯೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೮॥

ನಿನ್ನ ದೇಹಕಾಂತಿಯು ಚಿನ್ನಕ್ಕಿಂತಲೂ ಅತಿಶಯವಾಗಿದೆ; ಮದಗಜದ ಕುಂಭಸ್ಥಳಗಳನ್ನು ನಿನ್ನ ಸ್ತನಗಳು ಸ್ಪರ್ಧಿಸುತ್ತವೆ; ದುಂಬಿಗಳಂತೆ ನಿನ್ನ ಮುಂಗುರುಳುಗಳು ನೀಲವಾಗಿ ರಂಜಿಸುತ್ತಿವೆ; ವಾಣಿ ದೇಹಿ ಮಮ ಪಾಣ್ಯವಲಂಬಂ ।

ಸ್ವಾಂಘ್ರಿಸೇವನಸಮಾಗತಕಾಷ್ಮಾಕಾಂತದಾರಕರಮರ್ದಿತಪಾದೇ ।
ಸ್ವಾಮಿನಿ ತ್ರಿಜಗತಾಂ ಧೃತವೀಣೇ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೨೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಸೇವೆಗಾಗಿಯೇ ಬಂದಿರುವ ದಿಕ್ಪಾಲಕರ ರಮಣಿಯರು ನಿನ್ನ ಪಾದಕಮಲಗಳನ್ನು ಒತ್ತುತ್ತ ಸೇವಿಸುತ್ತಿರುವರು, ಮೂರು ಲೋಕಕ್ಕೂ ಒಡೆಯಳಾಗಿರುವ ತಾಯೇ, ದೇಹಿ ಮಮ ಪಾಣ್ಯವಲಂಬಂ ।

ನೀಲನಾಗನಿವಹಾ ವಿವಿಶುರ್ಯದ್ವೇಣಿಕಾಂ ಮುಹುರವೇಕ್ಷ್ಯ
ಬಿಲಾನಿ ।
ಲಜ್ಜಯಾಶು ವಿಧಿಭಾಮಿನಿ ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೩೦॥

ಹೇ ಬ್ರಹ್ಮದೇವನ ರಾಣಿ, ವಾಣಿ, ನೀಲವೂ ನೀಳವೂ ಆಗಿರುವ ನಿನ್ನ ಮೃದುಮನೋಹರಜಡೆಯನ್ನು ನೋಡಿ ನೋಡಿ ಲಜ್ಜೆಹೊಂದಿ ಕಾಳಸರ್ಪಗಳು ಬಿಲಗಳಲ್ಲಿ ಅಡಗಿಕೊಂಡಿವೆ; ನೀಲನಾಗವೇಣಿ ಹೇ ವಾಣಿ, ಮಮ ದೇಹಿ ತವ ಪಾಣ್ಯವಲಂಬಂ ।

ಶಾಂತಿದಾಂತಿವಿರತಿಪ್ರಮುಖಾ ಮಾಂ ಮೋಹಕೋಪಮುಖಿ-
ರೋಗವಿಶೀರ್ಣಂ ।
ವೀಕ್ಷ್ಯ ಯಾಂತಿ ತರಸಾ ಬಹುದೂರಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೩೦॥

ಮೋಹ, ಕೋಪ –ಮುಂತಾದ ಆಂತಃಕರಣದ ರೋಗಗಳಿಂದ ಶಿಥಿಲನಾಗಿರುವ ನನ್ನನ್ನು ಕಂಡು, ಶಮದಮವೈರಾಗ್ಯ ಮೊದಲಾದ ಸದ್ಗುಣಗಳು ನನ್ನನ್ನು ತ್ಯಜಿಸಿ ಬಹುದೂರ ಓಡಿಹೋಗಿವೆ; ನನಗೆ ಈಗ ನೀನಲ್ಲದೆ ಬೇರೆ ಗತಿಯಿಲ್ಲ; ವಾಣಿ ದೇಹಿ ಮಮ ಪಾಣ್ಯವಲಂಬಂ ।

ಕಾಕಲೋಕಸದೃಶಃ ಪಿಕಲೋಕಃ ಕೇಕಿಜಾಲಮಪಿಶೋಕಿ
ನಿತಾಂತಂ ।
ತ್ವದ್ವಿಚೇಃಶ್ರವಣತಃ ಖಲು ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೩೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮೃದುಮಧುರಹಿತಕರವಚನವನ್ನು ಕೇಳಿ ಕೋಗಿಲೆಗಳು ಕಾಗೆಗಳಂತಾಗಿವೆ; ನವಿಲುಗಳೂ ದುಃಖಿತಗಳಾಗಿವೆ; ಇಂಥ ಮಹಿಮಶಾಲಿನಿ ವಾಣಿ, ದೇಹಿ ಮಮ ಪಾಣ್ಯವಲಂಬಂ।

ರಾಜರಾಜಪದವೀಂ ಕ್ಷಣಮಾತ್ರಾದ್ಯಾತಿ ಯತ್ಪದಸರೋರು-
ಹನತ್ಯಾ ।
ದೀನರಾಡಪಿ ಜನೋ ಭುವಿ ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೩೫॥

ನಿನ್ನ ಪಾದಕಮಲಗಳ ವಂದನಮಾತ್ರದಿಂದಲೇ ಪರಮದರಿದ್ರನೂ ಸಹ ಕ್ಷಣಮಾತ್ರದಲ್ಲಿಯೇ ಕುಬೇರನ ಪದವಿಯನ್ನಲಂಕರಿಸುವನು. ಇಂಥ ಮಹಿಮವತಿಯಾದ ಶ್ರೀವಾಣಿ, ಮಮ ದೇಹಿ ಪಾಣ್ಯವಲಂಬಂ।

ಶೀಘ್ರಕಾವ್ಯಕರಣೇऽಂಬ ಪಟುತ್ವಂ ಯಾಂತಿ ಮೂಕಬಧಿರಾದಿಮ-
ಮಮತ್ಯಾ ।
ಯತ್ಪದಪ್ರಣತಿತೋ ಭುವಿ ಸಾ ತ್ವಂ ವಾಣಿ ದೇಹಿ ಮಮ
ಪಾಣ್ಯವಲಂಬಂ ॥೩೪॥

ಮೂಕರೂ ಕಿವುಡರೂ ಮಂದಪ್ರಜ್ಞರೂ ಸಹ ನಿನ್ನ ಪಾದಪದ್ಮಗಳ ವಂದನೆಮಾತ್ರದಿಂದ ಶೀಘ್ರವಾಗಿ ಕಾವ್ಯರಚನೆಯಲ್ಲಿ ಪಟುಗಳಾಗುತ್ತಾರೆ; ನಿನ್ನ ದಯೆಯಿಂದ ದಡ್ಡನೂ ಪ್ರಾಜ್ಞನಾಗುತ್ತಾನೆ. ಅಂಥ ದೇವಿ, ಮಮ ದೇಹಿ ಕರಾವಲಂಬಂ।

ಬ್ರಾಹ್ಮಿ ಭಾರತಿ ಸರಸ್ವತಿ ಭಾಷೇ ವಾಕ್ಸಾವಿತ್ರಿ ಕಮಲೋದ್ಭವ-
ಜಾಯೇ ।
ಪಾಣಿಪಂಕಜಲಸದ್ವರವೀಣೇ ವಾಣಿ ದೇಹಿ ಮಮ ಪಾಣ್ಯ-
ವಲಂಬಂ ॥೩೫॥

ಬ್ರಾಹ್ಮೀ, ಭಾರತೀ, ಸರಸ್ವತೀ, ಭಾಷಾ, ವಾಕ್, ಸಾವಿತ್ರೀ, ಬ್ರಹ್ಮ-

Sri Vidyabharathi Book Centre, Sringeri

CC-0. In Public Domain. Digitized by eGangotri

ನರಾಣ್ಮಕರಕಟಾಕ್ಷಲಬ್ಧೇ ಪ್ರಣತಜನಸ್ಯ ಧರಸೇರುಮಪಳೆ ಎಂದು ಮುಂತಾದ ಹೆಸರುಗಳು ನಿನಗೆ ಅನ್ವರ್ಥವಾಗಿಯೇ ಬಿರುದಾವಳಿಗಳಾಗಿವೆ. ಹೇ ವಾಣಿ, ನನ್ನನ್ನು ಉದ್ಧರಿಸುವುದಕ್ಕಾಗಿ ನಿನ್ನ ಕರಾವಲಂಬನೆಯನ್ನು ನನಗೆ ದಯೆಯಿಂದ ನೀಡಿ ರಕ್ಷಿಸು.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಶೃಂಗಗಿರಿ ಶ್ರೀಜಗದ್ಗುರುವರ್ಯಸ್ಯ ಶ್ರೀಮತ್ಸಚ್ಚಿದಾನಂದವಾಭಿನವನರಸಿಂಹಭಾರತೀ ಸ್ವಾಮಿನಃ ಕೃತಿಷು ಶ್ರೀವಾಣೀಪಾಣ್ಯವಲಂಬನಸ್ತವಃ

ಶೃಂಗಗಿರಿಶ್ರೀಶಾರದಾಜಗದ್ಗುರುವರ್ಯಶ್ರೀಮಚ್ಚಂದ್ರಶೇಖರಭಾರತೀ ವಿರಚಿತಂ

ಶ್ರೀಶಾರದಾಭುಜಂಗಂ ।

ಪುರಾನೇಕಜನ್ಮಾರ್ಜಿತಾಗಣ್ಯಪುಣ್ಯೈರ್ಯದಾಪ್ತಂ ಮಯಾ
ಶಾರದಾಭಿಖ್ಯಿಭಾಗ್ಯಂ ।
ದಯಾರ್ದ್ರಂ ಗುರೂತ್ತಂಸಸಂಕೃಪ್ತಚಕ್ರಸ್ಥಿತಂ ತತ್ಸದಾ
ಮನ್ಮನಸ್ಯಾವಿರಸ್ತು ॥೧॥

ಶ್ರೀಸದ್ಗುರುಶ್ರೇಷ್ಠರಾದ ಶ್ರೀಮದ್ಭಗವತ್ಪಾದಾಚಾರ್ಯರಿಂದ ಶ್ರೀ ಚಕ್ರದಲ್ಲಿ ಸ್ಥಾಪಿತವಾದ ಕರುಣಾಮಯವಾದ ಶ್ರೀಶಾರದೆಯೆಂಬ ಪರಮಭಾಗ್ಯವು, ಹಿಂದಿನ ಅನಂತಾನಂತಜನ್ಮಗಳಿಂದ ಗಳಿಸಿದ್ದ ಅಸಂಖ್ಯ ಪುಣ್ಯದ ಫಲವಾಗಿ ಲಭಿಸಿದೆ : ಇದು ನನ್ನ ಮನಸ್ಸಿನಲ್ಲಿ ಯಾವಾಗಲೂ ಪ್ರತ್ಯಕ್ಷವಾಗಿ ನೆಲೆಸಿರಲಿ.

CC-O. In Public Domain. Digitized by eGangotri

ನ ಮಂತ್ರಂ ನ ಯಂತ್ರಂ ನ ವಾ ಸ್ತೋತ್ರರೀತಿಂ ವಿಜಾನಾಮಿ
ವಕ್ತುಂ ಚ ಮದ್ದುಃಖರೀತಿಂ ।
ತ್ವದಂಘ್ರಿಪ್ರಣಮ್ಯೋ ನ ಪಾತ್ರಂ ಶುಚೇಃ ಸ್ಯಾದಿತಿ ತ್ವಾಂ
ಪ್ರಪದ್ಯೇ ತವೈವ ಪ್ರಸಾದಾತ್ ॥೨॥

ನಿನ್ನನ್ನು ಆರಾಧಿಸಿ ಸಂತೋಷಪಡಿಸುವ ಮಂತ್ರವನ್ನಾಗಲಿ, ಯಂತ್ರವನ್ನಾಗಲಿ. ಸ್ತೋತ್ರಮಾಡುವರೀತಿಯನ್ನಾಗಲಿ, ಕಡೆಗೆ ನನ್ನ ದುಃಖವನ್ನು ಹೇಳಿಕೊಳ್ಳುವುದನ್ನು ಸಹ ನಾನು ಅರಿಯೆನು, ತಾಯೆ; ನಿನ್ನ ಚರಣನಖಗಳನ್ನು ನಮಸ್ಕರಿಸುವವನು ಶೋಕಕ್ಕೆ ಗುರಿಯಾಗುವುದಿಲ್ಲವೆಂದಿಷ್ಟನ್ನು ಮಾತ್ರ ನಿನ್ನ ಅನುಗ್ರಹದಿಂದಲೇ ತಿಳಿದಿದ್ದೇನೆ ; ಆದ್ದರಿಂದ ನಿನ್ನನ್ನೇ ಮರೆಹೊಕ್ಕಿರುವನು.

ಭವಾಂಭೋಧಿಮಗ್ನಂ ಭವಾದೈವ ಸುದೂರಂ ವಿಸೃಷ್ಟಂ
ಮಹಾಪಾಪಗೇಹಾಯಮಾನಂ ।
ವಿವೇಕಾದಿಹೀನಂ ದಯಾನೀರಧೇ ತೇ ಮಮಾತ್ಮಾನ-
ಮಂಬಾಘ್ರಿಯುಗ್ಮೇSರ್ಪಯಾಮಿ ॥೩॥

ಅನಂತಮಹಾಪಾಪಗಳಿಗೆಲ್ಲ ಮನೆಯಾಗಿ, ಸಂಸಾರಸಾಗರದಲ್ಲಿ ಮುಳುಗಿದ್ದು, ಶ್ರೀಪರಮೇಶ್ವರಾದಿಗಳಿಂದ ಅತ್ಯಂತದೂರಮಾಡಲ್ಪಟ್ಟ, ವಿವೇಕಾದಿಶೂನ್ಯನಾಗಿರುವ ನನ್ನ ಈ ಆತ್ಮವನ್ನು ದಯಾಸಾಗರಳಾದ ದೇವಿ, ನಿನ್ನ ಪಾದಗಳಲ್ಲಿ ಅರ್ಪಿಸುತ್ತೇನೆ.

ಶರೀರಂ ಸ್ವತಂತ್ರಂ ತಥಾಕ್ಷಾಣಿ ಸರ್ವಾಣ್ಯಹೋ ಕಿಂ ಕರೋಮಿ
ಕ್ವ ಯಾಮ್ಯಂಬಿಕೇ ವಾ ।
ಮಯಾ ಪೋಷ್ಯಮಾಣಾನಿ ಮದ್ವಶ್ಯತಾಂ ನ ಪ್ರಯಾಂತ್ಯಂಜಸಾ
ಮದ್ವಶೇ ತಾನಿ ತನ್ಯಾಃ ॥೪॥

ನಾನು ನಿತ್ಯವೂ ಅದರಪ್ರಯತ್ನಗಳಿಂದ ಪೋಷಿಸಿಕೊಳ್ಳುತ್ತಿರುವ ಈ ಶರೀರವೂ,ಹಾಗೆಯೇ ಇಂದ್ರಿಯಗಳೂ ಸಹ, ನನ್ನ ಅಧೀನಕ್ಕೆ ಬರದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವತಂತ್ರವಾಗಿ, ಸ್ವೇಚ್ಛೆಯಾಗಿ ವರ್ತಿಸುತ್ತಿವೆ. ಹೀಗಿರುವಲ್ಲಿ ನಾನೇ ಯಾವ ಶ್ರೇಯಃಸಾಧನೆಯನ್ನೂ ಮಾಡಲು ಸಾಧ್ಯವಾಗುತ್ತಿಲ್ಲ, ತಾಯೇ; ಇವುಗಳನ್ನು ನನ್ನ ವಶವಾಗುವಂತೆ ಮಾಡು.

ಕದಾಚಿಚ್ಚ ತೇ ಪಾದಪದ್ಮಸ್ಯ ಪೂಜಾಂ ಸ್ಮೃತಿಂ ದರ್ಶನಂ ವಾ
ವಿತನ್ಯುಸ್ತ್ವಮಾನಿ ।
ವಿಜಾನನ್ನಹಂ ತಾನಿ ರಕ್ಷಾಮಿ ಮಾತರ್ಮೃಷಾ ನೈವ ವಕ್ಷ್ಯಾಮಿ
ಶೀಘ್ರಂ ಪ್ರಸೀದ ॥೫॥

ಈ ದೇಹೇಂದ್ರಿಯಾದಿಗಳು ತಮ್ಮ ತಮ್ಮ ವಿಷಯಗಳಲ್ಲಿಯೇ, ಯಾವಾಗಲೂ ಆಸಕ್ತವಾಗಿವೆಯೇಹೊರತು, ನಿನ್ನ ಪಾದಪದ್ಮಗಳ ಪೂಜೆಯನ್ನಾಗಲಿ, ಸ್ಮರಣೆಯನ್ನಾಗಲಿ, ದರ್ಶನವನ್ನಾಗಲಿ, ಎಂದೂ ಮಾಡುತ್ತಿಲ್ಲ. ಇದನ್ನು ತಿಳಿದೂ ತಿಳಿದೂ ಇವುಗಳನ್ನು ಪೋಷಿಸುತ್ತಿದ್ದೇನೆ, ನಾನು ಸುಳ್ಳನ್ನು ಹೇಳುತ್ತಿಲ್ಲ, ಏನು ಮಾಡಲಿ ; ಇವುಗಳನ್ನು ನಿಗ್ರಹಿಸುವ ಸಾಮರ್ಥ್ಯವನ್ನು ಬೇಗ ನೀಡು, ತಾಯೆ.

ಮಯಾ ಬಾಲಭಾವಸ್ಥಿತೇನಾಂಬಿಕೇ ತ್ವತ್ಪದಾಂಭೋಜಯುಗ್ಮಂ
ಸ್ಮೃತಂ ನೈವ ಜಾತು ।
ಕ್ಷಮಸ್ವಾಪರಾಧಂ ದಯಾವಾರಿರಾಶೇ ತ್ವದನ್ಯಚ್ಛರಣ್ಯಂ
ನ ಮೇ ಶಾರದೇಽಸ್ತಿ ॥೬॥

ನನ್ನ ಬಾಲ್ಯದಲ್ಲಿ ಎಂದೂ ನಿನ್ನ ಪಾದಕಮಲವನ್ನು ಸ್ಮರಿಸಲೂ ಇಲ್ಲ. ದಯಾಸಮುದ್ರವಾದ ಶಾರದೆ, ನನ್ನ ಅಪರಾಧವನ್ನು ಕ್ಷಮಿಸು. ನೀನಲ್ಲದೆ ನನಗೆ ರಕ್ಷಕರು ಯಾರೂ ಇಲ್ಲ.

ತಥಾ ಯೌವನೇ ಮತ್ತಚಿತ್ತೋಽಹಮಾಸಂ ತ್ವದೀಯಂ
ಪದಾಬ್ಜಂ ಸ್ಮೃತಂ ನೈವ ನೈವ ।
ಕ್ಷಮಸ್ವಾಪರಾಧಂ ವಿಧಿಪ್ರೇಮಕಾಂತೇ ನ ಪುತ್ರೇ
ಜುಗುಪ್ಸಾಪೇಕ್ಷಾ ಜನನ್ಯಾಃ ॥೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆಯೇ ಯೌವನದಲ್ಲಿ ದುರಹಂಕಾರದಿಂದ ಮತ್ತನಾಗಿ, ನಿನ್ನ ಪದಪಂಕಜಗಳನ್ನು ಸ್ವಲ್ಪವೂ ಸ್ಮರಿಸಲಿಲ್ಲ. ಜಗತ್ಪಿತಾಮಹನಾದ ಶ್ರೀಬ್ರಹ್ಮದೇವನ ಪ್ರಿಯರಮಣಿ, ತಾಯಿಗೆ ತಪ್ಪು ಮಾಡುವ ಮಕ್ಕಳಲ್ಲಿಯೂ ಉಪೇಕ್ಷೆಯಿರುವುದಿಲ್ಲವಲ್ಲವೆ ? ನನ್ನ ಈ ಅಪರಾಧವನ್ನು ವಾತ್ಸಲ್ಯದಿಂದ ಮನ್ನಿಸು, ತಾಯೆ.

ಜರಾರೋಗಸಂಪೀಡಿತಾಂಗೋ ಜರಾಯಾಂ ಕಥಂ ವಾ ಸ್ಮರೇಯಂ
ಪದಂ ಶಾರದಾಂಬ ।
ಕ್ಷಮಸ್ವಾಪರಾಧಂ ಸಮಸ್ತಂ ಮದೀಯಂ ಕ್ಷಮಾಧೂತಸರ್ವಂ-
ಸಹಾಖರ್ವಗರ್ವೇ ॥೮॥

ಮುಪ್ಪು, ರೋಗ – ಇವುಗಳಿಂದ ಪೀಡಿತನಾದ ನಾನು ವಾರ್ಧಕ್ಯದಲ್ಲಿ ಹೇಗೆ ತಾನೆ ನಿನ್ನ ಪಾದಕಮಲಗಳನ್ನು ಚಿಂತಿಸಲು ಸಮರ್ಥನಾದೇನು ? ನನ್ನ ಈ ಎಲ್ಲ ಅಪರಾಧಗಳನ್ನೂ ದಯೆಯಿಂದ ಕ್ಷಮಿಸಿ ಕಾಪಾಡು ಜನನಿ. ಸಹನೆಯಲ್ಲಿ ಸರ್ವಂಸಹೆಯೆಂದು ಪ್ರಸಿದ್ಧಳಾಗಿರುವ ಭೂದೇವಿಯ ಅಹಂಕಾರವನ್ನೂ ಜಯಿಸಿರುವವಳಲ್ಲವೆ ನೀನು, ಹೇ ಶಾರದಾಂಬ.

ತ್ವದೀಯಂ ಪದಾಬ್ಜಂ ಸದಾ ಪೂಜಯೇಯಂ ತಥಾ
ಸಂಸ್ಮರೇಯಂ ಚ ಪಶ್ಯೇಯಮೇವಂ ।
ಸಮಿಚ್ಛಂಶ್ಚ ಮತ್ಪೂರ್ವದುರ್ವಾಸನಾಭಿರ್ಬಲಾದಾಹೃತಂ
ಮನ್ಮನಃ ಕಿಂ ಕರೋಮಿ ॥೯॥

ನಿನ್ನ ಪಾದಾರವಿಂದಗಳನ್ನೇ ಯಾವಾಗಲೂ ಪೂಜಿಸುವೆನು, ಸ್ಮರಿಸುವೆನು, ನೋಡುವೆನು –ಎಂದೇ ನನಗೆ ಪೂರ್ಣವಾದ ಇಚ್ಛೆಯಿದೆ; ಆದರೆ ದೇವಿ, ನನ್ನ ಮನಸ್ಸು ಈ ಇಂದ್ರಿಯಗಳಿಂದ ಬೇರೆ ಕಡೆಗೆ ಎಳೆಯಲ್ಪಡುತ್ತಿದೆ; ಏನು ಮಾಡಲಿ, ಅಂಬ.

ಯದಿ ತ್ವಂ ವದಸ್ಯಂಬ ತೇ ಪೂರ್ವಕರ್ಮ ತ್ವಯೈವ ಪ್ರಯತ್ನೇನ
ಜೇತವ್ಯಮೇವಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ತದಾ ಮಯ್ಯಜಸ್ರಂ ಕೃಪಾ ಸಂವಿಧೇಯಾ ಪ್ರಯತ್ನಂ
ಕರೋಮ್ಯೇಷ ತತ್ರಾಪಿ ಸಮ್ಯಕ್ ॥೧೦॥

'ನಿನ್ನ ಹಿಂದಿನ ಕರ್ಮಗಳನ್ನು ನೀನೇ ಜಯಿಸಬೇಕು' – ಎಂದು ನೀನು ಹೇಳುವುದಾದರೆ, ಹಾಗೆಯೇ ಮಾಡುತ್ತೇನೆ, ತಾಯಿ; ಆದರೆ ಅದಕ್ಕೂ ನಿನ್ನ ದಯೆಯೇ ಬೇಕಲ್ಲವೆ ?

ಯದಿ ತ್ವಂ ಮದೀಯಾಂ ಶುಚಂ ನಾಪನುದ್ಯಾಸ್ತದಾ ದುಃಖಿ-
ಮ್ಹಿಪ್ರತಪ್ತೇಽಂತರಂಗೇ ।
ಮದೀಯೇ ಸ್ಥಿತಾಯಾಸ್ತವಾಪ್ಯಂಬ ಖೇದೋ ಭವೇದಿತ್ಯಹಂ
ಚಿಂತಯಾತೋರ್ಸ್ಮಿ ಭೂಯಃ ॥೧೧॥

ನನ್ನ ಮನಸ್ಸಿನಲ್ಲಿರುವ ಶೋಕವನ್ನು ನೀನು ಪರಿಹರಿಸದಿದ್ದರೆ, ಸರ್ವ ಗತಳಾಗಿರುವ ನೀನು ನನ್ನ ಮನಸ್ಸಿನಲ್ಲಿಯೂ ಇರುವುದರಿಂದ, ನಿನಗೂ ಆದರಿಂದ ದುಃಖವಾದೀತೆಂದು ನನಗೆ ಚಿಂತೆಯಾಗಿದೆ.

ವದಂತೀಹ ಶಾಸ್ತ್ರಾಣಿ ಸಚ್ಚಿದಾತ್ಮಾದ್ವಯಶ್ಚಾನ್ಯದಾರ್ತಂ
ಸಮಸ್ತಂ ಮೃಷೇತಿ ।
ತಥಾಪ್ಯಂಬ ಮೋಹೋ ನ ಮೇ ವಿಪ್ರಣಶ್ಯೋ ಝಟಿತ್ಯಂಬ
ತಂ ನಾಶಯಾನರ್ಥಮೂಲಂ ॥೧೨॥

ಪರಮಪ್ರಮಾಣಗಳಾದ ಶಾಸ್ತ್ರಗಳು ಆತ್ಮನನ್ನು ಸಚ್ಚಿದಾನಂದಾದ್ವಯಸ್ವರೂಪನೆಂದೂ, ಉಳಿದ ಅನಾತ್ಮವೆಲ್ಲ ನಶ್ವರವೂ ಮಿಥ್ಯಾಭೂತವೂ –ಎಂದೂ ಬೋಧಿಸುತ್ತವೆ. ಇದೇ ಯಥಾರ್ಥವೆಂದು ನಿಶ್ಚಯವಿದ್ದರೂ, ನನಗೆ ಆತ್ಮನು ಸದ್ವಿತೀಯನೂ, ಜನನಮರಣವ್ಯಪ್ತನೂ ಸಂಸಾರಿಯೂ ಏಂದೂ, ಅನಾತ್ಮದ್ವೈತಪ್ರಪಂಚವೆಲ್ಲ ಸತ್ಯವೇ ಎಂದೂ ಮೋಹವೇ ಉಂಟಾಗುತ್ತಿದೆ. ಸರ್ವಾನರ್ಥಕ್ಕೂ ಕಾರಣವಾಗಿರುವ ಈ ಮೋಹವನ್ನು ಈ ಕೂಡಲೆ ನಾಶಮಾಡಿ ನನ್ನನ್ನು ರಕ್ಷಿಸಮ್ಮ.

ಯದಾ ದಂಡಹಸ್ತೈರ್ಭಟೈ ಭೀಮಮೂರ್ತಾ ಮಹಾಪಾಪಿನಂ
ಸಮಾಕ್ರಷ್ಟುಮಾರಾತ್ ।

Sri Vidyabharathi Book Centre, Shringeri

CC-O. In Public Domain. Digitized by eGangotri

ಸಮಾಯಾಂತಿ ತಸ್ಮಿನ್ಹಿ ಕಾಲೇ ದಯಾಬ್ಧೇ ಮದೀಯೇ ಮನಸ್ಯಾ-
ವಿರೇಧಿ ತ್ವಮಂಬ ॥೧೩॥

ಶಿಕ್ಷಕನಾದ ಯಮರಾಜನ ಭಯಂಕರರಾದ ದೂತರು ಮಹಾಪಾಪಿಯಾಗಿರುವ ನನ್ನನ್ನು ಎಳೆದುಕೊಂಡು ಹೋಗಲು ಹತ್ತಿರ ಬಂದಾಗ, ಹೇ ದಯಾಮಯಿ ದೇವಿ, ನನ್ನ ಮನಸ್ಸಿನಲ್ಲಿ ಪ್ರತ್ಯಕ್ಷಳಾಗಿ ಬಂದು ಕಾಪಾಡು.

ಮಹಾಪಾಪಿನಂ ಮಾಂ ಸಮುದ್ಧರ್ತುಮೇವ ತ್ವಯಾ ಪುಣ್ಯ-
ಪಾಪೇ ಪರೋಕ್ಷೇ ಕೃತೇ ಹಿ ।
ನ ಚೇತ್ಸರ್ವಲೋಕಾ ವಿಜಾನೀಯುರೇನಂ ಮಹಾಪಾಪಿನಂ ತ್ವಾಂ
ಚ ವೈಷಮ್ಯಯುಕ್ತಾಂ ॥೧೪॥

ಹೇ ದೇವಿ ಶಾರದೆ, ನೀನು ನನ್ನ ಮೇಲೆ ಹೆಚ್ಚಾಗಿ ಕರುಣೆಯುಳ್ಳವಳೇ ಸರಿ. ನಾನು ಮಹಾಪಾಪಿಯಾಗಿರುವಲ್ಲಿ, ನನ್ನನ್ನು ಉದ್ಧರಿಸಿದರೆ, ನೀನು ನನ್ನಲ್ಲಿ ಪಕ್ಷಪಾತವನ್ನು ತೋರಿಸುತ್ತೀಯೆಂದು ಎಲ್ಲರೂ ತಿಳಿದಾರು– ಎಂದು ಆಲೋಚಿಸಿಯೇ ಪುಣ್ಯಪಾಪಗಳನ್ನು ಯಾರಿಗೂ ಕಾಣಬರದಂತೆ ನೀನು ಪರೋಕ್ಷಗಳನ್ನಾಗಿ ಮಾಡಿರುವಿಯಲ್ಲವೆ, ತಾಯಿ.

ಶರೀರೇ ಸ್ವಕೇಽಹಂತ್ವಮಸ್ತಂ ಪ್ರಯಾಯಾದಿತಿ ತ್ವಾಂ
ಪ್ರಪನ್ನಾ ಜನಾ ಶಾರದಾಂಬ ।
ಸಮಸ್ತೇಷು ವಸ್ತುಷ್ವಹಂತಾಂ ಭಜಂತೇ ಕಿಮೇತದ್ವಿಚಿತ್ರಂ
ಚಿದಾನಂದರೂಪೇ ॥೧೫॥

ಈ ಶರೀರದಲ್ಲಿ ನಾನು ಎಂಬ ಅಹಂಭಾವವನ್ನು ಕಳೆದುಕೊಂಡೇವು– ಎಂಬ ಅಭಿಪ್ರಾಯದಿಂದ ನಿನ್ನನ್ನು ಶರಣುಹೊಂದಿದವರು, ಸಮಸ್ತವಸ್ತುಗಳಲ್ಲಿಯೂ ಅಹಂಭಾವವನ್ನು ಹೊಂದುವರು ! ಇದೇನು ವಿಚಿತ್ರವು, ಚಿದಾನಂದರೂಪೆ ತಾಯೆ ? ನಿನಗೆ ಶರಣು ಬಂದವರು, ನಿನ್ನ ಅನುಗ್ರಹದಿಂದ :– ಸರ್ವಂ ಬ್ರಹ್ಮ, ಅಹಂ ಸರ್ವಂ, ಆತ್ಮೈವ ಸರ್ವಂ – ನಾನೇ ಎಲ್ಲವೂ, ನನ್ನನ್ನು ಬಿಟ್ಟು ಏನೊಂದೂ ಇಲ್ಲ, ನಾನು ಅದ್ವಿತೀಯಾಖಂಡ-

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿನ್ಮಾತ್ರಬ್ರಹ್ಮಸ್ವರೂಪನೇ ಆಗಿದ್ದೇನೆ –ಎಂಬ ಆತ್ಮತತ್ತ್ವಾನುಭವವನ್ನು ಪಡೆದು ಕೃತಾರ್ಥರಾಗುತ್ತಾರೆಂದು ಭಾವವು.

ಮಹಾವ್ಯಾಧಿಶಾಂತ್ಯೈ ತಥಾ ನಿಸ್ವತಾಯಾಃ ಪ್ರಣಾಶಾಯ ಯೇ
ತ್ವಾಂ ಭಜಂತೇ ನರಾಸ್ತೇ ।
ಜಪಾಚ್ಛೊಲಿನಃ ಸ್ಯುಶ್ಚ ಕೃತ್ತಿಂ ವಸಾನಾಃ ಕ ಏಷ ಪ್ರಕಾರಃ
ಪ್ರಸನ್ನೇಷು ತೇಽಂಬ ॥೧೬॥

ಮಹಾವ್ಯಾಧಿಗ್ರಸ್ತರು ವ್ಯಾಧಿಪರಿಹಾರಕ್ಕಾಗಿಯೂ, ದರಿದ್ರರು ದಾರಿದ್ರ್ಯದ ನಾಶಕ್ಕಾಗಿಯೂ ನಿನ್ನನ್ನು ಸೇವಿಸುವವರು, ಕೂಡಲೆ ಶೂಲವುಳ್ಳವರೂ, ಚರ್ಮಧಾರಿಗಳೂ ಆಗಿಬಿಡುತ್ತಾರಲ್ಲ, ಹೇ ಅಂಬ; ನಿನ್ನನ್ನು ಆಶ್ರಯಿಸಿರುವವರಲ್ಲಿ ಇದೇನು ನಿನ್ನ ಕ್ರಮ ? –ಎಂದರೆ, ನಿನ್ನ ಸೇವಕರು ಶೂಲಧಾರಿಯೂ ಚರ್ಮಾಂಬರನೂ ಆಗಿರುವ ಶ್ರೀಪರಮೇಶ್ವರನೇ ಆಗುವರೆಂದು ತಾತ್ಪರ್ಯವು.

ತಥಾ ಮೋಹಶಾಂತ್ಯೈ ಜನಾ ಯೇ ಪ್ರಪನ್ನಾಸ್ತ್ವದಾಸ್ಯೇಕ್ಷಣಾ-
ತ್ಸರ್ವಲೋಕೋಽಪಿ ಸದ್ಯಃ ।
ಪ್ರಮುಹ್ಯೇತ್ಕವಶ್ಯಂ ವಿಚಿತ್ರಾಂಬುರಾಶೌ ಮನೋ ಮಾಮಕಂ
ಶಾರದೇ ಮಗ್ನಮಾಸ್ತೇ ॥೧೭॥

ಮೋಹವನ್ನು ಕಳೆದುಕೊಳ್ಳಬೇಕೆಂದು ನಿನ್ನನ್ನು ಶರಣಾಗತರಾದವರು ನಿನ್ನ ಮುಖಕಮಲವನ್ನು ದರ್ಶನಮಾಡಿದ ಕೂಡಲೆ ಅತ್ಯಂತವಾಗಿ ಮೋಹಗೊಳ್ಳುತ್ತಾರೆ! ಇದೇನು ? -ಎಂದು ನನ್ನ ಮನಸ್ಸು ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗಿದೆ, ಶಾರದಾದೇವಿ !

ಕನದ್ದೇಹಭಾಭೂತಸಚ್ಛಾತಕುಂಭಾಂ ಲಸತ್ಕಾರಹಾರಾಢ್ಯ-
ವಕ್ಷೋಜಕುಂಭಾಂ ।
ಸದಾ ತ್ವಾಂ ಜನಾ ಯೇ ಹೃದಬ್ಜೇ ಸ್ಮರಂತಿ ಸ್ಮರಂತ್ಯೇವ ತೇ
ಶರೀರಾಂತ್ಯ ॥೧೮॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪರಂಜಿಚಿನ್ನವನ್ನೂ ತಿರಸ್ಕರಿಸಿರುವ ನಿನ್ನ ದೇಹದ ಶೋಭೆಯನ್ನೂ, ನಕ್ಷತ್ರಗಳಂತೆ ಬೆಳಗುವ ಮುತ್ತಿನ ಸರಗಳಿಂದ ಅಲಂಕೃತವಾಗಿರುವ ನಿನ್ನ ಕೊಡದಂತಿರುವ ಕುಚಗಳನ್ನೂ ಹೃದಯಕಮಲದಲ್ಲಿ ಸ್ಮರಿಸುವವರು ಶಾರೀರಕಶಾಸ್ತ್ರದ ತಾತ್ಪರ್ಯವಾದ ಪರಬ್ರಹ್ಮವನ್ನೇ ಸ್ಮರಿಸಿ ಧನ್ಯರಾಗುವರು.

ಕದಾ ವಾ ಸುಧಾಕುಂಭಪುಸ್ತಾಕ್ಷಮಾಲಾವಿಬೋಧಾಖ್ಯಮುದ್ರಾಃ
ಕರಾಬ್ಜೈರ್ದಧಾನಾಂ ।
ಮುಖಶ್ರೀಪರಾಭೂತಪೂರ್ಣೇಂದುಬಿಂಬಾಂ ಸದಾ ತ್ವಾಂ
ಸ್ಮರನ್ವೀತಶೋಕೋ ಭವೇಯಂ ॥೧೯॥

ಕರಾರವಿಂದಗಳಲ್ಲಿ ಅಮೃತಕಲಶ, ಪುಸ್ತಕ, ಜಪಮಾಲೆ ಮತ್ತು ಜ್ಞಾನಮುದ್ರೆಗಳನ್ನು ಧರಿಸಿರುವ; ಶರತ್ಕಾಲದ ಪೂರ್ಣಮಾಚಂದ್ರನನ್ನು ತಿರಸ್ಕರಿಸಿರುವ ನಿನ್ನ ಮುಖದ ಕಾಂತಿಯನ್ನೂ ಸಹ ಯಾವಾಗಲೂ ಧ್ಯಾನಿಸುತ್ತ ನಾನು ಈ ಸಂಸಾರದುಃಖವನ್ನು ಯಾವಾಗ ಕಳೆದುಕೊಳ್ಳುವೆನು, ಹೇಳು ತಾಯಿ.

ಕದಾ ತುಂಗಭದ್ರಾಸರಿತ್ತೀರದೇಶೇ ಚರಂತೀಂ ಸಮುತ್ತುಂಗ-
ಕಲ್ಯಾಣದಾತ್ರೀಂ ।
ಸದಾ ಭಾವಯಂಸ್ತ್ವಾಂ ಮುದಾ ಯಾಪಯೇಯಂ ಮದಾ-
ಯುರ್ಮದೇಭೇಂದ್ರಯಾನೇऽಂಬ ವಾಣಿ ॥೨೦॥

ಸಮಸ್ತಮಂಗಳಗಳನ್ನೂ ಕರುಣಿಸುತ್ತ ತುಂಗಭದ್ರಾನದಿಯ ತೀರದಲ್ಲಿ ವಿಹರಿಸುವ ನಿನ್ನನ್ನು ಯಾವಾಗಲೂ ಧ್ಯಾನಿಸುತ್ತ ನನ್ನ ಆಯುಸ್ಸೆಲ್ಲವೂ ಕಳೆಯುವ ಭಾಗ್ಯವು ನನಗೆ ದೊರೆಯುವುದು ಯಾವಾಗ – ಹೇಳಮ್ಮ ಮತ್ತಗಜಗಮನೆ, ದೇವಿ ಶಾರದೆ.

ಕರಾಬ್ಜೈरक्षಮಾಲಾಂ ವಹಂತೀಂ ಸದಾ ತ್ವಾಂ ಭಜನ್ ಭೃಂಗಗೀತ-
ಪ್ರಸಾದೇನ ಮಾತಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

करे मेऽक्षमालां करोम्येव नूनं परं
त्वन्मस्त्रं सदा देहि मह्यं ॥೨೧॥

ಕರಕಮಲದಲ್ಲಿ ಜಪಮಾಲೆಯನ್ನು ಹಿಡಿದಿರುವ ನಿನ್ನನ್ನು ಕಂಡು, ಭ್ರಮರಕೀಟನ್ಯಾಯದಂತೆ, ನಾನೂ ಜಪಮಾಲೆಯನ್ನು ಕೈಯ್ಯಲಿ ಹಿಡಿಯುತ್ತೇನೆ; ಅದರಂತೆ ನಿನ್ನ ಬುದ್ಧಿಯನ್ನೂ ನನಗೆ ಅನುಗ್ರಹಿಸು, ತಾಯೆ

दृक्तौ दर्शनेे ते करौ पूजनेे स्तां श्रुतीे त्वच्चरित्रश्रुतौ माक्स्नुतौ स्याताम् ।
शिरस्त्वत्पदाब्जप्रणत्येकसक्तं भवत्वंबिके ध्यानसक्तं मनो मेे ॥೨೨॥

ನನ್ನ ಕಣ್ಣುಗಳಿರಡೂ ದಿವ್ಯಲಾವಣ್ಯದ ನಿನ್ನನ್ನು ನೋಡುವುದರಲ್ಲಿಯೂ; ನನ್ನ ಕೈಗಳಿರಡೂ ನಿನ್ನ ಮಹಾಪೂಜೆಯಲ್ಲಿಯೂ; ನನ್ನ ಎರಡು ಕಿವಿಗಳೂ ನಿನ್ನ ಪವಿತ್ರಚರಿತ್ರೆಯನ್ನು ಕೇಳುವುದರಲ್ಲಿಯೂ; ನನ್ನ ಪಾತು ಪಾವನಕರವಾದ ನಿನ್ನ ಸ್ತೋತ್ರದಲ್ಲಿಯೂ; ನನ್ನ ಶಿರಸ್ಸು ಸರ್ವಪೂಜ್ಯವಾದ ನಿನ್ನ ಪಾದಕಮಲಗಳ ನಮಸ್ಕಾರದಲ್ಲಿಯೂ; ನನ್ನ ಮನಸ್ಸು ನಿನ್ನ ಧ್ಯಾನದಲ್ಲಿಯೂ ಯಾವಾಗಲೂ ಆಸಕ್ತವಾಗಿರುವಂತೆ ಕರುಣಿಸು, ಜಗನ್ಮಾತೆ; ಇದರಿಂದ ನಾನು ಧನ್ಯನಾಗುವನು.

भुजंगप्रयाताख्यवृत्तेन क्लृप्तां स्तुतिं येे नरा भक्तियुक्ताः पठंति ।
सुविद्यां मतिं निर्मलां चारुकीर्तिं प्रयच्छाम्बिके तेषां भुजंगाभवेणिे ॥೨೩॥

ಭುಜಂಗಪ್ರಯಾತವೆಂಬ ಹೆಸರಿನ ಪದ್ಯದಿಂದ ರಚಿತವಾಗಿರುವ ಈ ನಿನ್ನ ಸ್ತುತಿಯನ್ನು ಪಠಣಮಾಡುವವರಿಗೆ, ಕಾಳಿಂಗಸರ್ಪದಂತೆ ನೀಲವೂ ನೀಳವೂ ಆಗಿ ಕಂಗೊಳಿಸುವ ಜಡೆಯ ಹೇ ಶಾರದೆ, ಸದ್ವಿದ್ಯೆಯನ್ನೂ, ಧರ್ಮದಲ್ಲಿ ಶುದ್ಧವಾದ ಬುದ್ಧಿಯನ್ನೂ, ಸದಾಚಾರವನ್ನೂ, ಇವುಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಂಟಾಗುವ ಸತ್ಕೀರ್ತಿಯನ್ನೂ ಅನುಗ್ರಹಿಸಿ ರಕ್ಷಿಸು ತಾಯೆ, ಶಾರದೆ – ಎಂದು ನಿನ್ನನ್ನು ಪ್ರಾರ್ಥಿಸುತ್ತೇನೆ.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಮಚ್ಛೃಂಗಗಿರಿಶ್ರೀಶಾರದಾಜಗದ್ಗುರುಶ್ರೀಮತ್ಸಚ್ಚಿದಾನಂದಶಿವಾಭಿನವನರಸಿಂಹ ಭಾರತೀಸ್ವಾಮಿಕರಕಮಲಸಂಜಾತಸ್ಯ ಶ್ರೀಶೃಂಗಗಿರಿಜಗದ್ಗುರೋಃ ಶ್ರೀಮಚ್ಚಂದ್ರಶೇಖರಭಾರತೀಕೃತಿಷು ಶ್ರೀಶಾರದಾಭುಜಂಗಪ್ರಯಾತಸ್ತುತಿಃ ಸಮಾಪ್ತಾ ॥

———

ಶ್ರೀಶೃಂಗಗಿರಿಜಗದ್ಗುರುಶ್ರೀಚಂದ್ರಶೇಖರಭಾರತೀವಿರಚಿತಾ
ಶ್ರೀವಾಣ್ಯುತ್ಕರ್ಷಮಂಜರೀಸ್ತುತಿಃ ।

ಅಸ್ಮಾನ್ ಪಾತ್ರಯಿತುಂ ಸ್ವಕೀಯಕರುಣಾಪೀಯೂಷವಾರಾಂನಿಧೇಃ
ಕ್ರೋಧಾಗಾರಮುನೇಸ್ತು ಶಾಪಮಿಷತಃ ಸಂಪ್ರಾಪ್ಯ ಯಾ ಮೇದಿನೀಂ ।
ತುಂಗಾತೀರವಿಭಾಸಿಶೃಂಗಪುರಗಶ್ರೀಚಕ್ರಮಧ್ಯೇऽವಸತ್
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ ನಾಮ್ನಾಯತೇ ॥೧॥

ದುರ್ವಾಸಮುನಿಗಳು ಕೋಪದಿಂದ ಇತ್ತ ಶಾಪದ ನೆಪದಿಂದ ಭೂಲೋಕಕ್ಕೆ ಶ್ರೀಬ್ರಹ್ಮನ ರಾಣಿಯಾದ ಶ್ರೀಸರಸ್ವತೀದೇವಿಯು ಅವತರಿಸಿ ಬಂದಿರುವುದು ಭಕ್ತರಾದ ನನ್ನಂಥವರನ್ನು ತನ್ನ ದಯಾಮೃತಕ್ಕೆ ಪಾತ್ರರನ್ನಾಗಿ ಮಾಡಿಕೊಂಡು ಉದ್ಧರಿಸುವುದಕ್ಕೇ ಆಗಿರುತ್ತದೆ. ಹೀಗೆ ಅವತರಿಸಿ ಬಂದು, ಶ್ರೀಶಂಕರಭಗವತ್ಪಾದಾಚಾರ್ಯರು ತುಂಗಾನದೀತೀರದಲ್ಲಿ ಬೆಳಗುತ್ತಿರುವ ಶ್ರೀಶೃಂಗಗಿರಿಕ್ಷೇತ್ರವಲ್ಲಿ ಸ್ಥಾಪಿಸಿರುವ ಶ್ರೀಚಕ್ರವಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿರುವ ಆ ವಾಣಿಯೇ ನನಗೆ ಆರಾಧ್ಯವಾಗಿರುವ ಪರಮದೇವತೆಯು; ನಾನು ಇತರರ ಹೆಸರನ್ನೂ ಕೂಡ ಹೇಳಲಾರೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಾರದಾದೇವಿಯ ಚರಿತ್ರೆಯನ್ನು "ಶ್ರೀಶೃಂಗಗಿರಿಶ್ರೀಶಾರದೋಪಾಖ್ಯಾನ"ದಲ್ಲಿ ಮೊದಲೇ ವರ್ಣಿಸಿರುತ್ತೆ.

ಶ್ರೀಮಚ್ಛಂಕರದೇಶಿಕೇಂದ್ರಚರಣೈರದ್ವೈತರಕ್ಷಾಪರೈಃ
ಶ್ರೀವಿಶ್ವೇಶ್ವರಮುಖ್ಯದೇವನಿಕರಂ ಕೃತ್ವಾಪಿ ಸಾಕ್ಷಾತ್ಪರಾ ।
ಶುದ್ಧಾದ್ವೈತಮತಪ್ರವರ್ಧನಕೃತೇ ಯೈವ ಪ್ರತಿಷ್ಠಾಪಿತಾ
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ ನಾಮ್ನಾಯತೇ ॥೨॥

ವೇದಪ್ರಮಾಣಕವಾದ ಅದ್ವೈತಸಿದ್ಧಾಂತವನ್ನು ರಕ್ಷಿಸಿ, ಅದರ ಮೂಲಕವಾಗಿ ವೈದಿಕಸನಾತನವರ್ಣಾಶ್ರಮಧರ್ಮವನ್ನು ಪ್ರಚಾರಮಾಡಿ ಲೋಕವನ್ನು ಉದ್ಧರಿಸುವುದಕ್ಕಾಗಿ ಶ್ರೀಪರಮೇಶ್ವರನು ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರ ರೂಪದಿಂದ ಅವತರಿಸಿಬಂದು, ಇದಕ್ಕಾಗಿಯೇ ಶ್ರೀಕಾಶೀವಿಶ್ವೇಶ್ವರಸ್ವಾಮಿ – ಮುಂತಾದ ಅನೇಕದೇವತೆಗಳನ್ನು ಪ್ರತ್ಯಕ್ಷ ಮಾಡಿಕೊಂಡರೂ, ಅದ್ವೈತಮತದ ವೃದ್ಧಿಗಾಗಿ ಪ್ರಥಮವೂ ಪ್ರಧಾನವೂ ಆಗಿರುವ ಮತವನ್ನು ಶ್ರೀಶೃಂಗಗಿರಿಯಲ್ಲಿ ಸ್ಥಾಪಿಸಿ, ಅಲ್ಲಿ ಶ್ರೀಶಾರದಾದೇವಿಯನ್ನೇ ಪ್ರತಿಷ್ಠಿಸಿದರು. ಮತ್ತು ವಾದಮಾಡಿ ಜಯಿಸಿ ಒಲಿಸಿಕೊಂಡ, ಶ್ರೀಬ್ರಹ್ಮದೇವನ ಅವತಾರರಾದ ಶ್ರೀಮಂಡನಪಂಡಿತರಿಗೆ ಸನ್ಯಾಸದೀಕ್ಷೆಯನ್ನು ಅನುಗ್ರಹಿಸಿ, ಅದ್ವೈತಮತಪ್ರಚಾರಕ್ಕಾಗಿಯೇ ಆ ಶ್ರೀಸುರೇಶ್ವರಾಚಾರ್ಯರನ್ನು ಈ ಪೀಠಕ್ಕೆ ಪ್ರಥಮಾಚಾರ್ಯರನ್ನು ಮಾಡಿದರು. ಶ್ರೇಯಸ್ಕರವಾಗಿರುವ ಸನ್ಮಾರ್ಗದರ್ಶಕಳು ಶ್ರೀಶಾರದಾದೇವಿಯೇ ಎಂದೂ ಶ್ರೀಶೃಂಗಗಿರಿಶ್ರೀಮಠವೇ ಸರ್ವಶ್ರೇಷ್ಠವೆಂದೂ ಇದರಿಂದ ವ್ಯಕ್ತಪಡುವುದು. ಹೀಗಿರುವಲ್ಲಿ, ಈ ಶಾರದೆಯನ್ನು ಬಿಟ್ಟು ಬೇರೆ ಯಾರನ್ನು ನಾವು ಶ್ರೇಯಃ ಪ್ರಾಪ್ತಿಗಾಗಿ ಆರಾಧಿಸಲಾದೀತು ? "ಶ್ರೀಶೃಂಗಗಿರಿಶ್ರೀಶಾರದಾಜಗದ್ಗುರು ಪೀಠಪೈಷಿಷ್ಟ್ಯಂ" –ಎಂಬ ನವ್ಯ ಗ್ರಂಥವನ್ನೂ ನೋಡತಕ್ಕದ್ದು.

ವೇಣೀಯಾಭರಣಚ್ಛಲಾದನುದಿನಂ ಸಂಸೇವ್ಯ ಯಾಂ ಸರ್ಪರಾಟ್
ಪದ್ಮೋದ್ಭೂತಹರಾದಯೋಽಪಿ ಸುರಾಃ ಸ್ನಿಗ್ಧೈಃ ಕೃತಾನಾರವಾನ್ ।

Sri Vijaya Vani Book Centre, Singeri

CC-O. In Public Domain. Digitized by eGangotri

ಶ್ರಾವಂ ಶ್ರಾವಮನೇಕವಾರಮತುಲಂ ಶಬ್ದಾಗಮಂ ವ್ಯಾಕರೋತ್
ಸಾ ವಾಣೀ ಮಮ ದೈವತಂ ತದಿತರೋ ನಾಮ್ನಾಪಿ
ನಾಮ್ನಾಯತೇ ॥೩॥

ಶ್ರೀಶಾರದಾದೇವಿಯು: ನಾಗವೇಣಿಯು ಎಂದರೆ, ಆಕೆಯ ಜಡೆಯು ಅತ್ಯಂತ ಕಪ್ಪಾಗಿಯೂ, ಮೃದುವಾಗಿಯೂ ನೀಳವಾಗಿಯೂ, ಆಂಥ ಕಾಳ ಸರ್ಪರಾಜನಂತೆ ಹೊಳೆಯುತ್ತದೆಂದು ಕವಿಗಳು ವರ್ಣಿಸುತ್ತಾರೆ. ಸರ್ಪರಾಜ ನಾದ ಆದಿಶೇಷನೇ ಶ್ರೀಶಾರದಾದೇವಿಯ ಜಡೆಯರೂಪದಿಂದ ಆಕೆಯನ್ನು ಸೇವಿಸುತ್ತಿದ್ದಾನೆಂದು ಕಂಡುಬರುತ್ತದೆ. ಸರ್ವಜ್ಞಳಾಗಿರುವ ಶ್ರೀಶಾರದಾ ದೇವಿಯ ಮುಖಕಮಲದಿಂದ ಯಾವಾಗಲೂ ಸಮ್ಯಗ್ಜ್ಞಾನದ ಮಾತುಗಳೇ ಹೊರಡುತ್ತಿರುತ್ತವೆ. ಆಕೆಯು ತನ್ನ ಕೈಯಲ್ಲಿ ಆಟಕ್ಕಾಗಿ ಗಿಣಿಯ ಮರಿ ಯೊಂದನ್ನು ಹಿಡಿದಿದ್ದಾಳೆ, ಆ ಗಿಣಿಮರಿಯು ಶ್ರೀಶಾರದೆಯ ಮುಖ ದಿಂದ ಬರುವ ಮಾತುಗಳಲ್ಲಿ ಅಲ್ಲಿ ಇಲ್ಲಿ ಏನೋ ಎಂದೆರೆಡು ಶಬ್ದಗಳನ್ನು ಆಗಾಗ ಅನುಕರಿಸಿ ಹೇಳುತ್ತಿರುತ್ತದೆ. ಈ ಆದಿಶೇಷನು ಶ್ರೀಶಾರದೆಯನ್ನು ಆಕೆಯ ಜಡೆಯರೂಪದಿಂದ ನಿತ್ಯವೂ ಸೇವಿಸುತ್ತ, ಆಕೆಯ ಕೈಯಲ್ಲಿರುವ ಗಿಣಿಯು ಅಸ್ಪಷ್ಟವಾಗಿ ಮತ್ತೆ ಮತ್ತೆ ಅನುಕರಿಸಿ ಹೇಳುತ್ತಿರುವ ಶ್ರೀಶಾರ ದೆಯ ಮಾತುಗಳ ಲೇಶಮಾತ್ರವನ್ನೇ ಬಾರಿ ಬಾರಿಗೂ ಕೇಳಿ ಕೇಳಿ ಕಲಿತು ಕೊಂಡು, ಪರಮಾದ್ಭುತವಾಗಿ ಪ್ರಸಿದ್ಧವಾಗಿರುವ ವ್ಯಾಕರಣಮಹಾಭಾಷ್ಯ ವನ್ನು ವಿರಚಿಸಿರುತ್ತಾನೆ. ಇನ್ನು ಶ್ರೀಶಾರದಾದೇವಿಯ ಜ್ಞಾನದ ಮಹಿಮೆಯನ್ನು ಹೇಳುವುದೇನು ?

ಕಸ್ಮೈಚಿದ್ಗೃಹಿಣೇ ಜ್ವರಾಮಯಮಹಾಜ್ವಾಲಾವಲೀಢಾತ್ಮನೇ
ತದ್ರೋಗಪ್ರಶಮಾರ್ಥಮೇವ ಗುರುಭಿಃ ಸಂಪ್ರಾರ್ಥಿತಾ ಯಾ ದದೌ ।
ರೋಗಂ ತಂ ಪ್ರಶಮಯ್ಯ ಭೂರಿಸುಕೃತಪ್ರಾಪ್ಯಂ ಚ ವೀಟೀರಸಂ
ಸಾ ವಾಣೀ ಮಮ ದೈವತಂ ತದಿತರೋ ನಾಮ್ನಾಪಿ ನಾಮ್ನಾಯತೇ
॥೪॥

ಯಾವಚಿಕಿತ್ಸೆಗೂ ಒಳಗಾಗದ ಮಹಾಜ್ವರರೋಗದಿಂದ ನರಳು ತ್ತಿದ್ದ ಧರ್ಮನಿರತನಾದ ಒಬ್ಬ ಗೃಹಸ್ಥನಲ್ಲಿ ದಯೆಯುಳ್ಳವರಾಗಿ ಗುರು

CC-0. In Public Domain. Digitized by eGangotri
ವರ್ಯರು ಪ್ರಾರ್ಥಿಸಲಾಗಿ, ಪರಮಸುಕೃತಮಾತ್ರದಿಂದಲೇ ಲಭಿಸುವಂಥೆ ತನ್ನ ತಾಂಬೂಲದ ರಸವನ್ನು ಆತನಿಗೆ ಕೊಟ್ಟು ಆತನ ರೋಗವನ್ನು ಪರಿಹರಿಸಿದ ಕರುಣಾಮಯಳಾದ ಶ್ರೀಶಾರದೆಯೇ ನನ್ನ ಪರಮದೈವವು, ಬೇರಾರೂ ಅಲ್ಲ. ಐಹಿಕಕ್ಷೇಮಲಾಭಕ್ಕಾಗಿಯೂ ಶ್ರೀಶಾರದೆಯೇ ಸೇವ್ಯಳೆಂಬುದು ಇದರಿಂದ ವಿಶದವಾಗುವುದು.

ಕ್ಷೀರಾಂಭೋನಿಧಿಮಂಥನೋತ್ಥಗರಳೇ ಹಾಲಾಹಲೇ ನಾಮತಃ
ನಿರ್ಗತ್ಯಾಖಿಲದೇವದೈತ್ಯನಿಕರಂ ನಿಶ್ಚೇಷ್ಟಿತಂ ತನ್ವತಿ ।
ಧ್ಯಾತ್ವಾ ಯಾಮಮೃತೇಶ್ವರೀಂ ಭಗವತೀಮಾಪ್ನೋದ್ಧರಿಶ್ಚೇತನಾಂ
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ ನಾಮ್ನಾಯತೇ

॥೫॥

ಶ್ರೀಮಹಾವಿಷ್ಣುವಿನ ಸಲಹೆಯಂತೆ ಅಮೃತಕ್ಕಾಗಿ ಕ್ಷೀರಸಮುದ್ರವನ್ನು ದೇವಾಸುರರು ಮಂದರಪರ್ವತದ ಕಡಗೋಲಿನಿಂದ ಕಡೆಯುತ್ತಿರುವಾಗ ಹಾಲಾಹಲವೆಂಬ ಘೋರವಾದ ಮಹಾವಿಷವು ಹುಟ್ಟಿಬಂದು ದೇವಾಸುರರನ್ನೆಲ್ಲ ಮೂರ್ಛೆಗೊಳಿಸಿದಾಗ, ಅಮೃತೇಶ್ವರಿಯಾದ ಶ್ರೀಶಾರದಾದೇವಿಯನ್ನು ಸ್ಮರಿಸಿಕೊಂಡೇ ಶ್ರೀವಿಷ್ಣುವು ಎಚ್ಚರಗೊಂಡನು; ಶ್ರೀಶಾರದೆಯು ಹಸ್ತದಲ್ಲಿ ಅಮೃತಕಲಶವನ್ನು ಧರಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಇಂಥ ಶ್ರೀಶಾರದೆಯೇ ನನ್ನ ಪರಮಾರಾಧ್ಯದೇವಿಯು; ಇತರರ ಹೆಸರೂ ನನಗೇಕೆ ?

ದರ್ಪಂ ದರ್ಪಮನೇಕಕೋಟಿತಪನಾಹಂಕಾರಹುಂಕಾರಕೃ-
ದ್ಬಾಹ್ಯಾಭ್ಯಂತರತಾಮಸಾಪಹರಣಂ ಯದ್ರೂಪಮಂತಃ ಸದಾ ।
ಧ್ಯಾಯಂ ಧ್ಯಾಯಮವಾಪ್ನುವಂತಿ ವಿಬುಧಾಃ ಕೈವಲ್ಯಮೇವಾಂಜಸಾ
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ ನಾಮ್ನಾಯತೇ

॥೬॥

ಅನೇಕಕೋಟಿಸೂರ್ಯರ ಕಾಂತಿಯನ್ನೂ ತಿರಸ್ಕರಿಸಿ ಬೆಳಗುತ್ತ,

Sri Vidyabharathi Book Centre, Sringeri

CC-O. In Public Domain. Digitized by eGangotri

ಒಳಹೊರಗಿನ ಅಜ್ಞಾನಾಂಧಕಾರಗಳನ್ನು ನಾಶಗೊಳಿಸುವ ಸ್ವಪ್ರಕಾಶ ಸ್ವರೂಪಳಾದ ಶ್ರೀಶಾರದಾದೇವಿಯ ಮಂಗಳರೂಪವನ್ನು ಮತ್ತೆ ಮತ್ತೆ ನೋಡಿ ನೋಡಿ, ಆದರ ಬಲವತ್ತರವಾದ ಸಂಸ್ಕಾರದ ಬಲದಿಂದ ಆ ರೂಪವನ್ನೇ ನಿರಂತರವೂ ಮನಸ್ಸಿನಲ್ಲಿ ಧ್ಯಾನಮಾಡುತ್ತ ಮಾಡುತ್ತ ತತ್ತ್ವಸಾಕ್ಷಾತ್ಕಾರವನ್ನು ಪಡೆದು ಜ್ಞಾನಿವರ್ಯರು ಅನಾಯಾಸವಾಗಿ ಮೋಕ್ಷವನ್ನೇ ಹೊಂದಿ ಕೃತಾರ್ಥರಾಗುವರು. ಹೀಗೆ ಐಹಿಕಸ್ವರ್ಗಾಪವರ್ಗಗಳಿಗೆಲ್ಲ ಕಾರಣಳಾಗಿರುವ ಶ್ರೀಶಾರದೆಯೇ ನನ್ನ ಪರಮದೈವತೆಯು ; ಇತರರ ಹೆಸರನ್ನೂ ನಾನು ಹೇಳಲಾರೆ.

ಆಸ್ತಾಮಂಬುಧಿಸಂಭವಾಕರುಣಯಾ ಸ್ವಾಮಿಾ ಧನಾನಾಂ ಪುಮಾನ್
ದೋರ್ದಂಡೋದ್ಧೃತಪರ್ವತೋ ಭವತು ವಾ ಶೌರ್ಯೇಣ
ಹಿತ್ವೇದೃಶಾನ್ ।
ಏಕಃ ಸ್ತೂಯತ ಏವ ಸಂಸದಿ ಯಯಾ ಪಾತ್ರೀಕೃತೋ ನೇತ್ರಯೋಃ
ಸಾ ವಾಣೀ ಮಮ ದೈವತಂ ತದಿತರೋ ನಾಮ್ನಾಪಿ
ನಾಮ್ನಾಯತೇ ॥೭॥

ಕ್ಷೀರಸಮುದ್ರರಾಜನ ಕುವರಿಯಾಗಿರುವ ಶ್ರೀಲಕ್ಷ್ಮೀದೇವಿಯ ಪರಮಾನುಗ್ರಹದಿಂದ ಒಬ್ಬನು ಕುಬೇರನಿಗೆ ಸಮವಾಗಿ ನವನಿಧಿಗಳಿಗೂ ಅಧಿಪತಿಯಾಗಿರಬಹುದು; ಮತ್ತೊಬ್ಬನು ಮಹಾಶೂರನಾಗಿ, ಕೈಲಾಸಪರ್ವತವನ್ನೆತ್ತಿದ ರಾವಣಾಸುರನಂತೆ, ಪರ್ವತವನ್ನೇ ತನ್ನ ತೋಳುಗಳಿಂದ ಎತ್ತಿಹಿಡಿಯಬಲ್ಲ ಸಾಹಸಿಯಾಗಿರಬಹುದು; ಹೀಗೆಯೇ ಲೋಕದಲ್ಲಿ ಗಾನ, ನರ್ತನ - ಮುಂತಾದ ಹಲವಾರು ಕುಶಲವಿದ್ಯೆಗಳಲ್ಲಿ ಅದ್ಭುತಸಾಮರ್ಥ್ಯ ಪಡೆದವರಿರಬಹುದು. ಆದರೆ, ವಿದ್ವತ್ಸಭೆಯಲ್ಲಿ ಶ್ರೀಶಾರದಾದೇವಿಯ ಕರುಣಾಕಟಾಕ್ಷಗಳಿಗೆ ಪಾತ್ರನಾದವನೇ ಗೌರವವನ್ನು ಪಡೆಯುವವನು- ಇತರರಲ್ಲ. ಇಂಥ ಶ್ರೀಶಾರದೆಯೇ ನನ್ನ ದೈವವು.

ಯಸ್ಯಾದ್ವೈಕ್ತ್ರಚತುಷ್ಟಯೇಽಪಿ ಸತತಂ ವಾಸೋ ಯಯಾ ತನ್ಯತೇ
ತದ್ಧಾತುಶ್ಚತುರಾನನತ್ವಮುದಿತಂ ಯುಕ್ತಂ ಭವೇನ್ನಾನ್ಯಥಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಚೇತ್ಸರ್ಪಮುಖೇಷು ಜಂತುಷು ಚತುರ್ವಕ್ತ್ರಸ್ತು ಕೇಚಿನ್ನ ಕಿಂ
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ
ನಾಮ್ನಾಯತೇ ॥೮॥

ಶ್ರೀಬ್ರಹ್ಮದೇವನು ಚತುರ್ಮುಖನೆಂದು ಪ್ರಸಿದ್ಧನಾಗಿದ್ದಾನೆ. ಸರ್ಪ ಮುಂತಾದ ಜಂತುಗಳಲ್ಲಿ ಕೆಲವಕ್ಕೆ ನಾಲ್ಕು ಮುಖಗಳಿರುತ್ತವೆ - ಆದರೆ ಚತುರ್ಮುಖನೆಂಬ ಅನ್ವರ್ಥವಾದ ಈ ಬಿರುದು ಶ್ರೀಬ್ರಹ್ಮದೇವನಿಗೇ ಮೀಸಲಾಗಿದೆ. ಇದಕ್ಕೆ ಕಾರಣವೇನು - ಗೊತ್ತೆ ? ಶ್ರೀಬ್ರಹ್ಮದೇವನ ನಾಲ್ಕು ಮುಖಗಳಲ್ಲಿಯೂ ಶ್ರೀಶಾರದಾದೇವಿಯು ನೆಲೆಸಿರುವುದೇ ಬ್ರಹ್ಮ ದೇವನ ಈ ಕೀರ್ತಿಮಹಿಮೆಗೆ ಕಾರಣವು. ಇಂಥ ಶ್ರೀಶಾರದಾದೇವಿಯನ್ನೇ ನಾನು ನಿರಂತರವೂ ಆರಾಧಿಸುತ್ತೇನೆ - ಇತರ ದೇವತೆಗಳಿಂದೇನು ಫಲ ?

ಪೂರ್ವಂ ದೇಶಿಕಶಾಪತಃ ಪ್ರಪಠಿತೇ ವೇದಾದಿಕೇ ವಿಸ್ಮೃತೇ
ಸೂರ್ಯಾತ್ಸರ್ವಮುಧೀತ್ಯ ತದ್ವಚನತೋ ಯಾಂ ಯಾಜ್ಞವಲ್ಕ್ಯೋ
ಮುನಿಃ ।
ಸ್ತುತ್ವಾ ಸಂಸ್ಮೃತಿಮಾಪ ಸರ್ವನಿಗಮೇ ಚಾ ಭೂದ್ವಿದಾಮಗ್ರಣೀಃ
ಸಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ ನಾಮ್ನಾಯತೇ ॥
॥೯॥

ವೇದವ್ಯಾಸರ ಶಿಷ್ಯರಾದ ವೈಶಂಪಾಯನರಿಂದ ಯಜುರ್ವೇದವನ್ನು ಪೂರ್ಣವಾಗಿ ಅಧ್ಯಯನ ಮಾಡಿದ್ದರೂ, ಯಾಜ್ಞವಲ್ಕ್ಯ ಋಷಿಗಳು, ಕಾರಣಾಂತರದ ಅಪರಾಧದಿಂದ ವೈಶಂಪಾಯನಗುರುಗಳ ಶಾಪಕ್ಕೆ ಗುರಿಯಾಗಿ, ಕಲಿತ ವಿದ್ಯೆಯೆಲ್ಲ ಮರೆತುಹೋಗಲು; ಶ್ರೀಸೂರ್ಯದೇವನನ್ನು ಕುರಿತು ತಪಸ್ಸು ಮಾಡಲಾಗಿ, ಆಗ ಶ್ರೀಸೂರ್ಯನಾರಾಯಣನ ಸಲಹೆಯಂತೆ ಶ್ರೀಶಾರದಾದೇವಿಯನ್ನೇ ಸ್ತುತಿಸಿ ಮತ್ತೆ ಆ ವಿದ್ಯೆಯನ್ನೆಲ್ಲ ಸ್ಮರಣೆಗೆ ತಂದುಕೊಂಡು, ಜನಕರಾಜನ ಸಭೆಯಲ್ಲಿ ಎಲ್ಲ ವಿದ್ವಾಂಸರನ್ನೂ ವಾದದಲ್ಲಿ ಜಯಿಸಿ ವಿದ್ವದ್ಗ್ರೇಸರರಾಗಿ ಶೋಭಿಸಿದರು. ಇಂಥ ಸರ್ವ ಸಮರ್ಥವಾದ ಶ್ರೀಶಾರದೆಯೇ ನನ್ನ ದೈವವು ! ಬೇರೆಯರೇತಕ್ಕೆ ?

CC-O. Sri Vidyabharathi Book Centre, Singeri

CC-O. In Public Domain. Digitized by eGangotri

ಯದ್ಭರ್ತೇತಿ ಚತುರ್ಮುಖಿಸ್ತ್ರಿಜಗತಾಂ ಸೃಷ್ಟಿಂ ಕರೋತ್ಯಂಜಸಾ
ಲೋಕಾನ್ವಿಷ್ಣುರವಾಪ್ಯ ಯಚ್ಛ್ವಶುರತಾಂ ರಕ್ಷತ್ಯಶೇಷಾನಪಿ ।
ಯದ್ಭಾ ಭ್ರೇತಿ ಶಿವಃ ಸಮಸ್ತವಿಲಯೇ ಶಕ್ತಸ್ತಥಾ ಸರ್ವವಿ-
ತ್ತಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ
ನಾಮ್ನಾಯತೇ ॥೧೦॥

ಶ್ರೀಬ್ರಹ್ಮದೇವನು ಶ್ರೀಶಾರದಾದೇವಿಯ ಪತಿಯಾಗಿದ್ದೇ ಜಗತ್ಸೃಷ್ಟಿಯನ್ನು ಮಾಡುತ್ತಿದ್ದಾನೆ; ಶ್ರೀಮಹಾವಿಷ್ಣುವು ಈಕೆಯ ಪಾವನಾಂಗಿರುವ ಬಲದಿಂದಲೇ ಸಕಲಜಗತ್ತನ್ನೂ ರಕ್ಷಿಸುವವನಾಗಿದ್ದಾನೆ; ಶ್ರೀಪರಮೇಶ್ವರನೂ ಶ್ರೀಶಾರದೆಯ ಸಹೋದರನಾಗಿರುವ ಕಾರಣದಿಂದೇ ತನ್ನ ಜಗತ್ಸಂಹಾರಕಾರ್ಯವನ್ನು ಮಾಡಲು ಶಕ್ತನಾಗಿದ್ದಾನೆ. ಹೀಗೆ ತ್ರಿಮೂರ್ತಿಗಳಿಗೂ ಅವರವರ ಅಧಿಕೃತಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಉಂಟುಮಾಡುವ ಶ್ರೀಶಾರದಾದೇವಿಗೆ ಎಣೆಯುಂಟೆ ? ಈಕೆಯೇ ನನಗೆ ಪರಾದೇವತೆಯಲ್ಲದೆ ಬೇರೆ ಯಾರೂ ಆಗಲಾರರು.

ಯತ್ಸ್ಯಾಂದರ್ಯಮವೇಕ್ಷ್ಯ ಶೈಲತನಯಾ ಕ್ಷೀರಾಂಬುರಾಶ್ಯುದ್ಭವಾ
ಚಾದ್ಯಾ ತತ್ರ ಭಯೈವ ಗೌರತನುತಾಂ ಸಂಪ್ರಾಪದನ್ಯಾ ಪುನಃ
ವಿಷ್ಣೋರ್ವಕ್ಷಸಿ ಗೂಢಭಾವಮಭಜದ್ವಿಶ್ವಾಂಗಲಾವಣ್ಯಯು-
ತ್ತಾ ವಾಣೀ ಮಮ ದೈವತಂ ತದಿತರನ್ನಾಮ್ನಾಪಿ
ನಾಮ್ನಾಯತೇ ॥೧೧॥

ಹಿಮವತ್ಪರ್ವತರಾಜನ ಕುವರಿಯಾದ ಶ್ರೀಪಾರ್ವತೀದೇವಿಯೂ, ಕ್ಷೀರಸಮುದ್ರರಾಜನ ತನಯೆಯಾದ, ಶ್ರೀಮಹಾವಿಷ್ಣುವನ್ನು ಒಲಿಸಿದ, ಶ್ರೀಲಕ್ಷ್ಮೀದೇವಿಯೂ ಸಹ, ನಮಗೆ ಸಮರಾದ ಸುಂದರಿಯರು ಯಾರೂ ಲೋಕದಲ್ಲಿ ಇಲ್ಲವೆಂದು ಹೆಮ್ಮೆಪಡುತ್ತಿದ್ದರು. ಶ್ರೀಶಾರದಾದೇವಿಯ ದಿವ್ಯವಾದ ಅವಯವಗಳ ಲಾವಣ್ಯವನ್ನು ಕಂಡೊಡನೆಯೇ ಭಯದಿಂದ ಆ ಪಾರ್ವತೀದೇವಿಯು ಗೌರಿಯಾದಳು (ರಕ್ತಹೀನಳಾದವಳಂತೆ ಬಿಳುಪಾದಳು); ಆ ಲಕ್ಷ್ಮೀದೇವಿಯೂ ಸಹ ಯಾರಿಗೂ ಮುಖವನ್ನು ತೋರಿಸಲಾರದೆ ನಾಚಿಕೆಯಿಂದ ತನ್ನ ಪತಿಯಾದ ವಿಷ್ಣುವಿನ ವಕ್ಷಸ್ಥಳದಲ್ಲಿ ಮುಖ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಚ್ಚಿಕೊಂಡು ಅಡಗಿಕೊಂಡಳು. ಇಂಥ ಲೋಕೋತ್ತರಲಾವಣ್ಯವತಿಯಾಗಿ ವಿರಾಜಿಸುವ ಶ್ರೀಶಾರದಾದೇವಿಯನ್ನೇ ನಾನು ತ್ರಿಕರಣಗಳಿಂದಲೂ ನಿತ್ಯವೂ ಆರಾಧಿಸುತ್ತೇನೆ. ಈಕೆಯೇ ನನ್ನ ಪರದೇವತೆಯು.

ಕಲ್ಯಾಣಾನಿ ತನೋತು ಕಾಪಿ ತರುಣೀ ಶೃಂಗಾದ್ರಿಭೂಷಾಯಿತಾ
ಶ್ರೀಮಚ್ಛಂಕರದೇಶಿಕೇಂದ್ರಕಲಿತಂ ಚಕ್ರಂ ಸದಾಧಿಷ್ಠಿತಾ ।
ದೂರಸ್ಥಾಮಪಿ ಪಾದಸಪ್ರಜನತಾಂ ವಿದ್ಯಾಯುರಾರೋಗ್ಯಸ-
ತ್ಸಂತತ್ಯಾದಿಮನೋರಥಾಪ್ತಿಸಹಿತಾಂ ಸಂತನ್ವತೀ ಸತ್ವರಂ ॥೧೨॥

ಶ್ರೀಪರಶಿವಪರಾವತಾರರಾವ ಶ್ರೀಮಚ್ಛಂಕರಭಗವತ್ಪಾದಾಚಾರ್ಯರಿಂದ ಸ್ಥಾಪಿತವಾಗಿರುವ ಶ್ರೀಚಕ್ರದಲ್ಲಿ ಯಾವಾಗಲೂ ನೆಲೆಸಿದ್ದು; ಶ್ರೀಶೃಂಗಗಿರಿಪರಮಪಾವನಕ್ಷೇತ್ರಕ್ಕೆ ಪರಮಾಲಂಕಾರವಾಗಿ ಬೆಳಗುತ್ತ; ತನ್ನ ಪಾದಕಮಲಗಳನ್ನು ನಮಸ್ಕರಿಸುವವರಿಗೆ ಅತಿದೂರದಲ್ಲಿರುವವರಿಗೂ ಸಹ ಸದ್ವಿದ್ಯೆ, ಪರಮಾಯುಸ್ಸು, ಪೂರ್ಣಾರೋಗ್ಯ, ಸತ್ಸಂತಾನ – ಇವೇ ಮೊದಲಾದ ಐಹಿಕಾಮುಷ್ಮಿಕಗಳಾದ ಸಕಲಮನೋರಥಗಳನ್ನೂ ಶೀಘ್ರವಾಗಿಯೇ ವಿಸ್ತರಿಸುವ ಶ್ರೀಮಹಾಶಾರದಾದೇವಿಯು ಎಲ್ಲರಿಗೂ ಕಲ್ಯಾಣವನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಮತ್ಸಚ್ಚಿದಾನಂದ ಶಿವಾಭಿನವನರಸಿಂಹಭಾರತೀಗುರುವರಕರಕಮಲಸಂಜಾತಸ್ಯ ಶ್ರೀಶೃಂಗಗಿರಿ ಶ್ರೀಶಾರದಾಜಗದ್ಗುರುಪೀಠಾಧಿಪಸ್ಯ ಶ್ರೀಮಚ್ಚಂದ್ರಶೇಖರಭಾರತೀ, ಮತೀಶ್ವರಯ್ಯ ಕೃತಿಷು
ಶ್ರೀವಾಣ್ಯುತ್ಕರ್ಷಮಂಜರೀಸ್ತುತಿಃ ಸಮಾಪ್ತಾ ।

———

CC-O. In Public Domain. Digitized by eGangotri

ಶ್ರೀಶಾರದಾಸ್ತುತಿಃ ।

ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।
ತ್ವಾಮಹಂ ಪ್ರಾರ್ಥಯೇ ದೇವಿ ವಿದ್ಯಾದಾನಂಚ ದೇಹಿ ಮೇ ॥೧॥

ಶ್ರೀಶಾರದಾದೇವಿಯು ಕಾಶ್ಮೀರದೇಶದಲ್ಲಿ ಸರ್ವಜ್ಞಪೀಠದಲ್ಲಿ ನೆಲೆಸಿದವಳು. ಸಕಲವಿದ್ಯಾಸ್ವರೂಪಳಾಗಿರುವ ಶ್ರೀಶಾರದಾದೇವಿಯು ಸಕಲವಿದ್ಯೆಗಳನ್ನೂ ಅನುಗ್ರಹಿಸುವಳು. ಹಾಗೆಯೇ ಬ್ರಹ್ಮವಿದ್ಯಾಸ್ವರೂಪಿಣಿಯಾಗಿ ಬ್ರಹ್ಮವಿದ್ಯಾಪ್ರದಾಯಿನಿಯಾಗಿ ಪರಮಪುರುಷಾರ್ಥವಾದ ಮೋಕ್ಷವನ್ನೂ ಕರುಣಿಸುವಳು. ಇಂಥ ಶ್ರೀಶಾರದಾದೇವಿಯನ್ನು ಒಲಿಸಿಕೊಂಡು ಶ್ರೀಮಚ್ಛಂಕರಭಗವತ್ಪಾದರವರು ಈಕೆಯನ್ನು ಭಕ್ತರ ಅನುಗ್ರಹಕ್ಕಾಗಿ ಶ್ರೀಶೃಂಗಗಿರಿಕ್ಷೇತ್ರದಲ್ಲಿ ಪ್ರತಿಷ್ಠಿಸಿದ್ದಾರೆ. ಸದ್ವಿದ್ಯೆಯ ಲಾಭಕ್ಕಾಗಿ ಶ್ರೀಶಾರದಾದೇವಿಯನ್ನು ನಮಸ್ಕರಿಸಿ ಪೂಜಿಸುತ್ತೇನೆ. ನನಗೆ ಸದ್ವಿದ್ಯೆಯನ್ನು ಕರುಣಿಸಿ ಶ್ರೀಶಾರದೆಯು ನನ್ನನ್ನು ರಕ್ಷಿಸಲಿ.

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ।
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥೨॥

ಹೇ ಸರಸ್ವತೀ ದೇವಿಯೇ, ಕಾಮರೂಪಿಣಿಯಾಗಿ ನೀನು ಸಕಲರಿಗೂ ಬೇಡುವ ವರಗಳನ್ನು ಕೊಡುವವಳಾಗಿದ್ದೀಯೆ. ಶ್ರೇಯಸ್ಕರವಾಗಿರುವ ಸದ್ವಿದ್ಯೆಯನ್ನು ಸಂಪಾದಿಸಲು ಆರಂಭಿಸಿದ್ದೇನೆ. ನನಗೆ ಆ ವಿದ್ಯೆಯೂ ಅದರ ಫಲವೂ ಸಹ ಯಾವಾಗಲೂ ಸಿದ್ಧಿಸುವಂತೆ ಅನುಗ್ರಹಿಸು ತಾಯೆ.

ಆವಿದ್ಯಾಮೂಲನಾಶಿನ್ಯೈ ವಿದ್ಯಾವಯವಮೂರ್ತಯೇ ।
ಸರ್ವವಿದ್ಯಾಪ್ರದಾಯಿನ್ಯೈ ಮೂಕಾಂಬಾಯೈ ನಮೋ ನಮಃ ॥೩॥

ಸರ್ವಾತ್ಮಕ ಬ್ರಹ್ಮವಿದ್ಯೆಯನ್ನು ನೀಡುವವಳು ನೀನು; ಮೂಕಾಸುರನನ್ನು ಸಂಹರಿಸಿದವಳೂ, ಮೂಕರನ್ನು ವಾಗ್ಮಿಗಳನ್ನಾಗಿ ಮಾಡುವವಳೂ ಆಗಿದ್ದೀಯೆ. ಸಕಲವಿದ್ಯಾಸ್ವರೂಪಿಣಿಯೂ ನೀನು. ಹೇ ದೇವಿ ಮೂಕಾಂಬಿಕೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸಾರಕಾರಣವಾಗಿರುವ ಅವಿದ್ಯೆಯನ್ನು ನಿರ್ಮೂಲವಾಗಿ ನಾಶಮಾಡುವ ನಿನಗೆ ನಿತ್ಯವೂ ನಮಸ್ಕಾರವು,

ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥೪॥

ಶರತ್ಕಾಲದ ಆರಳಿದ ಕಮಲದಂತೆ ಶೋಭಿಸುವ ಮುಖದ ಶ್ರೀಶಾರದೆ, ಸರ್ವೇಚ್ಛೆಗಳನ್ನೂ ಪೂರ್ಣಮಾಡುವ ನೀನು ನಮ್ಮ ಮುಖಕಮಲದಲ್ಲಿ ನಿತ್ಯವೂ ಸನ್ನಿಹಿತಳಾಗಿದ್ದು, ಸತ್ಸಂಪದ್ರೂಪವಾದ ಪರಮಾತ್ಮಜ್ಞಾನವನ್ನು ನೀಡು.

ಶರದಿಂದವಿಕಾಸಮಂದಹಾಸಾಂ ಸ್ಫುರದಿಂದೀವರಲೋಚ-
ನಾಭಿರಾಮಾಂ ।
ಅರವಿಂದಸಮಾನಸುಂದರಸ್ಯಾಮರವಿಂದಾಸನಸುಂದರೀ-
ಮುಪಾ ಸೇ ॥೫॥

ಶರತ್ಕಾಲದ ಪೂರ್ಣಿಮಾಚಂದ್ರನ ಬೆಳದಿಂಗಳಿನಂತೆ ರಾಜಿಸುವ ಮುಗುಳುನಗೆಯ; ಆರಳಿದ ಕನ್ನೈದಿಲೆಯಂಥ ಕಣ್ಣುಗಳಿಂದ ಶೋಭಿಸುತ್ತಿರುವ; ಕಮಲಕ್ಕೆ ಸರಿಸಮವಾದ ಮುಖವುಳ್ಳ; ಕಮಲಾಸನನಾದ ಶ್ರೀಬ್ರಹ್ಮದೇವನ ಪ್ರಿಯಮಡದಿಯಾಗಿರುವ ಶ್ರೀಶಾರದಾದೇವಿಯನ್ನು ಸೇವಿಸುತ್ತೇನೆ,

ಆಶಾಸು ರಾಶೀಭವದಂಗವಲ್ಲೀಭಾಸ್ಯೈಪ ದಾಸೀಕೃತದುಗ್ಧ-
ಸಿಂಧುಂ ।
ಮಂದಸ್ಮಿತಾನಿಂದಿತಶಾರದೇಂದುಂ ವಂದೇರವಿಂದಾಸನ-
ಸುಂದರಿ ತ್ವಾಂ ॥೬॥

ಹತ್ತು ದಿಕ್ಕುಗಳಲ್ಲಿಯೂ ತುಂಬಿ, ಕಡೆಯಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಶುಭ್ರವಾದ ದೇಹದ ಕಾಂತಿಯಿಂದ ಕ್ಷೀರಸಮುದ್ರವನ್ನು ದಾಸಿಯೆನ್ನಾಗಿ ಮಾಡಿಕೊಂಡು, ತನ್ನ ಮಂದಹಾಸದಿಂದ ಶರತ್ಕಾಲದ ಪೂರ್ಣಿಮಾಚಂದ್ರನನ್ನು ತಿರಸ್ಕರಿಸಿರುವ, ಪದ್ಮಾಸನನಾದ

CC-O. Vidyabharathi Book Centre. Shimoga

CC-O. In Public Domain. Digitized by eGangotri

ಶ್ರೀಬ್ರಹ್ಮದೇವನ ಸುಂದರಿಯಾದ ಶ್ರೀಶಾರದೇ, ನಿನ್ನನ್ನು ಸದ್ವಿದ್ಯೆಗಾಗಿ ನಿತ್ಯವೂ ವಂದಿಸುತ್ತೇನೆ.

ವಾಣೀಂ ವೀಣಾಪಾಣಿಂ ನತಗೀರ್ವಾಣೀಂ ಪ್ರಸನ್ನಫಣಿವೇಣೀಂ ।
ದೃಶಾ ವಿನಿರ್ಜಿತೈಣೀಂ ಗುಣಗಣಮಣಿಭೂಕ್ಷಿತಾಂ ವಂದೇ ॥೭॥

ಕೈಯ್ಯಲ್ಲಿ ವೀಣೆಯನ್ನು ಧರಿಸಿ, ನೀಲವರ್ಣದ ಸರ್ಪದಂತಿರುವ ಜಡೆಯಿಂದ ಶೋಭಿಸುತ್ತಿರುವ; ಕಣ್ಣುಗಳಿಂದ ಜಿಂಕೆಗಳನ್ನು ಜಯಿಸಿರುವ; ಸಮಸ್ತಕಲ್ಯಾಣಗುಣಗಣಗಳಿಂದ ಅಲಂಕೃತಳಾಗಿರುವ ಶ್ರೀವಾಣೀದೇವಿಯನ್ನು ವಂದಿಸುತ್ತೇನೆ.

ದೋರ್ಭಿರ್ಯುಕ್ತಾ ಚತುರ್ಭಿಃ ಸ್ಫಟಿಕಮಣಿಮಯೀಮಕ್ಷಮಾಲಾಂ ದಧಾನಾ
ಹಸ್ತೇನೈಕೇನ ಪದ್ಮಂ ಸಿತಮಪಿ ಚ ಶುಕಂ ಪುಸ್ತಕಂ
ಚಾಪರೇಣ ।
ಭಾಸಾ ಕುಂದೇಂದುಶಂಖಿಸ್ಫಟಿಕಮಣಿನಿಭಾ ಭಾಸಮಾನಾಸಮಾನಾ
ಸಾ ಮೇ ವಾಗ್ದೇವತೇಯಂ ನಿವಸತು ವದನೇ ಸರ್ವದಾ
ಸುಪ್ರಸನ್ನಾ ॥೮॥

ನಾಲ್ಕು ತೋಳುಗಳಲ್ಲಿ ಸ್ಫಟಿಕದ ಜಪಮಾಲೆಯನ್ನೂ, ಬಿಳಿಯ ಕಮಲವನ್ನೂ, ಗಿಣಿಯ ವರಿಯನ್ನೂ, ಪುಸ್ತಕವನ್ನೂ ಹಿಡಿದುಕೊಂಡು ವಿರಾಜಿಸುವ; ಮಲ್ಲಿಗೆ, ಚಂದ್ರ, ಶಂಖ, ಸ್ಫಟಿಕಗಳಿಗೆ ಸಮಾನವಾದ ಶುಭ್ರವಾದ ಕಾಂತಿಯಿಂದ ಬೆಳಗುತ್ತಿರುವ; ವಾಗ್ದೇವತೆಯೂದ ಈ ಶಾರದೆಯು ನನ್ನಲ್ಲಿ ಅನುಗ್ರಹದಿಂದ ಪ್ರಸನ್ನಳಾಗಿ ನನ್ನ ವದನಾರವಿಂದದಲ್ಲಿ ಯಾವಾಗಲೂ ನೆಲೆಸಿರಲಿ.

ಯೂ ಕುಂದೇಂದುತುಷಾರಹಾರಧವಳಾ ಯೂ ಶುಭ್ರವಸ್ತ್ರಾವೃತಾ
ಯೂ ವೀಣಾವರದಂಡಮಂಡಿತಕರಾ ಯೂಶ್ವೇತಪದ್ಮಾಸನಾ ।
ಯೂ ಬ್ರಹ್ಮಾಚ್ಯುತಶಂಕರಪ್ರಭೃತಿಭಿರ್ದೇವೈಃ ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ ನಿಃಶೇಷಜಾಡ್ಯಾಪಹಾ ॥೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶಾರದಾದೇವಿಯು ಮಲ್ಲಿಗೆ, ಚಂದ್ರ, ಹಿಮ, ಮುತ್ತಿನಹಾರ-ಇವುಗಳಂತೆ ಅತ್ಯಂತಶುಭ್ರವರ್ಣದವಳಾಗಿದ್ದು, ಶುಭ್ರವಾದ ವಸ್ತ್ರವನ್ನು ಧರಿಸಿರುವಳು; ಕೈಯಲ್ಲಿ ಶ್ರೇಷ್ಠವಾದ ವೀಣೆಯನ್ನು ಹಿಡಿದು, ಬಿಳಿಯ ಕಮಲದಲ್ಲಿ ಮಂಡಿಸಿರುವಳು; ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳೂ ಸಹ ತಮ್ಮ ತಮ್ಮ ಕಾರ್ಯನಿರ್ವಾಹಕ್ಕೆ ಬೇಕಾದ ಸಾಮರ್ಥ್ಯಕ್ಕಾಗಿ ನಿತ್ಯವೂ ಈಕೆಯನ್ನು ಪೂಜಿಸುವರು; ಸಮಸ್ತಜಾಡ್ಯವನ್ನು ಪರಿಹರಿಸುವ ಇಂಥ ಪರಮಪೂಜ್ಯಳಾದ ಶ್ರೀಸರಸ್ವತೀದೇವಿಯು ನಮಗೆ ಶ್ರೇಯಃ ಸಾಧನೆಯ ಶಕ್ತಿಯನ್ನು ಅನುಗ್ರಹಿಸಿ ರಕ್ಷಿಸಲಿ.

ತವ ಕರಕಮಲಸ್ಥಾಂ ಸ್ಫಾಟಿಕೀಮಕ್ಷಮೂಲಾಂ ನಖಿಕಿರಣವಿ-
ಭಿನ್ನಾಂ ದಾಡಿಮಿಬೀಜಬುದ್ಧ್ಯಾ ।
ಪ್ರತಿಕಲಮನುಕರ್ಷನ್ಕೀರೋ ನಿಷಿದ್ಧಃ ಸ ಭವತು ಮಮ
ಭೂತ್ಯೈ ವಾಣಿ ತೇ ಮಂದಹಾಸಃ ॥೧೦॥

ಶ್ರೀಸರಸ್ವತೀದೇವಿಯು ಸ್ಫಟಿಕದ ಜಪಮಾಲೆಯನ್ನು ಹಿಡಿದು. ಅಕ್ಷರ ಸ್ವರೂಪದ ಪರಮಾತ್ಮತತ್ತ್ವವನ್ನು ಜಪಿಸುತ್ತಿರುವಳು. ಶುಭ್ರವಾದ ಸ್ಫಟಿಕದ ಮಣಿಗಳು ಅತಿಯಾಗಿ ಕೆಂಪಾಗಿರುವ ಈಕೆಯ ಬೆರಳಿನ, ಉಗುರುಗಳ ಕಾಂತಿಯನ್ನು ಪ್ರತಿಬಿಂಬಿಸಿ, ಬಿಳುಪುಮಿಶ್ರವಾದ ರಕ್ತವರ್ಣವುಳ್ಳದ್ದಾಗಿ, ದಾಳಿಂಬೆಹಣ್ಣಿನಬೀಜದಂತೆ ವಿರಾಜಿಸುತ್ತದೆ, ಈಕೆಯ ಕೈಯಲ್ಲಿರುವ ಆಟದ ಗಿಣಿಯಮರಿಯು ಆ ಮಣಿಯನ್ನು ದಾಳಿಂಬದ ಬೀಜವೆಂದು ಬಗೆದು ಅದನ್ನು ತಿನ್ನುವುದಕ್ಕೆಂದು ಕುಕ್ಕುವುದಕ್ಕೆ ಹೋಗುತ್ತದೆ. ಇದನ್ನು ನೋಡಿ ಇದರ ಭ್ರಾಂತಿಗೆ ಶ್ರೀಸರಸ್ವತೀದೇವಿಯು ನಗುತ್ತಾಳೆ. ಶುಭ್ರವಾದ ಈಕೆಯ ಮುಗುಳುನಗೆಯ ಕಾಂತಿಯಿಂದ ಆ ಸ್ಫಟಿಕಮಣಿಯ ಕೆಂಪುಬಣ್ಣವು ಹೋಗಿ, ಅದರ ಸಹಜವಾದ ಸ್ವಚ್ಛತೆಯು ವ್ಯಕ್ತವಾಗುವುದು. ಅದನ್ನು ಕಂಡು ಇದು ದಾಳಿಂಬಬೀಜವಲ್ಲವೆಂದು ತಿಳಿದು ಆ ಗಿಣಿಯಮರಿಯು ಹಿಂದಕ್ಕೆ ಸರಿಯುವುದು. ಶ್ರೀಶಾರದೆಯು ನಗುವುದನ್ನು ನಿಲ್ಲಿಸಲು, ಮತ್ತೆ ಆ ಸ್ಫಟಿಕಮಣಿಯಲ್ಲಿ ದಾಳಿಂಬಬೀಜದ ಭ್ರಾಂತಿಯುಂಟಾಗಿ ಆ ಗಿಣಿಯಮರಿಯು ಅದನ್ನು ತಿನ್ನಲು ಮುಂಬರಿಯುವುದು. ಈ ಕ್ರಮವು ಮತ್ತೆ ಮತ್ತೆ ಆಗುತ್ತಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂಥ ಲೀಲಾಮಯಳಾದ ಶ್ರೀಶಾರದಾದೇವಿಯ ಮಂದಹಾಸವು ನಮಗೆ ಸೌಭಾಗ್ಯದಾಯಕವಾಗಲಿ,

ಸುರಾಸುರೈಃ ಸೇವಿತಾಪಾದಪಂಕಜಾ ಕರೇ ವಿರಾಜತ್ಕಮನೀಯ-
ಪುಸ್ತಕಾ ।
ವಿರಿಂಚಿಪತ್ನೀ ಕಮಲಾಸನಸ್ಥಿತಾ ಸರಸ್ವತೀ ನೃತ್ಯತು ವಾಚಿ
ಮೇ ಸದಾ ॥೧೧॥

ಸುರಾಸುರರಿಂದಲೂ ಜ್ಞಾನದ್ದಿಸಿಗಾಗಿ ಸೇವಿತಗಳಾದ ಪಾದಕಮಲಗಳನ್ನುಳ್ಳವಳಾಗಿ, ಜ್ಞಾನಾಧಾರವಾಗಿರುವ ಪುಸ್ತಕಧಾರಿಣಿಯಾಗಿ, ಕಮಲಾಸನವನ್ನು ಅಲಂಕರಿಸಿರವ ಶ್ರೀಬ್ರಹ್ಮದೇವನ ರಾಣಿಯಾಗಿರುವ ಶ್ರೀಸರಸ್ವತೀದೇವಿಯು ನನ್ನ ವಾಗಿಂದ್ರಿಯದಲ್ಲಿ ನರ್ತಿಸುತ್ತ ತತ್ತ್ವವಿಷಯದ ಮಾತುಗಳೇ ಇರುವಂತೆ ಅನುಗ್ರಹಿಸಲಿ.

ಸರಸ್ವತೀ ಸರಸಿಜಕೇಸರಪ್ರಭಾ ತಪಸ್ವಿನೀ ಸಿತ ಕಮಲಾಸನ-
ಸ್ಥಿತಾ ।
ಘನಸ್ತನೀ ಕಮಲವಿಲೋಲಲೋಚನಾ ಮನಸ್ವಿನೀ ಭವತು
ವರಪ್ರಸಾದಿನೀ ॥೧೨॥

ಶ್ವೇತಕಮಲದ ದಳದಂತೆ ಶುಭ್ರಕಾಂತಿಯಿಂದ ,ಶುಭ್ರಕಮಲದಲ್ಲಿ ಕುಳಿತು ಕಮಲನೇತ್ರೆಯಾಗಿ, ನಿಬಿಡಕುಚಗಳಿಂದ ಶೋಭಿಸುವ, ಮಾನವತೀಯೂ, ತತ್ತ್ವನಿರತಳೂ ಆಗಿರುವ ಶ್ರೀಸರಸ್ವತೀದೇವಿಯು ನಮಗೆ ಇಷ್ಟಗಳಾದ ವರಗಳನ್ನು ಕರುಣಿಸುವವಳಾಗಲಿ.

ಸರಸ್ವತಿ ನಮಸ್ತುಭ್ಯಂ ಸರ್ವದೇವಿ ನಮೋ ನಮಃ ।
ಶಾಂತರೂಪೇ ಶಶಿಧರೇ ಸರ್ವಯೋಗೇ ನಮೋ ನಮಃ ॥೧೩॥

ಸರ್ವಾತ್ಮಕಳೂ, ನಿರ್ವಿಕಾರಳಾಗಿ ಶಾಂತಸ್ವರೂಪಳಾಗಿ, ಸರ್ವಯೋಗಗಳ ಸಿದ್ಧಿಸ್ವರೂಪಳೂ, ಚಂದ್ರಕಲಾಂಲಕೃತಳೂ ಆಗಿರುವ ಶ್ರೀಸರಸ್ವತೀದೇವಿಯೆ, ನಿನಗೆ ಮತ್ತೆ ಮತ್ತೆ ನಮಸ್ಕಾರವು.

Sri Vidyabharathi Book Centre, Sringeri

CC-0. In Public Domain. Digitized by eGangotri

ನಿರಾಧಾರಾಯೈ ನಿರಾಧಾರೇ ನಿರಾಧಾರಾಯೈ ನಮೋ ನಮಃ ।
ವಿಶಾಲಾಕ್ಷಿ ವಿಶಾಲಾಕ್ಷಿ ಶುದ್ಧಜ್ಞಾನೇ ನಮೋ ನಮಃ ॥೧೪॥

ನಿತ್ಯನಿರತಿಶಯಸುಖಿಸ್ವರೂಪಳೂ; ಸರ್ವಾಧಾರಳಾಗಿ ತಾನು ನಿರಾಧಾರಳೂ; ನಿರಯವಶುದ್ಧಸ್ವರೂಪಳೂ; ಸಕಲವಿದ್ಯೆಗಳಿಗೂ ತೌರುಮನೆಯಾದವಳೂ; ವಿಶಾಲಕೃಪಾದೃಷ್ಟಿಯವಳೂ ಆಗಿರುವ ಶ್ರೀಶಾರದಾದೇವಿಯನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇವೆ. ಸುಜ್ಞಾನದಾಯಿನಿಯಾಗಿ ನಮ್ಮನ್ನು ಸಲಹಲಿ,

ಜ್ಞಾನವಿಜ್ಞಾನರೂಪಾಯೈ ಜ್ಞಾನಮೂರ್ತ್ಯೈ ನಮೋ ನಮಃ ।
ನಾನಾಶಾಸ್ತ್ರಸ್ವರೂಪಾಯೈ ನಾನಾರೂಪೇ ನಮೋ ನಮಃ ॥೧೫॥

ಸಮ್ಯಗ್ಜ್ಞಾನಸ್ವರೂಪಳೂ. ಶಾಸ್ತ್ರಜ್ಞಾನ ಮತ್ತು ಅಧರ ಅನುಭವ ಸ್ವರೂಪಳೂ, ಸಕಲಶಾಸ್ತ್ರಸ್ವರೂಪಳೂಆಗಿರುವ ಶ್ರೀಸರಸ್ವತೀದೇವಿಯನ್ನು ಸಮ್ಯಗ್ಜ್ಞಾನದ ಅನುಭವದ ಸಿದ್ಧಿಗೋಸ್ಕರ ಬಾರಿಬಾರಿಗೂ ನಮಸ್ಕರಿಸುತ್ತೇನೆ,

ಮಹಾದೇವ್ಯೈ ಮಹಾಕಾಳ್ಯೈ ಮಹಾಲಕ್ಷ್ಮ್ಯೈ ನಮೋ ನಮಃ ।
ಬ್ರಹ್ಮವಿಷ್ಣುಶಿವಾಯೈ ಚ ಬ್ರಹ್ಮನಾಯ್ಯೈ ನಮೋ ನಮಃ॥೧೬॥

ಮಹಾಕಾಳೀ ಮಹಾಲಕ್ಷ್ಮೀ ಮಹಾಸರಸ್ವತೀರೂಪಳಾಗಿ, ಬ್ರಹ್ಮವಿಷ್ಣುಮಹೇಶ್ವರರ ಸ್ವರೂಪಳಾಗಿ, ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಕಾರಣಳಾಗಿರುವ ಶ್ರೀಮಹಾದೇವಿಯೆ, ನಿರಂತರವೂ ನಮಸ್ಕಾರವು ನಿನಗೆ,

ಇತಿ ಶ್ರೀಅಗಸ್ತ್ಯಮುನಿವಿರಚಿತಂ ಶ್ರೀಸರಸ್ವತೀಸ್ತೋತ್ರಂ
ಸಂಪೂರ್ಣಂ ॥

ಯಾಜ್ಞವಲ್ಕ್ಯಮುನಿಕೃತಶ್ರೀಸರಸ್ವತೀಸ್ತೋತ್ರಂ ।

[ಜಗದ್ಗುರು ಶ್ರೀಮಚ್ಚಂದ್ರಶೇಖರಭಾರತೀಸ್ವಾಮಿಗಳವರು ತಮ್ಮ ಶ್ರೀವಾಣ್ಯುತ್ಕರ್ಷಮಂಜರೀಸ್ತೋತ್ರದ ಒಂಭತ್ತನೆಯ ಪದ್ಯದಲ್ಲಿ ಸೂಚಿಸಿರುವ ಶ್ರೀಯಾಜ್ಞವಲ್ಕ್ಯಮಹರ್ಷಿಗಳು ಮಾಡಿರುವ ಶ್ರೀಸರಸ್ವತೀಸ್ತೋತ್ರವು ಇದು.]

CC-O. In Public Domain. Digitized by eGangotri

ವಾಗ್ದೇವತಾಯಾಃ ಸ್ತವನಂ ಶ್ರೂಯತಾಂ ಸರ್ವಕಾಮದಂ ।
ಮಹಾಮುನಿರ್ಯಾಜ್ಞವಲ್ಕ್ಯೋ ಯೇನ ತುಷ್ಟಾವ ತಾಂ
ಪುರಾ ॥೧॥

ಮಹಾಮುನಿಗಳಾದ ಯಾಜ್ಞವಲ್ಕ್ಯರು ಹಿಂದೆ ಸ್ತುತಿಸಿದ ಶ್ರೀವಾಗ್ದೇವಿಯ ಸ್ತೋತ್ರವನ್ನು ಕೇಳಿರಿ; ಇದು ಸ್ತುತಿಸುವವರ ಸಕಲೇಷ್ಟಗಳನ್ನೂ ಈಡೇರಿಸುವುದು.

ಗುರುಶಾಪಾಚ್ಚ ಸ ಮುನಿರ್ಹತವಿದ್ಯೋ ಬಭೂವಹ ।
ತದಾ ಜಗಾಮ ದುಃಖಾರ್ತೋ ರವಿಸ್ಥಾನಂ ಸುಪುಣ್ಯದಂ ॥೨॥

ಯಾಜ್ಞವಲ್ಕ್ಯಮುನಿಗಳು ಹಿಂದೆ ತಮ್ಮ ಗುರುಗಳಾದ ಶ್ರೀವೈಶಂಪಾಯನ ಮುನಿಗಳ ಶಾಪದಿಂದ,ಅವರಿಂದ ಕಲಿತ ವೇದವಿದ್ಯೆಯೆಲ್ಲ ಮರೆತುಹೋಗಲು, ಬಹುವಾಗಿ ದುಃಖಿತರಾಗಿ, ತ್ರಯೀಮೂರ್ತಿಯಾದ ಶ್ರೀ ಸೂರ್ಯನಾರಾಯಣನ ಅನುಗ್ರಹದಿಂದ ವೇದವಿದ್ಯೆಯನ್ನು ಕಲಿಯುವ ಉದ್ದೇಶದಿಂದ ಅತ್ಯಂತಪುಣ್ಯಕರವಾದ ಸೂರ್ಯದೇವನ ಕ್ಷೇತ್ರಕ್ಕೆ ಬಂದರು.

ಸಂಪ್ರಾಪ್ಯ ತಪಸಾ ಸೂರ್ಯಂ ಲೋಕೇರ್ಕೇ ದೃಷ್ಟಿಗೋಚರೇ ।
ತುಷ್ಟಾವ ಸೂರ್ಯಂ ಶೋಕೇನ ರುರೋದ ಚ ಮುಹು-
ರ್ಮುಹುಃ ॥೩॥

ಲೋಕಾರ್ಕಕ್ಷೇತ್ರದಲ್ಲಿ ತಪಸ್ಸುಮಾಡಿ, ಶ್ರೀಸೂರ್ಯದೇವನು ಪ್ರತ್ಯಕ್ಷನಾಗಿಕಾಣಿಸಿಕೊಳ್ಳಲು, ಯಾಜ್ಞವಲ್ಕ್ಯರು ಅತ್ಯಂತದುಃಖದಿಂದ ಮತ್ತೆ ಮತ್ತೆ ಅಳುತ್ತ ಸೂರ್ಯದೇವನನ್ನು ಸ್ತುತಿಸಿದರು.

ಸೂರ್ಯಸ್ತಂ ಪಾಠಯಾಮಾಸ ವೇದವೇದಾಂಗವಿಶ್ವರಃ ।
ಉವಾಚ ಸ್ತುಹಿ ವಾಗ್ದೇವೀಂ ಭಕ್ತ್ಯಾ ಚ ಸ್ಮೃತಿಹೇತವೇ ॥೪॥

ಆಗ ಕರುಣಾಮಯನಾದ, ವೇದಸ್ವರೂಪನಾದ ಶ್ರೀಸೂರ್ಯದೇವನು ಯಾಜ್ಞವಲ್ಕ್ಯರಿಗೆ ಸಾಂಗವೇದಗಳನ್ನು ಪಾಠಹೇಳಿ ಕಲಿಸಿಕೊಟ್ಟನು. ಆದರೂ ಗುರುಶಾಪವು ಪ್ರಬಲವಾದ್ದರಿಂದ ಕಲಿತದ್ದೆಲ್ಲ ಯಾಜ್ಞವಲ್ಕ್ಯರಿಗೆ ಮರೆತು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗುತ್ತಬಂದಿತು. ಆದನ್ನು ಕಂಡು, ಶ್ರೀಸೂರ್ಯದೇವನು. ಸ್ಮರಣ ಶಕ್ತಿಯ ಲಾಭಕ್ಕಾಗಿ ಶ್ರೀವಾಗ್ದೇವಿಯನ್ನು ಸ್ತೋತ್ರಮಾಡೆಂದು ಉಪದೇಶಿಸಿದನು.

ತಮಿತ್ಯುಕ್ತ್ವಾ ದೀನನಾಥೋऽಪ್ಯಂತರ್ಧಾನಂ ಚಕಾರ ಸಃ ।
ಮುನಿಃ ಸ್ನಾತ್ವಾ ಚ ತುಷ್ಟಾವ ಭಕ್ತಿನಮ್ರಾತ್ಮಕಂಧರಃ ॥೫॥

ಇಷ್ಟನ್ನು ಹೇಳಿ, ದೀನದಯಾಳುವಾದ ಶ್ರೀಸೂರ್ಯನಾರಾಯಣನು ಅಂತರ್ಹಿತನಾದನು. ಯಾಜ್ಞವಲ್ಕ್ಯರು ಅದರಂತೆ ಸ್ನಾನಮಾಡಿ ಶುದ್ಧರಾಗಿ, ಭಕ್ತಿಯಿಂದ ನಮಸ್ಕರಿಸಿ ಶ್ರೀಶಾರದಾದೇವಿಯನ್ನು ಹೀಗೆ ಸ್ತುತಿದರು—

ಯಾಜ್ಞವಲ್ಕ್ಯ ಉವಚ—

ಕೃಪಾಂ ಕುರು ಜಗನ್ಮಾತರ್ಮಾಮೇವಂ ಹತತೇಜಸಂ ।
ಗುರುಶಾಪಾತ್ಸ್ಮೃತಿಭ್ರಷ್ಟಂ ವಿದ್ಯಾಹೀನಂ ಚ ದುಃಖಿತಂ ॥೬॥

ಜಗನ್ಮಾತೆ ಶ್ರೀವಾಣಿ, ಗುರುಗಳ ಶಾಪದಿಂದ ಸಾಮರ್ಥ್ಯವನ್ನು ಕಳೆದುಕೊಂಡು, ಜ್ಞಾಪಕಶಕ್ತಿಯಿಲ್ಲದೆ, ವಿದ್ಯಾರಹಿತನಾಗಿ ದುಃಖಿತನಾಗಿರುವ ನನ್ನಲ್ಲಿ ದಯೆಮಾಡು, ತಾಯಿ, ಸದ್ವಿದ್ಯೆಯಿಲ್ಲದಿರುವುದೇ ಮಹದ್ದುಃಖವು.

ಜ್ಞಾನಂ ದೇಹಿ ಸ್ಮೃತಿಂ ವಿದ್ಯಾಂ ಶಕ್ತಿಂ ಶಿಷ್ಯಪ್ರಬೋಧಿನೀಂ ।
ಗ್ರಂಥಕರ್ತೃತ್ವಶಕ್ತಿಂ ಚ ಸುಶಿಷ್ಯಂ ಸುಪ್ರತಿಷ್ಠಿತಂ ॥೭॥

ದೇವಿ, ವಿದ್ಯೆಯನ್ನೂ, ಅದರ ಸರಿಯದ ತಿಳಿವನ್ನೂ, ಅದು ಮಾರೆಯುವಂತೆ ಅದರ ಸ್ಮೃತಿಯನ್ನೂ; ಅದನ್ನು ಶಿಷ್ಯರಿಗೆ ಸರಿಯಾಗಿ ಬೋಧಿಸುವ ಶಕ್ತಿಯನ್ನೂ, ಗ್ರಂಥಗಳನ್ನು ರಚಿಸುವ ಸಾಮರ್ಥ್ಯವನ್ನೂ, ಅದನ್ನು ಸರಿಯಾಗಿ ತಿಳಿದು ಪ್ರಚಾರಮಾಡುವಂಥ ಶಿಷ್ಯನನ್ನೂ ನನಗೆ ಅನುಗ್ರಹಿಸು.

ಪ್ರತಿಯೊಬ್ಬನೂ ಮಾಡಬೇಕಾದದ್ದು -ಅಧೀತಿಬೋಧಾಚರಣ ಪ್ರಚಾರ. ತಾನು ಶಾಸ್ತ್ರಾಧ್ಯಯನಮಾಡಬೇಕು; ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅದರಂತೆ ತಾನು ನಡೆದುಕೊಳ್ಳಬೇಕು; ಇತರರೂ ಹೀಗೆ ಮಾಡುವಂತೆ ಪ್ರಚಾರಮಾಡಬೇಕು. ಹೀಗಿಲ್ಲದಿದ್ದರೆ, ತಾನು ಅಧ್ಯಯನಮಾಡಿದ್ದೂ, ತಿಳಿದದ್ದೂ ವ್ಯರ್ಥವೇ ಸರಿ.

CC-O. In Public Domain. Digitized by eGangotri

ಪ್ರತಿಭಾಂ ಸತ್ಸಭಾಯಾಂ ಚ ವಿಚಾರಕ್ಷಮತಾಂ ಶುಭಾಂ ।
ಲುಪ್ತಂ ಸರ್ವಂ ದೈವಯೋಗಾನ್ನವೀಭೂತಂ ಪುನಃ ಕುರು ॥೮॥

"ಬುದ್ಧಿರ್ನವನವೋನ್ಮೇಷಶಾಲಿನೀ ಪ್ರತಿಭಾ ಮತಾ"-ಎಂಬಂತೆ, ಹೊಸಹೊಸವಿಚಾರಚತುರತೆಯು ಪ್ರತಿಭೆಯು; ಸದ್ವಿದ್ವಾಂಸರ ಸಭೆಯಲ್ಲಿ ನನಗೆ ಇಂಥ ವಿಚಾರಸಾಮರ್ಥ್ಯವುಳ್ಳ ಪ್ರತಿಭೆಯನ್ನು ಅನುಗ್ರಹಿಸು. ನನ್ನ ದುರದೃಷ್ಟದಿಂದ ನಾನು ಕಳೆದುಕೊಂಡಿರುವ ವಿದ್ಯೆಯನ್ನು ಮತ್ತೆ ಹೊಸದಾಗಿ ಅನುಗ್ರಹಿಸು.

ಯಥಾಂತರಂ ಭಸ್ಮನಿ ಚ ಕರೋತಿ ದೇವತಾ ಪುನಃ ।
ಬ್ರಹ್ಮಸ್ವರೂಪಪರಮಾ ಜ್ಯೋತಿಃರೂಪಾ ಸನಾತನೀ ॥೯॥

ಸನಾತನಸ್ವಪ್ರಕಾಶಪರಬ್ರಹ್ಮರೂಪಿಣಿಯಾವ ದೇವಿಯೇ, ಭಸ್ಮದಲ್ಲಿಯೂ ಮೊಳಕೆಯನ್ನುಂಟುಮಾಡುವ ಅಘಟಿತಘಟನಾಸಮರ್ಥಳಲ್ಲವೇ ನೀನು.

ಸರ್ವವಿದ್ಯಾಧಿದೇವೀ ಯಾ ತಸ್ಯೈ ದೇವ್ಯೈ ನಮೋ ನಮಃ ।
ವಿಸರ್ಗಬಿಂದುಮಾತ್ರಾಸು ಯವಧಿಷ್ಠಾನಮೇವ ಚ ॥೧೦॥

ಸಕಲಸದ್ವಿದ್ಯೆಗಳಿಗೂ ಸ್ವಾಮಿನಿಯಾಗಿರುವ ನಿನಗೆ ಹೇ ದೇವಿ, ಆನಂತಾನಂತಪ್ರಣಾಮಗಳನ್ನು ಅರ್ಪಿಸುತ್ತೇನೆ. ಶಬ್ದದ ವಿಸರ್ಗ, ಅನ್ನು ಸ್ವಾರ, ಮಾತ್ರೆ, ಇವುಗಳಿಗೆಲ್ಲ ಮೂಲವಾಗಿದ್ದೀಯೇ ದೇವಿ.

ತದಧಿಷ್ಠಾತ್ರೀ ಯಾ ದೇವೀ ತಸ್ಯೈ ನಿತ್ಯಂ ನಮೋ ನಮಃ ।
ವ್ಯಾಖ್ಯಾಸ್ವರೂಪಾ ಸಾ ದೇವೀ ವ್ಯಾಖ್ಯಾಧಿಷ್ಠಾತೃರೂಪಿಣೀ ॥೧೧॥

ಶಬ್ದಬ್ರಹ್ಮರೂಪಿಣಿಯಾಗಿರುವ ಆ ದೇವಿಗೆ ನಿತ್ಯವೂ ನಮೋ ನಮಃ ವ್ಯಾಖ್ಯಾನಕ್ಕೆ ಅಧಿಷ್ಠಾತ್ರಿಯಾಗಿ, ವ್ಯಾಖ್ಯಾನಸ್ವರೂಪಳು ಆಗಿದ್ದೀಯೆ. ದೇವಿಯ ಅನುಗ್ರಹವಿಲ್ಲದಿದ್ದರೆ ಗ್ರಂಥವನ್ನು ಸರಿಯಾಗಿ ವ್ಯಾಖ್ಯಾನ ಮಾಡುವ ಸಾಮರ್ಥ್ಯವು ಉಂಟಾಗುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಯಾ ವಿನಾ ಪ್ರಸಂಖ್ಯಾವಾನ್ ಸಂಖ್ಯಾಂ ಕರ್ತುಂ ನ ಶಕ್ಯತೇ ।
ಕಲಾಸಂಖ್ಯಾಸ್ವರೂಪಾ ಯಾ ತಸ್ಯೈ ದೇವ್ಯೈ ನಮೋ ನಮಃ ॥೧೨॥

ಪ್ರವಚನಮಾಡುವ ಸಮರ್ಥನಿಗೂ ಸಹ ದೇವಿಯ ಅನುಗ್ರಹವಿಲ್ಲವಾದರೆ ಪ್ರವಚನಮಾಡುವ ಶಕ್ತಿಯಿಲ್ಲವಾಗುವುದು. ಸಕಲಕುಶಲಕಲಾಸ್ವರೂಪಿಣಿಯಾಗಿರುವ ಶ್ರೀವಾಗ್ದೇವಿಗೆ ನಿರಂತರವೂ ನಮಸ್ಕರಿಸುತ್ತೇನೆ.

ಭ್ರಮಸಿದ್ಧಾಂತರೂಪಾ ಯಾ ತಸ್ಯೈ ದೇವ್ಯೈ ನಮೋ ನಮಃ ।
ಸ್ಮೃತಿಶಕ್ತಿರ್ಜ್ಞಾನಶಕ್ತಿರ್ಬುದ್ಧಿಶಕ್ತಿಸ್ವರೂಪಿಣೀ ॥೧೩॥
ಪ್ರತಿಭಾಕಲ್ಪನಾಶಕ್ತಿರ್ಯಾ ಚ ತಸ್ಯೈ ನಮೋ ನಮಃ ॥

ಸ್ಮರಣಶಕ್ತಿಯೂ ನೀನೇ, ಜ್ಞಾನಶಕ್ತಿಯೂ ನೀನೇ, ಬುದ್ಧಿಶಕ್ತಿಯೂ ನೀನೇ ಹೇ ದೇವಿ; ಭ್ರಾಂತಿರೂಪಳೂ ನೀನೇ, ಸಿದ್ಧಾಂತಸ್ವರೂಪಳೂ ನೀನೇ, ಹೀಗೆ ಸರ್ವಾತ್ಮಕಳಾಗಿರುವ ನಿನಗೆ ಸತತವೂ ನಮಸ್ಕರಿಸುತ್ತೇನೆ; ನನಗೆ ಭ್ರಾಂತಿಯನ್ನು ಉಂಟುಮಾಡದೆ, ಸಿದ್ಧಾಂತಾರ್ಥವನ್ನು ಅನುಗ್ರಹಿಸು ಪ್ರತಿಭೆಯೂ ಕಲ್ಪನಾಶಕ್ತಿಯೂ ಆಗಿರುವ ನಿನಗೆ ನಮಸ್ಕಾರವು,

ಸನತ್ಕುಮಾರೋ ಬ್ರಹ್ಮಾಣಂ ಜ್ಞಾನಂ ಪಪ್ರಚ್ಛ ಯತ್ರ ವೈ ॥೧೪॥
ಬಭೂವ ಮೂಕವತ್ಸೋಽಪಿ ಸಿದ್ಧಾಂತಂ ವಕ್ತುಮಕ್ಷಮಃ ।

ಹಿಂದೆ ಸನತ್ಕುಮಾರರು ಬ್ರಹ್ಮದೇವನನ್ನು ತತ್ತ್ವಜ್ಞಾನವನ್ನು ತಿಳಿಸೆಂದು ಕೇಳಿದ್ದಾಗ, ಅದನ್ನು ತಿಳಿಯದೆ ಹೇಳಲಾರದವನಾಗಿ ಮೂಕನಂತಾದನು

ತದಾಜಗಾಮ ಭಗವಾನಾತ್ಮಾ ಶ್ರೀಕೃಷ್ಣ ಈಶ್ವರಃ ॥೧೫॥
ಉವಾಚ ಸ ಚ ತಾಂ ಸ್ತೌಹಿ ಪಾಣೇಮಿಷ್ಟಾಂ ಪ್ರಜಾಪತೇ ॥
ಸ ಚೆ ತುಷ್ಟಾವ ತಾಂ ಬ್ರಹ್ಮಾ ಚಾಜ್ಞಯಾ ಪರಮಾತ್ಮನಃ ॥೧೬॥

ಆಗ ಶ್ರೀಪರಮೇಶ್ವರನು ಶ್ರೀಕೃಷ್ಣನ ರೂಪದಿಂದ ಅಲ್ಲಿಗೆ ಬಂದು ಶ್ರೀವಾಗ್ದೇವಿಯನ್ನು ಸ್ತುತಿಸೆಂದು ಬ್ರಹ್ಮನಿಗೆ ತಿಳಿಸಿದನು. ಅದರಂತೆ ಬ್ರಹ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವನು ಪರಮಾತ್ಮನ ಆಜ್ಞೆಯಂತೆ ಶ್ರೀವಾಣೀದೇವಿಯನ್ನು ಸ್ತೋತ್ರ ಮಾಡಿದನು.

ಚಕಾರ ತತ್ಪ್ರಸಾದೇನ ತದಾ ಸಿದ್ಧಾಂತಮುತ್ತಮಂ ।

ಆಗ ಆಕೆಯ ಪ್ರಸಾದದಿಂದ ಉತ್ತಮವಾದ ವೈದಿಕಾದ್ವೈತಸಿದ್ಧಾಂತವನ್ನು ಯಥಾವತ್ತಾಗಿ ಪ್ರತಿಪಾದಿಸಿ ಪ್ರಚಾರಮಾಡಿದನು.

ಯದಾಪೃನಂತಂ ಪಪ್ರಚ್ಛ ಜ್ಞಾನಮೇತಂ ವಸುಂಧರಾ ॥೧೭॥
ಬಭೂವ ಮೂಕವತ್ಸೋऽಪಿ ಸಿದ್ಧಾಂತಂ ಕರ್ತುಮಕ್ಷಮಃ ।
ತದಾ ತಾಂ ಸ ಚ ತುಷ್ಟಾವ ಸಂತ್ರಸ್ತಃ ಕಸ್ಯ ಚಾಜ್ಞಯಾ ॥೧೮॥
ತತಶ್ಚಕಾರ ಸಿದ್ಧಾಂತಂ ನಿರ್ಮಲಂ ಭ್ರಮಭಂಜನಂ ।

ವಸುಂಧರಾದೇವಿಯು ಅನಂತದೇವನನ್ನು ತತ್ತ್ವವನ್ನು ಪ್ರಶ್ನೆಮಾಡಿದಾಗ, ಅನಂತನೂ ಮೂಕನಂತೆ ತತ್ತ್ವವನ್ನು ತಿಳಿದುಹೇಳಲು ಅಸಮರ್ಥನಾದನು. ಆಗ ಆತನೂ ಶ್ರೀಜಗದಂಬಿಕೆಯಾದ ಶ್ರೀವಾಗ್ದೇವಿಯನ್ನು ಸ್ತುತಿಸಿ, ಸಕಲಭ್ರಾಂತಿಗಳನ್ನೂ ಕಳೆಯುವ ಪ್ರಾಮಾಣಿಕಾದ್ವೈತಸಿದ್ಧಾಂತವನ್ನು ಸ್ಥಾಪಿಸಿದನು.

ವ್ಯಾಸಃ ಪುರಾಣಸೂತ್ರಂ ಚ ಪಪ್ರಚ್ಛ ವಾಲ್ಮೀಕಿಂ ಯದಾ ॥೧೯॥
ಮೌನೀಭೂತಶ್ಚ ಸಸ್ಮಾರ ತಾಮೇವ ಜಗದಂಬಿಕಾಂ ।
ತದಾ ಚಕಾರ ಸಿದ್ಧಾಂತಂ ತದ್ವರೇಣ ಮುನೀಶ್ವರಃ ॥೨೦॥

ವ್ಯಾಸರು ವಾಲ್ಮೀಕಿಗಳನ್ನು ಪುರಾಣ ಮತ್ತು ಸೂತ್ರಗಳ ತಾತ್ಪರ್ಯಾರ್ಥವನ್ನು ಪ್ರಶ್ನೆಮಾಡಿದಾಗ, ಅದನ್ನು ತಿಳಿಯದೆ ಮೌನವನ್ನೇ ಅವಲಂಬಿಸಿದರು. ಆಮೇಲೆ ಆ ಜಗದಂಬಿಕೆಯನ್ನು ಸ್ಮರಿಸಿಕೊಂಡು,ಆಕೆಯ ವರದ ಬಲದಿಂದಲೇ ಅದ್ವೈತಸಿದ್ಧಾಂತವನ್ನು ಸ್ಥಾಪಿಸಿದರು.

ಸಂಪ್ರಾಪ್ಯ ನಿರ್ಮಲಂ ಜ್ಞಾನಂ ಭ್ರಮಾಂಧತ್ವಪ್ರದೀಪಕಂ ।
ಪುರಾಣಸೂತ್ರಂ ಶ್ರುತ್ವಾ ಚ ವ್ಯಾಸಃ ಕೃಷ್ಣಕಲೋದ್ಭವಃ ॥೨೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕೃಷ್ಣನ ಅಂಶರಾದ ಶ್ರೀವ್ಯಾಸರು ಸಹ ಶ್ರೀವಾಗ್ದೇವಿಯ ಅನುಗ್ರಹದಿಂದಲೇ ಭ್ರಮಾಂಧಕಾರವನ್ನು ನಾಶಮಾಡುವ ನಿರ್ಮಲವಾದ ಅದ್ವಿತೀಯಜ್ಞಾನವನ್ನು ಪಡೆದು, ಪುರಾಣಗಳನ್ನೂ ಸೂತ್ರಗಳನ್ನೂ ತಿಳಿದು ರಚಿಸಿದರು.

ತಾಂ ಶಿವಾಂ ವೇದ ದಧ್ಯೌಚ ಶತವರ್ಷಂ ಚ ಪುಷ್ಕರೇ ।
ತದಾ ತ್ವತ್ತೋ ವರಂ ಪ್ರಾಪ್ಯ ಸತ್ಯವೀಂದ್ರೋ ಬಭೂವ ಹ॥೨೨॥

ಅನಂತರ ಶ್ರೀವ್ಯಾಸರು ಶ್ರೀವಾಗ್ದೇವಿಯನ್ನು ತಿಳಿದು, ಪುಷ್ಕರಕ್ಷೇತ್ರದಲ್ಲಿ ನೂರುವರ್ಷಗಳು ಧ್ಯಾನಮಾಡಿದರು. ಆಕೆಯ ವರವನ್ನು ಪಡೆದು ಸತ್ಯವಿಶ್ರೇಷ್ಠರಾದರು. 'ವ್ಯಾಸೋಚ್ಛಿಷ್ಟಮಿದಂ- ಜಗತ್' 'ವಿದ್ವಜ್ಜಗತ್ತೆಲ್ಲ ವ್ಯಾಸರ ಉಚ್ಛಿಷ್ಟವೇ (ಎಂಜಲೇ) ಸರಿ'-ಎಂಬ ಮಾತು ಇವತ್ತಿಗೂ ಸತ್ಯವೇ ಆಗಿದೆ.

ತದಾ ವೇದವಿಭಾಗಂ ಚ ಪುರಾಣಂ ಚ ಚಕಾರ ಸಃ ।

ಶ್ರೀಶಾರದಾದೇವಿಯ ಅನುಗ್ರಹದಿಂದಲೇ ವ್ಯಾಸರು ವೇದಗಳ ವಿಭಾಗವನ್ನೂ, ಪುರಾಣಗಳನ್ನೂ ಸಹ ಪ್ರಚಾರಮಾಡಿದರು.

ಯದಾ ಮಹೇಂದ್ರಃ ಪಪ್ರಚ್ಛ ತತ್ತ್ವಜ್ಞಾನಂ ಸದಾಶಿವಂ ॥೨೩॥
ಕ್ಷಣಂ ತಾಮೇವ ಸಂಚಿಂತ್ಯ ತಸ್ಮೈ ಜ್ಞಾನಂ ದದೌ ವಿಭುಃ ।

ಮಹೇಂದ್ರನು ಸದಾಶಿವನನ್ನು ತತ್ತ್ವಜ್ಞಾನವನ್ನು ತಿಳಿಸೆಂದು ಕೇಳಿದನು. ಸದಾಶಿವನೂ ಶ್ರೀವಾಗ್ದೇವಿಯನ್ನು ಧ್ಯಾನಿಸಿ, ಆಕೆಯ ಅನುಗ್ರಹದಿಂದಲೇ ಆತನಿಗೆ ತತ್ತ್ವಜ್ಞಾನವನ್ನು ಉಪದೇಶಿಸಿದನು.

ಪಪ್ರಚ್ಛ ಶಬ್ದಶಾಸ್ತ್ರಂ ಚ ಮಹೇಂದ್ರಶ್ಚ ಬೃಹಸ್ಪತಿಂ ॥೨೪॥
ದಿವ್ಯಂ ವರ್ಷಸಹಸ್ರಂ ಚ ಸ ತ್ವಾಂ ದಧ್ಯೌ ಚ ಪುಷ್ಕರೇ ।
ತದಾ ತ್ವತ್ತೋ ವರಂ ಪ್ರಾಪ್ಯ ದಿವ್ಯವರ್ಷಸಹಸ್ರಕಂ ॥೨೫॥
ಉವಾಚ ಶಬ್ದಶಾಸ್ತ್ರಂ ಚ ತದರ್ಥಂ ಚ ಸುರೇಶ್ವರಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹೇಂದ್ರನು ಬೃಹಸ್ಪತಿಗಳನ್ನು ವ್ಯಾಕರಣಶಾಸ್ತ್ರವನ್ನು ಉಪದೇಶಿಸ ಬೇಕೆಂದು ಕೇಳಿಕೊಂಡನು. ಆಗ ಬೃಹಸ್ಪತಿಗಳು ಪುಷ್ಕರಕ್ಷೇತ್ರಕ್ಕೆ ಹೋಗಿ, ಅಲ್ಲಿ ದಿವ್ಯಮಾನದ ಸಹಸ್ರವರ್ಷಗಳ ಕಾಲ ವಾಗ್ದೇವಿಯನ್ನು ಕುರಿತು ತಪಸ್ಸು ಮಾಡಿ, ಆಕೆಯ ವರದಿಂದ ಮಹೇಂದ್ರನಿಗೆ ವ್ಯಾಕರಣಶಾಸ್ತ್ರವನ್ನೂ ಅದರ ಅರ್ಥವನ್ನೂ ವಿವರಿಸಿದನು. ಇದೇ ಐಂದ್ರವ್ಯಾಕರಣವೆಂದು ನವವ್ಯಾಕರಣ ಗಳಲ್ಲಿ ಒಂದಾಗಿ ಪ್ರಸಿದ್ಧವಾಗಿದೆ.

ಅಧ್ಯಾಪಿತಾಶ್ಚ ಯೇ ಶಿಷ್ಯಾಃ ಯೈರಧೀತಂ ಮುನೀಶ್ವರೈಃ ॥೨೬॥
ತೇ ಚ ತಾಂ ಪರಿಸಂಚಿತ್ಯ ಪ್ರಪರ್ತಂತೇ ಸುರೇಶ್ವರೀಂ ।

ವೇದಶಾಸ್ತ್ರಗಳನ್ನು ಅಧ್ಯಯನಮಾಡಿ ಮುನೀಶ್ವರರಾದವರೂ, ಅವರಿಂದ ವಿದ್ಯೆಯನ್ನು ಕಲಿತ ಶಿಷ್ಯರುಗಳೂ ಸಹ, ದೇವೇಶ್ವರಿಯಾದ ಶ್ರೀವಾಗ್ದೇವಿಯನ್ನು ಸೇವಿಸಿ ಧ್ಯಾನಿಸಿಯೇ ವಿದ್ಯಾವಂತರಾದರು.

ತ್ವಂ ಸಂಸ್ತುತಾ ಪೂಜಿತಾ ಚ ಮುನಿಂದ್ರೈರ್ಮನಿಮಾನವೈಃ
॥೨೭॥
ದೈತ್ಯೇಂದ್ರೈಶ್ಚ ಸುರೈಶ್ಚಾಪಿ ಬ್ರಹ್ಮವಿಷ್ಣುಶಿವಾದಿಭಿಃ ।

ಮುನೀಂದ್ರರೂ, ಮನುಗಳೂ, ಮಾನವರೂ, ದೈತ್ಯೇಂದ್ರರೂ ದೇವತೆಗಳೂ ಹೆಚ್ಚೇನು?—ಬ್ರಹ್ಮವಿಷ್ಣುಮಹೇಶ್ವರರೆಂಬ ತ್ರಿಮೂರ್ತಿಗಳೂ ಸಹ ಆವಾಗ್ದೇವಿಯನ್ನು ಪೂಜಿಸಿ ಸ್ತುತಿಸಿಯೇ ಸುಜ್ಞಾನಸಂಪನ್ನರಾಗಿದ್ದಾರೆ.

ಜಡೀಭೂತಃ ಸಹಸ್ರಾಸ್ಯಃ ಪಂಚವಕ್ತ್ರಶ್ಚತುರ್ಮುಖಃ ॥೨೮॥
ಯಾಂ ಸ್ತೋತುಂ ಕಿಮುಹಂ ಸ್ತೌಮಿ ತಾಮೇಕಾಂ ಹೀನಮಾನವಃ ।

ಸಹಸ್ರಮುಖದ ಆದಿಶೇಷನೂ, ಪಂಚಮುಖದ ಪರಮೇಶ್ವರನೂ, ಚತುರ್ಮುಖನಾದ ಬ್ರಹ್ಮನೂ ಸಹ ಶ್ರೀವಾಗೀಶ್ವರಿಯನ್ನು ಸ್ತುತಿಸಲು ಹೊರಟು ಅಶಕ್ತರಾಗಿ ಜಡೀಭೂತರಾದರು. ಹೀಗಿರುವಲ್ಲಿ ಆದ್ವಿತೀಯಳೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಚಾಮಗೋಚರಳೂ ಆಗಿರುವ ಶ್ರೀಶಾರದಾದೇವಿಯನ್ನು ಸ್ತುತಿಸಲು ಹೀನಮಾನವನಾದ ನಾನು ಎಷ್ಟರವನು? ತಾಯೇ, ನನ್ನನ್ನು ಉದ್ಧರಿಸು.

ಇತ್ಯುಕ್ತ್ವಾ ಯಾಜ್ಞವಲ್ಕ್ಯಶ್ಚ ಭಕ್ತಿನಮ್ರಾತ್ಮಕಂಧರಃ ॥೨೯॥
ಪ್ರಣನಾಮ ನಿರಾಹಾರೋ ರುರೋದ ಚ ಮುಹುರ್ಮುಹುಃ ।

ಈ ಪ್ರಕಾರವಾಗಿ ಯಾಜ್ಞವಲ್ಕ್ಯರು ನಿರಾಹಾರರಾಗಿ ಶ್ರೀವಾಗ್ದೇವಿಯ ಮಹಿಮೆಯನ್ನು ವರ್ಣಿಸಿ ಸ್ತುತಿಸಿ, ಭಕ್ತಿಯಿಂದ ಮತ್ತೆ ಮತ್ತೆ ನಮಸ್ಕರಿಸಿ ರೋದಿಸಿದರು.

ಜ್ಯೋತಿರೂಪಾ ಮಹಾಮಾಯಾ ತೇನ ದೃಷ್ಯಾಪ್ಯುವಾಚಟಂ॥೩೦
ಸುಕವೀಂದ್ರೋ ಭವೇತ್ಯುಕ್ತ್ವಾ ವೈಕುಂಠಂ ಚ ಜಗಾಮ ಹ॥

ಮಹಾಮಾಯಾಸ್ವರೂಪಳಾದ ಶ್ರೀವಾಗೀಶ್ವರಿಯು ಜ್ಯೋತೀರೂಪದಿಂದ ಯಾಜ್ಞವಲ್ಕ್ಯರಿಗೆ-ಸುಕವೀಂದ್ರನಾಗು-ಎಂದು ಹರಸಿ, ತನ್ನ ನಿತ್ಯಸ್ವರೂಪಕ್ಕೆ ಹಿಂತಿರುಗಿದಳು.

ಯಾಜ್ಞವಲ್ಕ್ಯ ಕೃತಂ ವಾಣೀಸ್ತೋತ್ರಮೇತತ್ತು ಯಃ ಪಠೇತ್
॥೩೧॥
ಸುಕವೀಂದ್ರೋ ಮಹಾವಾಗ್ಮೀ ಬೃಹಸ್ಪತಿಸಮೋ ಭವೇತ್ ।
ಮಹಾಮೂರ್ಖಶ್ಚ ದುರ್ಬುದ್ಧಿಃ ವರ್ಷಮೇಕಂ ಯದಾ ಪಠೇತ್
॥೩೨॥
ಸಪಂಡಿತಶ್ಚ ಮೇಧಾವೀ ಸುಕವೀಂದ್ರೋ ಭವೇದ್ಧ್ರುವಂ ॥೩೩॥

ಶ್ರೀಯಾಜ್ಞವಲ್ಕ್ಯಮಹರ್ಷಿಗಳು ಮಾಡಿದ ಈ ವಾಣೀದೇವಿಯ ಸ್ತೋತ್ರವನ್ನು ಒಂದು ವರ್ಷಗಳ ಕಾಲ ಶ್ರೀಶಾರದೆಯನ್ನು ನಿಯಮದಿಂದ ಆರಾಧಿಸಿ ಪಠಿಸುವವನು ಮಹಾಮೂರ್ಖನಾಗಿದ್ದರೂ ದುರ್ಬುದ್ಧಿಯವನೂ ಸಹ ಬೃಹಸ್ಪತಿಗೆ ಸಮಾನನಾದ ಮಹಾಪಂಡಿತನೂ ಮೇಧಾವಿಯೂ, ಸುಕವೀಂದ್ರನೂ ನಿಶ್ಚಿತವಾಗಿ ಆಗುವನು.

CC-O. In Public Domain. Digitized by eGangotri

ಇತಿ ಶ್ರೀದೇವೀಭಾಗವತೇ ಮಹಾಪುರಣೇ ನವಮಸ್ಕಂಧೇ
ಯಾಜ್ಞವಲ್ಕ್ಯಕೃತಸರಸ್ವತೀಸ್ತೋತ್ರಕಥನಂ ನಾಮ
ಪಂಚಮೋऽಧ್ಯಾಯಃ ॥

ಶ್ರೀಶಾರದಾದಂಡಕಂ ।

ಶಾರದೇ ಪಾರದೇ ದುಃಖಿವಾರಾಂನಿಧೇಃ, ಪಾರದಾಭಪ್ರಸೂನೇ, ನಾರದಾದಿಸ್ತುತೇ, ಪೂರಿತಾಶೇಷಲೋಕೇಪ್ಸಿತೇ, ಪಾರಿತಾಶೇಷರಕ್ಷೋಗಣೇ, ದಾರಿತಾಹಾರ್ಯಮೋಹಾಕರೇ, ತಾರಿತಾಶೇಷಭಕ್ತಾವಲೇ, ಸರ್ವದೇವಾತ್ಮಿಕೇ, ಸರ್ವವಿಪ್ರಾತ್ಮಿಕೇ, ಸರ್ವಲೋಕಾತ್ಮಿಕೇ, ಸರ್ವಶಾಸ್ತ್ರಾತ್ಮಿಕೇ, ಸರ್ವವಸ್ತ್ವಾತ್ಮಿಕೇ, ಪಾಹಿ ಮಾಂ ಪಾಹಿ ಮಾಂ ಮೋಹಿತಂ ಮಾಯಯಾ ದೇಹಿ ಮೇ ಭೃತ್ಯತಾಂ ತ್ವತ್ತ್ವದಾಂಭೋಜಯೋಃ, ಕೋ ಹಿತಂ ಮೇ ತನೋತ್ಯಂಬಿಕೇ ತ್ವಾಂ ವಿನಾ, ಧೇಹಿ ಶೀಘ್ರೇ ಪದಂ ಮಾಮಕೇ ತಾವಕಂ, ಭಾವಿ ಮನ್ಮಾನಸೇ ಸಂತತಂ, ಭಾರತಿ, ತಾ ಹಿ ಮಾಂ ಸಂಸೃತೇರ್ದುಃಖಿಜನ್ಮಾವನೇಃ, ದೇಹಿ ಮೇ ಸಂವಿದಂ, ಸಮ್ಮುದಂ ಶಾಶ್ವತೀಂ, ನಮಸ್ತೇ ನಮಸ್ತೇ॥

ನಮಃ

ಜಯ ಶೃಂಗಾದ್ರಿನಿಲಯೇ ಜಯ ಶೃಂಗಾರದೇವತೇ ॥
ಜಯ ತುಂಗಾತಟಾವಾಸೇ ಜಯ ಭಂಗಾವಹೇ ಶುಚಃ ॥

———

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀಶಾರದಾಜಗದ್ಗುರುಪೀಠಾಧೀಶ್ವರ ಶ್ರೀಮದಭಿನವವಿದ್ಯಾತೀರ್ಥಮಹಾಸನ್ನಿಧಾನ ಮತ್ತು ಇವರ ಕರಕಮಲ ಸಂಜಾತರಾಗಿರುವ ಶ್ರೀಭಾರತೀತೀರ್ಥಸನ್ನಿಧಾನ-ಇವರುಗಳ ಲೋಕಾನುಗ್ರಹರೂಪವಾದ ಆದೇಶಾನುಸಾರ ಶ್ರೀಶಾಂಕರತತ್ತ್ವಜ್ಞಾನಪ್ರಚಾರದ ಗ್ರಂಥಗಳು:-

ಶ್ರೀಶೃಂಗಗಿರಿ ಕವಿ ನರಸಿಂಹಶರ್ಮಾ

'ಆಪ್ತವೃತ್ತಾಶ್ರಮ'

ನಂಜನಗೂಡು, ಇವರ

ಆರ್ಷತಾತ್ಪರ್ಯವಿವರಣಸಹಿತ,

ವೇದಾಂತಸಿದ್ಧಾಂತವನ್ನು ತಿಳಿಯಬಯಸುವ ಜಿಜ್ಞಾಸುಗಳು ಶ್ರೀಶೃಂಗಗಿರಿಜಗದ್ಗುರುಗಳವರ ಮನ್ನಣೆಗೆ ಪಾತ್ರವಾಗಿರುವ ಈ ಕನ್ನಡ ಗ್ರಂಥಗಳನ್ನು ಅಧ್ಯಯನಮಾಡತಕ್ಕದ್ದು –

	ರೂ.	ಪೈ
ವೇದಾಂತಸಿದ್ಧಾಂತ	20	00
ಶ್ರೀಸುರೇಶ್ವರಾಚಾರ್ಯರು	5	00
ಶ್ರೀಭಗವತ್ಪಾದರ ದಿವ್ಯಚರಿತ್ರೆ	3	00
ಶ್ರೀಶಾರದಾಮಹಿಮಾದರ್ಶ	3	00
ಶ್ರೀಶೃಂಗಗಿರಿ ಶ್ರೀಶಾರದಾಜಗದ್ಗುರುಪೀಠಪೈಶಿಷ್ಟ್ಯಂ	3	00
ಶ್ರೀಶಂಕರಭಗವತ್ಪಾದರ ಅಷ್ಟೋತ್ತರಸಹಸ್ರ, ಅಷ್ಟೋತ್ತರಶತನಾಮಾವಳಿಃ ; ಶ್ರೀಸುರೇಶ್ವರಾಚಾರ್ಯಾಷ್ಟೋತ್ತರಶತನಾಮಾವಳಿಃ	3	30
ಭರ್ತೃಹರಿಕವೀಂದ್ರರ ನೀತಿಶತಕಂ	5	00

ಗ್ರಂಥಗಳು ಇಲ್ಲಿ ಮೊರೆಯಿತ್ತಪೆ–

ಎ. ಸುಬ್ರಹ್ಮಣ್ಯಶಾಸ್ತ್ರೀ

ಫೋಟೋ ಮತ್ತು ಪುಸ್ತಕ ವ್ಯಾಪಾರಿ,

ಶ್ರೀ ಶೃಂಗಗಿರಿ ಮಠ

ಶೃಂಗೇರಿ–೫೭೭೪೧೫

ಚಿಕ್ಕಮಗಳೂರುಜಿಲ್ಲಾ ಕರ್ನಾಟಕರಾಜ್ಯ

Sri Vidyabharathi Book Centre, Sringeri